ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೦-೧೧ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಚಾಮರಾಜನಗರ ಜಿಲ್ಲೆಯ ಜನಪದ ಕಲೆಗಳು - ಒಂದು ಅಧ್ಯಯನ

ನಿಬಂಧಕಾರರು
ಮಹದೇವಕುಮಾರ್.ಎ.ಎಂ
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು
ಡಾ. ಎ.ಆರ್. ಮದನಕುಮಾರ್
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು
ಮಂಡ್ಯ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೦-೧೧

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೦–೧೧ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಚಾಮರಾಜನಗರ ಜಿಲ್ಲೆಯ ಜನಪದ ಕಲೆಗಳು – ಒಂದು ಅಧ್ಯಯನ

ನಿಬಂಧಕಾರರು

ಮಹದೇವಕುಮಾರ್.ಎ.ಎಂ.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎ.ಆರ್.ಮದನಕುಮಾರ್

ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು
ಮಂಡ್ಯ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು
೨೦೧೦–೧೧

ದೃಢೀಕರಣ ಪತ್ರ

೨೦೧೦-೧೧ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00481**ರ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ ಮಹದೇವಕುಮಾರ್.ಎ.ಎಂ. ಅವರು ನನ್ನ ಮಾರ್ಗದರ್ಶನದಲ್ಲಿ **"ಚಾಮರಾಜನಗರ ಜಿಲ್ಲೆಯ ಜನಪದ ಕಲೆಗಳು - ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ದಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಮೈಸೂರು
೩೧-೦೫-೨೦೧೧

(ಡಾ. ಎ.ಆರ್.ಮದನಕುಮಾರ್)
ಸಹಪ್ರಾಧ್ಯಾಪಕರು,
ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ.

ಅಭ್ಯರ್ಥಿಯ ಘೋಷಣಾ ಪತ್ರ

"ಚಾಮರಾಜನಗರ ಜಿಲ್ಲೆಯ ಜನಪದ ಕಲೆಗಳು – ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ೨೦೧೦–೧೧ನೇ ಸಾಲಿನ ಕನ್ನಡ ಎಂ.ಫಿಲ್. ಪದವಿಯ ಪರೀಕ್ಷೆಗಾಗಿ ಕ್ರಮಸಂಖ್ಯೆ **KVTMKS-00481**ರ ವಿದ್ಯಾರ್ಥಿಯಾದ ನಾನು ಡಾ. ಎ.ಆರ್.ಮದನಕುಮಾರ್, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಎ.ಎಂ. ಮಹದೇವ್

ಮೈಸೂರು
ದಿನಾಂಕ: ೩೧–೦೫–೨೦೧೧

(ಎ.ಎಂ.ಮಹದೇವಕುಮಾರ್)
೨೦೧೦–೧೧ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಚಾಮರಾಜನಗರ ಜಿಲ್ಲೆಯ ಜನಪದ ಕಲೆಗಳು – ಒಂದು ಅಧ್ಯಯನ

ಪರಿವಿಡಿ

*****

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರತಿನಿತ್ಯವೂ ಪ್ರತಿಕ್ಷಣವೂ ನಿಸರ್ಗದ ಮಡಿಲಲ್ಲಿ ನಿರಂತರವಾಗಿ ಶ್ರಮವಹಿಸಿ ದುಡಿಯುವ ಜನತೆ ಆ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ನೆಮ್ಮದಿಯ ಉಸಿರುಬಿಡಲು ಹಬ್ಬ, ಹರಿದಿನ, ತೇರು, ಉತ್ಸವ, ಜಾತ್ರೆ, ಮದುವೆ ಮೊದಲಾದ ಸಾಮೂಹಿಕ ಆಚರಣೆಗಳನ್ನು ಕಂಡುಕೊಂಡರು. ಈ ಆಚರಣೆಗಳಲ್ಲಿ ಹುಟ್ಟುಕೊಂಡಿದ್ದ ಸಂತೋಷದ ಜೀವನವನ್ನು ನಡೆಸಬೇಕು ಎಂಬ ಉದ್ದೇಶದಿಂದ ಈ ವಿಧಿಗಳಲ್ಲಿ ಜಾನಪದ ಭಾಗವೇ ಆಗಿರುವುದರಿಂದ ಇವುಗಳಲ್ಲಿ ವೈಯಕ್ತಿಕ ಕಾಳಜಿಗಿಂತ ಸಮಷ್ಠಿಯ ಹಿತಾಸಕ್ತಿಯ ಕಡೆಗೆ ಒಲವು ಮೂಡಿತು. ಹೀಗೆ ಹಬ್ಬ, ಹರಿದಿನ, ಮದುವೆ ಮುಂತಾದ ಸಂದರ್ಭದಲ್ಲಿ ಬಳಸುತ್ತಿದ್ದ ವಾದ್ಯಗಳೇ ಜಾನಪದ ಕಲೆಗಳೆಂದು ಹೆಸರು ಪಡೆದವು. ಇವುಗಳ ಜೊತೆಗೆ ಜಾನಪದ ಮಹಾಪುರುಷ ಕಥೆಗಳನ್ನು ಕಟ್ಟಿ ಹಾಡುತ್ತಿದ್ದ ಜನರು ಬಳಸುತ್ತಿದ್ದ ಹಾಡುವ ಸಾಮಾಗ್ರಿಗಳು ಜನಪದ ವಸ್ತುಗಳಾದವು ಹಾಗೂ ಇಂತಹ ಸಂದರ್ಭದಲ್ಲಿ ಮುಖ್ಯವಾದ ವೇಷಧರಿಸಿ ನಡೆಯುತ್ತಿದ್ದ ನೃತ್ಯಗಳು ಜಾನಪದ ಕಲೆಗಳಾದವು. ಈ ಕಲೆಗಳು ಶ್ರಮಸಂಸ್ಕೃತಿಯ ಜನರ ಬದುಕಿನ ಅವಿಭಾಜ್ಯ ಅಂಗಗಳಾಗಿ ಉಳಿದುಬಂದವು. ಸಂಸ್ಕೃತಿಯ ತವರೂರಾದ ಭಾರತ ಇಂತಹ ಜನಪದಕಲೆಗಳ ಆಗರವಾಗಿದೆ. ವೈವಿಧ್ಯಮಯ ಬದುಕಿನ ಜನರು ವೈವಿಧ್ಯಮಯ ಸಂಸ್ಕೃತಿಯನ್ನು ಅನುಸರಿಸುತ್ತದೆ. ಈ ಎಲ್ಲ ರೀತಿಯ ಸಂಸ್ಕೃತಿಗಳಲ್ಲಿ ಜನಪದ ಸಾಹಿತ್ಯ, ಕಲೆ, ಸಂಗೀತ ಹಾಸುಹೊಕ್ಕಾಗಿದೆ. ಅದೇ ರೀತಿ ಕರ್ನಾಟಕವೂ ಜನಪದ ಮಹಾಪುರುಷರ ಆವಾಸಸ್ಥಾನವಾಗಿದ್ದು ಜನಪದ ಸಂಸ್ಕೃತಿಯ ತವರೂರಾಗಿದೆ. ಇಲ್ಲಿ ಬದುಕಿಬಾಳಿದ ಮಹಾಪುರುಷರಾದ ಮಹದೇಶ್ವರ, ಮಂಟೇಸ್ವಾಮಿ, ಸಿದ್ದಾಪ್ಪಾಜಿ, ರಾಚಪ್ಪಾಜಿ, ಜುಂಜಪ್ಪ ಮುಂತಾದವರ ಬದುಕನ್ನು ಕಥೆಯಾಗಿ ಕಟ್ಟಿದ ಜನರು ಅವರನ್ನು ತಮ್ಮ ಮನಸ್ಸಿನಲ್ಲಿ ಹಾಗೂ ನಾಡಿನಲ್ಲಿ ಚಿರಸ್ಥಾಯಿಯಾಗಿಸಿದರು.

ಜಾನಪದ ಜನಪದರ ಮೂಲಸ್ಥಿತಿಗಳನ್ನು ಆಚಾರ ವ್ಯವಹಾರಗಳನ್ನು ನಂಬಿಕೆ, ನಡಾವಳಿಕೆಗಳನ್ನು ಅವುಗಳ ಹಾಸು-ಬಿಡಿಸುನ್ನು ಅರಿಯಲು ಇರುವ ಬಹುಮುಖ್ಯವಾದ ಸಾಧನವಾಗಿದೆ. ಅದರಲ್ಲಿ ಅದರ ಎಲ್ಲಾ ಸಹಜ ಪ್ರವೃತ್ತಿಗಳೂ ಸ್ಪಷ್ಟವಾಗಿ ಅಭಿವ್ಯಕ್ತ-ಗೊಂಡಿರುತ್ತದೆ.

"ಮಾನವನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದವು ಅತ್ಯಂತ ಮಹತ್ತರವಾದ ವಿಷಯವಾಗಿದೆ. ಈ ಐತಿಹಾಸಿಕ ವಿಜ್ಞಾನವು ಒಂದು ಊಹೆಯನ್ನು ಅವಲಂಬಿಸಿರುವ

ಶಾಸ್ತ್ರವಾಗಿರದೆ, ವಾಸ್ತವಿಕ ಆಧಾರಗಳ ಮೇಲೆ ಬೆಳೆಯುತ್ತಿರುವ ಅಧ್ಯಯನ ವಿಷಯವಾಗಿದೆ"[೧]

ಚಾಮರಾಜನಗರಜಿಲ್ಲೆ ವಿಶೇಷವಾಗಿ ಜನಪದ ಮಹಾಪುರುಷರಿಗೆ ಪ್ರಿಯವಾದ ಸ್ಥಳ ಇಲ್ಲಿನ ರೈತಾಪಿವರ್ಗ ಜನಪದ ದಾರ್ಶನಿಕರನ್ನು ತಮ್ಮ ಮನೆದೇವರಾಗಿ ಸ್ವೀಕರಿಸಿ ಪೂಜಿಸುತ್ತಾರೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಪ್ರತಿಯೊಂದು ಕುಟುಂಬವೂ ಒಬ್ಬ ಜನಪದ ಮಹಾಪುರುಷನ ಕುಲದ ದೀಕ್ಷೆಯನ್ನು ಪಡೆದು ಬದುಕುತ್ತದೆ. ಈ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆ ಜನಪದ ಕಲೆ ಹುಟ್ಟಿಗೆ ಕಾರಣವಾದ ಜಿಲ್ಲೆಯಾಗಿದೆ. ಇಂತಹ ಜನಪದ ಕಲೆಗಳನ್ನು ನನ್ನ ಈ ಅಧ್ಯಯನದಲ್ಲಿ ಅನೇಕ ಅಧ್ಯಾಯಗಳ ಮೂಲಕ ಹಲವಾರು ಕಲೆಗಳ ಕಲಾವಿದರ ಸ್ಥಾನಮಾನಗಳನ್ನು ಗುರುತಿಸುವ ಕೆಲಸಗಳನ್ನು ಈ ಪ್ರಬಂಧದಲ್ಲಿ ಕಾಣಬಹುದು.

ಕರ್ನಾಟಕದ ಜನಪದ ಕಲೆಗಳಲ್ಲಿ ತನ್ನದೇ ಆದಂತಹ ವಿಶಿಷ್ಟವಾದಂತಹ ಸಾಹಿತ್ಯ, ಕಲೆ, ಸಂಸ್ಕೃತಿ, ಪರಂಪರೆಗಳ ತವರೂರು. ಕರ್ನಾಟಕದಾದ್ಯಂತ ಜನಪದ ಕ್ಷೇತ್ರದಲ್ಲಿ ನಮ್ಮ ಜಿಲ್ಲೆಯ ಕೊಡುಗೆಯು ಅತ್ಯಂತ ಮಹತ್ವದ್ದು ಮತ್ತು ವಿಶಿಷ್ಟವಾದುದು. ಚಾಮರಾಜನಗರ ಜಿಲ್ಲೆಯಲ್ಲಿರುವ ಕೊಳ್ಳೇಗಾಲ, ಯಳಂದೂರು, ಚಾಮರಾಜನಗರ, ಗುಂಡ್ಲುಪೇಟೆ ತಾಲ್ಲೂಕುಗಳು ಹಲವು ಚಾರಿತ್ರಿಕವಾದಂತಹ ಹಿನ್ನೆಲೆಯಲ್ಲಿ ಜಾನಪದ ಕಲೆಗಳು ಮತ್ತು ಸಾಹಿತ್ಯದ ಕೂಟವಾಗಿರುವುದು ಸ್ಪಷ್ಟವಾಗಿದೆ.

ರಾಜ್ಯದಲ್ಲಿ ಹಾಗೂ ಇಡೀ ಭಾರತದಲ್ಲಿ ಮುಖ್ಯವಾದಂತಹ ಹಲವು ರೀತಿಯ ಜಾನಪದ ಪರಂಪರೆ ಹಾಗೂ ವಿಭಿನ್ನ ಸಾಂಸ್ಕೃತಿಕ ಪಂಥಗಳು ಈ ಜಿಲ್ಲೆಯಲ್ಲಿನ ವಿವಿಧ ಕಡೆಗಳಲ್ಲಿ ಪ್ರಚಲಿತವಾಗಿ ಇಲ್ಲೇ ತಮ್ಮ ನೆಲೆಗಳನ್ನು ಕಂಡುಕೊಂಡಿದೆ.

ಮೊದಲಿಗೆ ಚಾಮರಾಜನಗರ ಜಿಲ್ಲೆಗೆ ಕರ್ನಾಟಕ ರಾಜ್ಯದ ಕನ್ನಡ ಜಾನಪದ ಸಾಹಿತ್ಯ ಕ್ಷೇತ್ರಕ್ಕೆ ಮೌಖಿಕ ಮಹಾಕಾವ್ಯಗಳನ್ನು ನೀಡಿರುವಂತಹ ಹೆಗ್ಗಳಿಕೆಯು ಸಹ ಬಂದಿದೆ. ಈ ರೀತಿಯಲ್ಲಿ ವಿಶ್ವದ ಸುದೀರ್ಘ ಮೌಖಿಕ ಮಹಾಕಾವ್ಯವಾದಂತಹ 'ಫಿನ್‌ಲ್ಯಾಂಡಿನ ಕಲೇವಾಲ' ಇಡೀ ಜಗತ್ತಿನ ದೊಡ್ಡ ಹಾಗೂ ದೊಡ್ಡ ಜನಪದ ಕಾವ್ಯವಾಗಿರುವುದು ಸ್ಪಷ್ಟ.

ಈ ದಿಸೆಯಲ್ಲಿ ಕರ್ನಾಟಕದ ಕನ್ನಡದಲ್ಲಿರುವ ಜಾನಪದ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವಂತಹ ಮೌಖಿಕ ಮಹಾಕಾವ್ಯಗಳೆಂದರೆ 'ಮಲೆಮಹದೇಶ್ವರ ಮಹಾಕಾವ್ಯ ಹಾಗೂ ಮಂಟೇಸ್ವಾಮಿ ಮಹಾಕಾವ್ಯಗಳು'. ಇದೇ ಹಾದಿಯಲ್ಲಿ ನಾವು ನೋಡಿದಾಗ

---

೧. ಡಾ. ಹಾ.ಮಾ.ನಾಯಕ, ಜಾನಪದ ಸ್ವರೂಪ, ಪುಟ. ೧೬.

ನಂಜುಂಡೇಶ್ವರ ಕಾವ್ಯ, ಮೈಸೂರು ಚಾಮುಂಡಿಕಾವ್ಯ, ಮುಡುಕುತೊರೆ ಮಲ್ಲಯ್ಯಕಾವ್ಯ, ಬಿಳಿಗಿರಿರಂಗಯ್ಯನ ಕಾವ್ಯ, ಮೈಲಾಳನ ರಾಮನ ಕಾವ್ಯ ಮೊದಲಾದ ವಿಭಿನ್ನ ರೀತಿಯಲ್ಲಿ ವಿಭಿನ್ನ ಕಥನ ಕಾವ್ಯಗಳು ಮತ್ತು ಅವುಗಳಿಗೆ ಪೂರಕವಾಗಿರುವ ಜನಪದ ಕಲೆಗಳನ್ನು ಚಾಮರಾಜನಗರಜಿಲ್ಲೆಯ ತಾಲ್ಲೂಕಿನ ಬಹುಜನ ಸಮುದಾಯಗಳ ಗಾಯಕರು, ಕಲಾವಿದರು ಕಟ್ಟಿ ಅದನ್ನು ರಾಜ್ಯ, ದೇಶ ಹಾಗೂ ವಿಶ್ವಮಟ್ಟದ ಜಾನಪದ ಕ್ಷೇತ್ರಕ್ಕೆ ಮಲೆಮಹದೇಶ್ವರನ ಮಹಾಕಾವ್ಯ, ಮಂಟೇಸ್ವಾಮಿ ಮಹಾಕಾವ್ಯಗಳಲ್ಲಿ ಬರುವಂತಹ ಹತ್ತು ಕಥನ ಕಾವ್ಯಗಳನ್ನು ನೀಲಗಾರ, ಕಂಸಾಳೆ, ಗೊರವರ ಕುಣಿತ, ವೀರಗಾಸೆ, ನಂದೀಧ್ವಜ, ಸೋಬಾನೆ ಪದ, ತಮಟೆ ಪರಂಪರೆಗಳನ್ನು ಕೊಟ್ಟಿರುವ ಹೆಗ್ಗಳಿಕೆ ಇವೆ.

ಲಿಂಗಯ್ಯ, ಚೆನ್ನಯ್ಯರು ಕಂಸಾಳೆಯ ಪರಂಪರೆಯ ಕರ್ತೃ ಮಲೆಮಾದೇಶ್ವರ-ರಂತಹ ಹಲವು ಸಿದ್ದಶರಣರು, ವಚನಚಳುವಳಿಯ ಮೂಲಕರ್ತೃಗಳು ಈ ಜಿಲ್ಲೆಯಲ್ಲಿ ತಿರುಗಾಡಿ ನೆಲೆನಿಲ್ಲುವ ಮೂಲಕ ಈ ಕ್ಷೇತ್ರಕ್ಕೆ ಜಾನಪದ ಮಹತ್ವವನ್ನು ತಂದುಕೊಟ್ಟಿದ್ದಾರೆ. ಲಿಂಗಯ್ಯ, ಚನ್ನಯ್ಯ, ಕಂಸಾಳೆಯ ಪರಂಪರೆಯ ಕರ್ತೃ ಮಲೆಮಹದೇಶ್ವರರಂತಹ ಹಲವು ಸಿದ್ದಶರಣರು, ವಚನ ಚಳುವಳಿಯ ಮೂಲ-ಕರ್ತೃಗಳು, ಈ ಜಿಲ್ಲೆಯಲ್ಲಿ ತಿರುಗಾಡಿ ನೆಲೆನಿಲ್ಲುವ ಮೂಲಕ ಈ ಕ್ಷೇತ್ರಕ್ಕೆ ಜಾನಪದ ಮಹತ್ವವನ್ನು ತಂದುಕೊಟ್ಟಿದ್ದಾರೆ. ಇಂದಿನ ಈ ಜಾನಪದ ಕಲಾವಿದರ ಮತ್ತು ಜನಪದ ಕಲೆಗಳ ಕುರಿತು ದಾಖಲಿಸುವ ನೋಟಗಳನ್ನು ಈ ನಿಟ್ಟಿನಲ್ಲಿ ದಾಖಲಿಸುವಂತಹ ಕಾರ್ಯಕ್ರಮಗಳನ್ನು ಹೊರತರುವಲ್ಲಿ ಈವೊಂದು ಕಾರ್ಯಕ್ರಮವು ಹಿತವೆನಿಸಿದೆ.

ಇಡೀ ಜಿಲ್ಲೆಯಲ್ಲಿನ ಜನಪದ ಕಲೆಗಳ ಅಧ್ಯಯನಕ್ಕೆ ಬಳಸುವಂತಹ ಸಂದರ್ಭದಲ್ಲಿ ಇಡೀ ಅನಕ್ಷರಸ್ಥ, ಬಹುಸಂಖ್ಯಾತ ಸಮುದಾಯಗಳ ಮೂಲಕ ಈ ಮೌಖಿಕ ಇತಿಹಾಸವನ್ನು ನಾಲಿಗೆ ಮತ್ತು ಮೈಮೇಲೆ ನಲಿದಾಡಿ ಸುತ್ತು ಬಳಸಿ ಬೆಳೆಸುವ ಕಲಾವಿದರು, ಕಾಲಗರ್ಭದಲ್ಲಿ ಕಳೆದು ಹೋಗದಂತೆ ದಾಖಲಿಸುವಂತಹ ಕೆಲಸವು ಸಹ ಇದಾಗಿದೆ. ಚಾಮರಾಜನಗರ ಜಿಲ್ಲೆಯ ಹಲವು ಪ್ರಮುಖವಾದಂತಹ ಜಾನಪದ ಕಲೆ ಮತ್ತು ಕಲಾವಿದರು ಬರುವಂತಹ ಸಂದರ್ಭದಲ್ಲಿ ನೀಲಗಾರ ತಂಬೂರಿ ಹಾಡುಗಾರಿಕೆ ಕಂಸಾಳೆಯ ಹಾಡುಗಾರಿಕೆ ಮತ್ತು ಬೀಸು ಕಂಸಾಳೆ ಕುಣಿತ ತಮಟೆವಾದನ, ಮುಖವೀಣೆ, ನಾದಸ್ವರ ವಾಲಗ, ತತ್ವಪದಗಾರರು, ಸೋಬಾನೆ ಹಾಡುಗಾರರು, ಕೊಳಲುವಾದಕರು, ಜಾನಪದ ರಂಗಭೂಮಿ ಕಲಾವಿದರು, ಅಪರೂಪವಾಗುತ್ತಿರುವ ಸೂತ್ರದ ಗೊಂಬೆಯಾಡಿಸುವವರು, ಗಾರುಡಿಗೊಂಬೆ

ಕುಣಿಸುವವರು, ಕೊಂಬುಕಹಳೆವಾದ್ಯ ಮಾಡುವರು. ಹೀಗೆ ಹಲವಾರು ಕಲೆ ಮತ್ತು ಕಲಾವಿದರುಗಳಿಂದ ಚಾಮರಾಜನಗರಜಿಲ್ಲೆಯ ಸಮೃದ್ಧ ಜನಪದ ಪರಂಪರೆಗಳನ್ನು ಹೊಂದಿದೆ.

ಈ ನಿಟ್ಟಿನಲ್ಲಿ ಚಾಮರಾಜನಗರಜಿಲ್ಲೆಯ ಜನಪದ ಕಲೆಗಳು ಮತ್ತು ಅದರ ನಡುವೆ ಬೆಸೆದುಕೊಂಡಿರುವಂತಹ ಜಾನಪದ ಕಲಾವಿದರ ದಂಡು, ಅವರ ಮೇರುಪ್ರತಿಭೆ, ವಂಶಪರಂಪರೆಯ ಮೂಲಕ ದಾಖಲಿಸಿರುವಂತಹ ಕುಣಿತಗಳು, ನೃತ್ಯಗಳು, ಹಾಡುಗಾರಿಕೆ ಮತ್ತು ಅವರ ಅಧ್ಯಯನ, ಅವಲೋಕನ, ಆಲೋಚನೆಗಳಿಗೆ ಮೂಲನೆಲೆಯಾಗಿವೆ. ನಾವು ಕಲಾಮುಕುಟಗಳಂತಹ ಜನಪದ ಕಲೆಯ ಸೊಬಗನ್ನು ನಾವು ಈ ಜಿಲ್ಲೆಯಲ್ಲಿ ನೋಡಬಹುದಾಗಿದೆ.

ಇದಕ್ಕೆ ಸಂಬಂಧಿಸಿದಂತೆ ಮೌಖಿಕ ರೂಪದ ಬಹುಜನರ ಇತಿಹಾಸವಿದ್ದು ಈ ಜನಪದಕಲೆಗಳು ಸೀಮಿತ ಸಮುದಾಯ ವಶಕ್ಕೆ ಸೇರಿದ್ದಾಗಿದ್ದು ಅದು ಒಂದು ಕಾಲಘಟ್ಟದ ಸಾಮಾಜಿಕ, ಧಾರ್ಮಿಕವಾದಂತಹ ಸಾಂಸ್ಕೃತಿಕ ಇತಿಹಾಸದಲ್ಲಿ ಆಗುತ್ತದೆ. ಈ ಸಂದರ್ಭದಲ್ಲಿ ಜಿಲ್ಲೆಯ ಕಲೆಗಳು ಮತ್ತು ಕಲಾವಿದರ ಜೀವನ ಸಾಧನೆ ಮಾಹಿತಿಯನ್ನು ನಾವು ಮನಗಾಣಬಹುದಾಗಿದೆ.

ಅಧ್ಯಾಯ–೨

ಜನಪದ ಕಲೆಗಳ ಹುಟ್ಟು ಮತ್ತು ಬೆಳವಣಿಗೆ

ಜಗತ್ತಿನಲ್ಲಿ ಸೃಷ್ಟಿಯಾದ ಜೀವವೈವಿಧ್ಯತೆಯಲ್ಲಿ ಮಾನವನದು ವಿಶಿಷ್ಟವಾದ ಸ್ಥಾನ. ಮಂಗನಿಂದ ಮಾನವ ಎಂಬ ಮಾತಿನಂತೆ ವಿವಿಧ ಸ್ತರಗಳಲ್ಲಿ ಪರಿವರ್ತನೆ–ಯನ್ನು ಪಡೆದ ಈತನದು ಕ್ರಮಬದ್ಧವಾದ ಬೆಳವಣಿಗೆಯಾಗಿದೆ. ಹೀಗೆ ಬೆಳೆದುಬಂದ ಮಾನವ ಇಂದು ಸಕಲ ಜೀವಿಗಳಿಗೂ ಮುಖ್ಯಸ್ಥನಾಗಿದ್ದಾನೆ. ಮಾನವನ ಈ ಬೆಳವಣಿಗೆಯನ್ನು ಅಭ್ಯಸಿಸುವುದು ಮಾನವಶಾಸ್ತ್ರ. ಶರೀರ ಸಂಬಂಧವಾದ ವಿಷಯಗಳನ್ನು ಬಿಟ್ಟು ಸ್ಥೂಲವಾಗಿ ಮಾನವನ ಸಮಸ್ತ ಕಾರ್ಯಚಟುವಟಿಕೆಗಳನ್ನು 'ಸಂಸ್ಕೃತಿ' ಎನ್ನಬಹುದು. ಕಲಿಕೆಯ ವಿವಿಧ ಮೂಲಗಳಿಂದ ತಲೆಮಾರಿನಿಂದ ತಲೆಮಾರಿಗೆ ತಾನು ಅಂತರ್ಗತಗೊಳಿಸಿಕೊಂಡು ಬಂದ ವಿಶಿಷ್ಟವಾದ ವಿಷಯಗಳು ಸಾಂಸ್ಕೃತಿಕ ಮಾನವಶಾಸ್ತ್ರದಲ್ಲಿ ಸಮಾವೇಶಗೊಳ್ಳುತ್ತವೆ.

ಸಂಸ್ಕೃತಿಯೆಂದರೆ "ಮಾನವನು ಗಳಿಸಿಕೊಂಡ ಸಮಸ್ತ ವಿಷಯಗಳನ್ನು ಸಂಸ್ಕೃತಿ ತನ್ನ ವಿಶಾಲ ಅರ್ಥದಲ್ಲಿ ಒಳಗೊಳ್ಳುತ್ತದೆ. ನಮ್ಮ ದಿನನಿತ್ಯದ ರೀತಿನೀತಿ, ಆಚಾರ, ವಿಚಾರ, ಕಲೆ, ಸಾಹಿತ್ಯ ಧರ್ಮ ಮನರಂಜನೆ ಮುಂತಾದವುಗಳ ವಲಯಗಳಲ್ಲಿ ಸಂಸ್ಕೃತಿಯ ಸೆರೆಯನ್ನು ಕಾಣಬಹುದು".[೧] ಮಾನವ ತನ್ನ ವಿಕಾಸದ ದಾರಿಯಲ್ಲಿ ಕ್ರಮಿಸುವಾಗ ಹಂತಹಂತವಾಗಿ ತನ್ನ ಬದುಕಿನ ಅವಶ್ಯಕ ಎನಿಸುವ ಹೊಸ ಹೊಸ ವಸ್ತು ವೈವಿಧ್ಯತೆಯನ್ನು ಕಂಡುಕೊಳ್ಳುತ್ತ ಹೊರಟ ಆತನಿಗೆ ಭಾಷೆಗಿಂತ ಮೊದಲು ಚಿತ್ರಸಂಕೇತಗಳು, ಭಾಷೆ, ಬೆಂಕಿಯ ಆವಿಷ್ಕಾರ, ಬೇಟೆಯಾಡಿ ಬದುಕುತ್ತಿದ್ದವನು ಬೇಸಾಯ ರೂಢಿಸಿಕೊಂಡಿದ್ದು, ಆತನ ಹಾಡು, ಕುಣಿತ, ಪ್ರಕೃತಿಯ ದೈತ್ಯಶಕ್ತಿಯ ಎದುರಿನಲ್ಲಿ ಅಂಜಿ, ಅಳುಕಿ, ಹೋರಾಡಿ ಬೆಳೆದು ಬಂದಾಗ ರೂಢಿಸಿಕೊಂಡ ಸಂಪ್ರದಾಯ, ನಂಬಿಕೆ, ಉಪಾಸನೆ ಆಚಾರಗಳು, ಕಲೆಗಳು ಅಪಾರವಾದವು. ಮಾನವನ ಉದಯದೊಡನೆ ಆತನ ಚಟುವಟಿಕೆಗಳು ಉದಯ–ವಾದವು. ಅವನು ನಡೆದ ದಾರಿ, ನುಡಿದ ಹಾಡು, ಪಡೆದ ಸಾಧನ ಸಲಕರಣೆ, ಕಂಡುಂಡ ಅನುಭವ, ಎಲ್ಲವೂ ಕಾಲ ಬೆಳೆದಂತೆ, ಸಂಸ್ಕೃತಿಯ ವಿಕಾಸವಾದಂತೆ, ಜ್ಞಾನಸಾಧನೆ ಸಂವರ್ಧನೆಗೊಂಡಂತೆ ತಾವು ಬೆಳೆದುವು. ಅವನ ಬದುಕಿನೊಡನೆ ಒಂದಲ್ಲ ಒಂದು ರೀತಿಯಲ್ಲಿ ಅವಿನಾ ಸಂಬಂಧವನ್ನು ಉಳಿಸಿಕೊಂಡವು. ಇದನ್ನೇ ನಾವು "ಜನಪದ ಸಂಸ್ಕೃತಿ" ಎಂದು ಗುರುತಿಸುವುದು. ಇದು ಗುಂಪಿನಿಂದ

---

೧. ದಕ್ಷಿಣ ಕರ್ನಾಟಕ ಜಾನಪದ ಕಾವ್ಯಪ್ರಕಾರಗಳು, ಜೀ.ಶಂ.ಪರಮಶಿವಯ್ಯ, ಪು. ೩.

ಸ್ವೀಕರಿಸಲ್ಪಟ್ಟ ಸಂಪ್ರದಾಯ, ನಂಬಿಕೆ, ಹಾಡು ಕುಶಲ, ಕೈಗಾರಿಕೆ ಮುಂತಾದವುಗಳ ತಿಳಿದು ಅಥವಾ ಜ್ಞಾನಕ್ಕೆ ಬದ್ಧವಾಗಿರುತ್ತದೆ. ಜನಪದ ಸಂಸ್ಕೃತಿ ಸ್ವಚ್ಛಂದವಾಗಿ ಬೆಳೆದು ಅರಣ್ಯದಂತೆ ಹಚ್ಚ ಹಸಿರಾಗಿ ನಿತ್ಯಸುಂದರವಾಗಿ ತಾನೇ ತಾನಾಗಿ ರಾರಾಜಿಸುತ್ತದೆ. ಹೀಗೆ ಪ್ರಕೃತಿಯಲ್ಲಿ ಕಾಣಿಸಿಕೊಳ್ಳುವ ಮಳೆ, ಗುಡುಗು, ಮಿಂಚು, ಇವುಗಳ ಬಗೆಗೆ ತನ್ನದೇ ಆದ ನಿಲುವುಗಳನ್ನು ಹೊಂದಿದ ಮಾನವ ಆರ್ಭಟಗಳಲ್ಲಿ ಬೆಳಕಿನಲ್ಲಿ ಕಾಣದಶಕ್ತಿಯ ಕೈವಾಡವಿದೆಯೆಂದು ಭಾವಿಸಿದ. ಈ ಅಗೋಚರ ಶಕ್ತಿಯನ್ನು ಪೂಜಿಸಿಕೊಂಡು ಬಂದ ಮನುಷ್ಯ ತಿಳಿದೋ ತಿಳಿಯದೆಯೇ ಹಲವಾರು ಆಚರಣೆಗಳನ್ನು ಮಾಡುತ್ತಲೇ ಬಂದಿದ್ದಾನೆ. ಆರಂಭದಿಂದಲೂ ಆತ ನಡೆಸುತ್ತಿದ್ದ ಆಚರಣೆ, ಪದ್ಧತಿಗಳಲ್ಲೆಲ್ಲಾ ಧಾರ್ಮಿಕ ಭಾವನೆಯೇ ಪ್ರೇರಕವಾಗಿತ್ತು, ಹಿನ್ನೆಲೆಯಾಗಿತ್ತು.

ಈ ರೀತಿಯಲ್ಲಿ ತನ್ನ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹರಿದುಬಂದಂತಹ ಹಲವಾರು ಜನಪದ ಕಲೆಗಳು ತನ್ನದೇ ಆದಂತಹ ಹಿನ್ನೆಲೆಯಲ್ಲಿ ಇಂದಿಗೂ ಕೂಡ ಭಾರತದಾದ್ಯಂತ ತನ್ನ ಸೊಬಗನ್ನು ಪಸುರುತ್ತಿದೆ. ಅದರಲ್ಲೂ ಕರ್ನಾಟಕದ ಜನಪದ ಕಲೆಗಳು ವಿಶ್ವಮಟ್ಟದಲ್ಲಿ ಜನಪ್ರಿಯತೆಯನ್ನು ಹೊಂದಿರುವುದು ಶ್ಲಾಘನೀಯ. ಈ ದಿಸೆಯಲ್ಲಿ ಆಲೋಚಿಸಿದಾಗ ಕರ್ನಾಟಕದ ಚಾಮರಾಜನಗರ ಜಿಲ್ಲೆಯಲ್ಲಿರುವ ಜನಪದ ಕಲೆಗಳು ಮತ್ತು ಗಾಯಕರು ತಮ್ಮದೇ ಆದಂತಹ ಛಾಪನ್ನು ಮೂಡಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯು ಆದ ಮೇಲೆ ಜಿಲ್ಲೆಯಾದ್ಯಂತ ಇರುವಂತಹ ಜನಪದ ಕಲೆಗಳು ಮತ್ತು ಗಾಯಕರು ಮತ್ತು ಕಲಾವಿದರು ಸ್ವಲ್ಪ ಮಟ್ಟಿಗೆ ಬೆಳಕಿಗೆ ಬರಲು ಅನುಕೂಲವಾಯಿತು. ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯವಹಿಸುವಂತಹ ಕನ್ನಡ ಸಂಸ್ಕೃತಿ ಇಲಾಖೆ ಜಾನಪದ ಅಕಾಡೆಮಿಗಳು ವರ್ಷ ವರ್ಷ ಮಾಡಲೇಬೇಕಾದ ಯೋಜನೆಗಳು ಮತ್ತು ಕಾರ್ಯಕ್ರಮಗಳ ದೆಸೆಯಿಂದ ಕಲಾವಿದರಿಗೆ ಅವಕಾಶಗಳು ಒದಗಿಬಂದವು. ಜೊತೆಗೆ ಆಗಾಗ ಸರ್ಕಾರದ ಮತ್ತು ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬೇಕಾಗುವ ಕಲಾವಿದರು, ಕಲಾತಂಡಗಳನ್ನು ಗುರುತಿಸುವಂತಾಯಿತು. ಈ ಹಿನ್ನೆಲೆಯಲ್ಲಿ ಅಜ್ಞಾತವಾಗೇ ಇದ್ದ ಹಲವು ಪ್ರಕಾರಗಳ ಕಲಾವಿದರು ಮತ್ತು ಕಲಾತಂಡಗಳು ಜನಪದ ಕಲೆಗಳು ಜಿಲ್ಲಾಮಟ್ಟದಲ್ಲಿ ಗುರುತಿಸುವಂತಹ ಮತ್ತು ಗುರುತಿಸಿಕೊಳ್ಳಲು ಅವಕಾಶವಾಯಿತು. ಹೀಗಾಗಿ ಜನಪದಕಲೆಗಳ ಹುಟ್ಟು ಅದರಡಿಯಲ್ಲಿ ಬೆಳವಣಿಗೆಯನ್ನು ಹೊಂದಲು ಸಹ ಕಾರಣವಾಯಿತು.

ಒಂದು ಆರಾಧನೆಯ ಹಲವು ಕ್ರಮಗಳ ಮುಂದೆ ನಾಟ್ಯಾಂಶ ಪಡೆದು ಕಲೆಗಳಾಗಿ ಇರುವುದನ್ನು ನಾವು ನೋಡುವುದು ಆರಾಧನೆ ಅನ್ನುವುದು ಕೇವಲ ಉಪಾಸನೆ ಅಲ್ಲ, ಹಾಡುವುದು ಕುಣಿಯುವುದು, ದೀನನಾಗಿ ಅಡ್ಡಬೀಳುವುದು, ಕೈಮುಗಿದು ಧ್ಯಾನಿಸುವುದು, ಕಿರುಚುವ ಮೂಲಕ ಅರಿಕೆ ಮಾಡಿಕೊಳ್ಳುವುದು ಇತ್ಯಾದಿ ಹಲವು ಅಭಿನಯಗಳು ಅದರಲ್ಲಿರುತ್ತದೆ. ಹೀಗೆ ಅನುಸರಿಸುತ್ತಿದ್ದ ಹಲವು ಆಂಗಿಕ ಚಲನೆಗಳೆ ಒಂದು ಶಿಸ್ತಿಗೆ ಚೌಕಟ್ಟಿಗೆ ಒಳಪಟ್ಟು ಪಾಡ್ವನಗಳು ರೂಪು ಪಡೆದವು. ವಾದ್ಯ ನೃತ್ಯ, ಕಾವ್ಯನಾಟ, ಕಂಸಾಳೆ, ವೀರಗಾಸೆ, ವಾದ್ಯಧಾಟಿ ಮುಂತಾದ ಕಲೆಗಳಾಗಿ ಬೆಳದುಬಂದವು. ಹೀಗೆ ಉಗಮಗೊಂಡ ಹಾಡು ಮತ್ತು ಕಲೆಗಳು ನಿರ್ದಿಷ್ಠ ಸಂದರ್ಭದಲ್ಲಿ ಮತ್ತೆ ಮತ್ತೆ ಪುನರುಕ್ತಿಗೊಳ್ಳುವ ಮೂಲಕ ಆಚರಣೆಯ ಭಾಗಗಳಾದವು.

ಇಂಥ ದೈವೀ ಸಂಬಂಧದ ಕಲೆಗಳೇ ಮುಂದೆ ರೂಪ ಪಡೆಯುತ್ತ ಹಲವು ರೀತಿಯ ವೈವಿಧ್ಯಮಯ ರೂಪತೆಯನ್ನು ಪಡೆದುಕೊಂಡಿರುವುದು ಸ್ಪಷ್ಟವಾಗಿದೆ. ನಮ್ಮ ಜನಪದ ಕಲೆಗಳು ಒಂದೇ ರೀತಿಯಲ್ಲಿ ಆರಾಧನೆ ಸಂದರ್ಭಗಳಿಂದ ಹೊರತಾದುದಲ್ಲ ಎಂಬುದು ನಮಗೆ ತಿಳಿಯಬೇಕಾಗಿರುವ ಅಂಶವಾಗಿದೆ. ಹಬ್ಬ, ಜಾತ್ರೆ, ಉತ್ಸವ ಮುಂತಾಗಿ ಯಾವುದೇ ವಿಶಿಷ್ಠವಾದ ಸಂದರ್ಭದಲ್ಲಿ ಕ್ರಮಗಳಾಗಿ ಅಥವಾ ಪ್ರಕ್ರಿಯೆ-ಗಳಾಗಿ ಕಾಣಿಸಿಕೊಳ್ಳುವ ಪ್ರದರ್ಶನಗಳನ್ನು ನೋಡುತ್ತ ಅವು ಬರುವಂತಹ ಸಂದರ್ಭ-ದಲ್ಲಿ ಕಲೆಗಳೆಂದು ನಾವು ಕರೆಯುವುದನ್ನು ನಾವು ಮನಗಾಣುತ್ತವೆ. ಈ ಸಂದರ್ಭ-ದಲ್ಲಿ ಎಷ್ಟೋ ಸಂದರ್ಭದಲ್ಲಿ ಅಭಿನಯಾತ್ಮಕ ಪ್ರದರ್ಶನಗಳು ಸಂದರ್ಭದಿಂದ ಹೊರ ತೆಗೆಯಲಾಗದ ರೀತಿಯಲ್ಲಿ ಅರ್ಥಪೂರ್ಣವಾಗಿ ಬರುತ್ತದೆ. ಈ ರೀತಿಯಲ್ಲಿ ಅರ್ಥಪೂರ್ಣವಾಗಿ ಬರುತ್ತದೆ. ಈ ರೀತಿಯಲ್ಲಿ ಸಂಪ್ರದಾಯವನ್ನು ಒಂದು ದೇವತೆ-ಯನ್ನು ಒಂದು ವಿಶಿಷ್ಟ ಸಂದರ್ಭದಲ್ಲಿ ಕಾರಣವಾಗಿಟ್ಟುಕೊಂಡು ಒಂದು ಚೌಕಟ್ಟಿನಲ್ಲಿ ಪ್ರದರ್ಶಿಸುವ ಅನೇಕ ಕಲೆಗಳನ್ನು ವಿಂಗಡಿಸುವಂತಹ ಕಾರ್ಯವನ್ನು ನಾವು ಮಾಡುತ್ತಿದ್ದೇವೆ. ಅನೇಕ ಉದಾಹರಣೆಗಳೆಂದರೆ ಮೈಲಾರಲಿಂಗನ ಮತ್ತು ಮಲೆ ಮಹದೇಶ್ವರನ ಆರಾಧನೆ ಮತ್ತು ಮಂಟೇಸ್ವಾಮಿ ಆರಾಧನೆಗಳು ಇವುಗಳನ್ನು ವಿಶಿಷ್ಟವಾದ ರೀತಿಯಲ್ಲಿ ವಿಂಗಡಿಸಿಕೊಂಡು ಈ ಆರಾಧನೆಯ ಚೌಕಟ್ಟಿನಲ್ಲಿ ಒಂದು ಉದ್ದೇಶಕ್ಕಾಗಿ ಪ್ರದರ್ಶನವಾಗುವ ಕಲೆಗಳನ್ನು ಆಯಾ ಆರಾಧನೆಗಳ ಹಿನ್ನೆಲೆಯಲ್ಲಿ ನಾವು ಮನಗಾಣಬಹುದು.

ಸುಗ್ಗಿ ಮತ್ತು ಆಯಾ ಆಶಯಗಳನ್ನು ಪ್ರತಿಪಾದಿಸುವಂತಹ ಜನಪದ ಕಲೆಗಳು, ಮದುವೆಯ ಸಂದರ್ಭದಲ್ಲಿ ಆರಾಧಿಸುವ ಜನಪದ ಕಲೆಗಳು ಗ್ರಾಮದೇವತೆ ಮದುವೆಯ ಸಡಗರದಲ್ಲಿ ಆಚರಣೆಯ ಕಲೆಗಳು ಉತ್ಸವದಲ್ಲಿ ನಾಡಹಬ್ಬದ

ಸಂದರ್ಭದಲ್ಲಿ ಆಚರಿಸುವ ಕಲೆಗಳು, ಈ ದಿಸೆಯಲ್ಲಿ ನಾವು ವಿಶಿಷ್ಟ ರೂಪದಲ್ಲಿ ಜನಪದ ಕಲೆಗಳ ರೂಪತೆಯನ್ನು ನೋಡುತ್ತಿದ್ದೇವೆ. ಕನ್ನಡದಲ್ಲಿ ಸದ್ಯಕ್ಕೆ ಎರಡು ಮೌಖಿಕ ಮಹಾಕಾವ್ಯಗಳಾದಂತಹ ಮಲೆ ಮಾದೇಶ್ವರಸ್ವಾಮಿ ಮತ್ತು ಮಂಟೇಸ್ವಾಮಿ ಕಾವ್ಯಗಳು ಪ್ರಮುಖವಾದವುಗಳು.

ಮಲೆ ಮಾದೇಶ್ವರ ಕಾವ್ಯವನ್ನು ಹಾಡುವ ಕಂಸಾಳೆ ಸಂಪ್ರದಾಯದ ಗಾಯಕರೇ ಪುರಂದರ, ಚೆನ್ನಿಗರಾಯ, ಚೆನ್ನಬಸವಣ್ಣ ಮೈದನ ರಾಮಣ್ಣ, ನೀಲಮಣಿ ಮುಂತಾದ ಇತರ ಕಥನ ಕಾವ್ಯಗಳನ್ನು ಹಾಡುತ್ತಾರೆ. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ನಾಯಕರಾದ ಮಾದೇಶ್ವರ ಮತ್ತು ಮಂಟೇಸ್ವಾಮಿ ಇವರ ಉತ್ತರದೇಸದಿಂದ ಬಂದಿರುವ ಮಾತನ್ನು ಉಲ್ಲೇಖಿಸಲಾಗಿದೆ. ತಮ್ಮ ಪವಾಡ ಸಾಧನೆಯ ಮೂಲಕ ಹಾಗೇ ತಮ್ಮ ಸರಳತೆಯ ಮೂಲಕ ಅನೇಕ ಜನಾಂಗಗಳನ್ನು ಒಕ್ಕಲುಗಳನ್ನಾಗಿ ಪಡೆದಿದ್ದಾರೆ. ಈ ಎರಡೂ ಗುರುಪರಂಪರೆಗಳು ನಡುವೆ ಚಾಮರಾಜನಗರ ಜನಪದಕಲೆಗಳು ಒಂದಕ್ಕೊಂದು ಬೆಸುಗೆ ಏರ್ಪಡಿಸಿ ಅದರ ನಡುವೆಯಲ್ಲಿ ಮೈದಡವಿ ನಿಂತಿರುವುದು ಅಕ್ಷರ ಸಹ ಸತ್ಯವಾಗಿದೆ.

ಜನಪದ ಕಲೆಗಳು ಯಾವಾಗ ವಂಶಪರಂಪರೆಯ ಹಾದಿಯಲ್ಲಿ ಸಂಪ್ರದಾಯ ಬದ್ಧ ಕುಟುಂಬಗಳು ನಡೆಸಿಕೊಂಡು ಅದು ತಲಾತಲಾಂತರಗಳಿಂದ ಕರಗತಗೊಂಡಿರು-ವಂತಹ ಮಜಲುಗಳನ್ನು ಹೊಂದಿದೆ. ಜಾನಪದ ಪರಂಪರೆ ಹಾಗೂ ವಿಭಿನ್ನ ಸಾಂಸ್ಕೃತಿಕ ಪಂಥಗಳು ಈ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದ್ದರಿಂದ ಅವುಗಳೆಲ್ಲವೂ ಜಿಲ್ಲೆಯಾದ್ಯಂತ ಪಸರಿಸುವುದು ಸ್ಪಷ್ಟ.

ಚಾಮರಾಜನಗರ ಜಿಲ್ಲೆಯಲ್ಲಿ ನೆಲೆಸಿರುವಂತಹ ಜನಾಂಗ ಮತಧರ್ಮಗಳು ಹಲವು ರೀತಿಯ ನೀತಿಕಟ್ಟಳೆಗಳನ್ನು ಪಾಲಿಸಿಕೊಂಡು ಆಚಾರವಿಚಾರಗಳ ನಡುವೆ ಮೈದುಂಬಿಸಿಕೊಂಡು ಆ ಕಲೆಗಳನ್ನು ನಿರಂತರವಾಗಿ ಹಲವು ರೀತಿಯಲ್ಲಿ ಮೈಗೂಡಿಸಿಕೊಂಡು ಬಂದಿರುವುದು ಬಹಳ ಸ್ಪಷ್ಟವಾಗಿ ಗೋಚರಿಸುತ್ತದೆ. ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಗೋಚರಿಸುವಂತಹ ಕಾವೇರಿ ನದಿ ಕಣಿವೆ ಪ್ರದೇಶದಲ್ಲಿ ಹಾಗೂ ಪಶ್ಚಿಮ ಘಟ್ಟದಲ್ಲಿ ಬರುವಂತಹ ಏಳುಮಲೆ ಬೆಟ್ಟ ಸಾಲಿನ ನಡುವೆ ಕಂಸಾಳೆ ಪರಂಪರೆಗಳ ಜನರ ನಡುವೆ ಮಾದೇಶ್ವರ ನೆಲೆನಿಂತರು. ಕಂಸಾಳೆ ಪರಂಪರೆಯು ಈ ನಿಟ್ಟಿನಲ್ಲಿ ಬೆಳವಣಿಗೆ ಹೊಂದಲಾರಂಭಿಸಿತು. ಅದೇ ರೀತಿಯಲ್ಲಿ ಕೊಳ್ಳೇಗಾಲ ಪಟ್ಟಣಕ್ಕೆ ಸಮೀಪದಲ್ಲಿ ಹರಳೆ ಗ್ರಾಮದಲ್ಲಿ ಶಿವಶರಣರ ಹರಳಯ್ಯರ ಸ್ಮೃತಿಯ ಗದ್ದುಗೆ ಇದೆ. ಹರಳಯ್ಯನಲ್ಲೆ ಐಕ್ಯವಾಗಿದ್ದಾರೆಂದು ನಂಬಲಾಗಿದೆ. ಈ ನಿಟ್ಟಿನಲ್ಲಿ ಹಿಮಗೋಪಾಲ-

ಸ್ವಾಮಿ ಬೆಟ್ಟ ಬಂಡೀಪುರ ಅಭಯಾರಣ್ಯ ತಾಲ್ಲೂಕಿನ ಪ್ರಮುಖ ನೈಸರ್ಗಿಕ ಸಾಂಸ್ಕೃತಿಕ ಕೇಂದ್ರಗಳು ಚಾಮರಾಜನಗರದ ಹರಗನಹಳ್ಳಿ ಸಿದ್ದಲಿಂಗ ಯತಿಗಳ ಜನ್ಮಭೂಮಿ, ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟ ಇದು ಬಿಳಿಗಿರಿರಂಗನ ಕಾವ್ಯ ಮತ್ತು ಪರಂಪರೆಯ ಕೇಂದ್ರವಾಗಿದೆ. ಮಲೆಯೂರು ರಾಜಾವಳಿ ಕಥೆಯ ಕರ್ತೃ ದೇವಚಂದ್ರನ ಹುಟ್ಟೂರು. ಈ ರೀತಿಯಲ್ಲಿ ಇಡೀ ಚಾಮರಾಜನಗರ ಜಿಲ್ಲೆ ಇಂತಹ ಹಲವು ಜಾನಪದೀಯ ನಾಯಕರ ಜೀವ ಗದ್ದಿಗೆಗಳಿಗಿರುವ ಕ್ಷೇತ್ರಗಳನ್ನು ಹೊಂದಿದ್ದು ಹಲವು ಜಾನಪದ ಪಂಥಪರಂಪರೆಗಳ ತವರೂರಾಗಿದೆ.

ಯಾವುದೇ ಇತಿಹಾಸವನ್ನು ಅರಿಯಬೇಕಾದರೂ ನಾವು ಲಿಖಿತ ಸಾಕ್ಷಾತ್ಕಾರ-ಗಳಿರಬೇಕು. ಇಲ್ಲದಿದ್ದರೆ ಇತಿಹಾಸವಾಗಲಾರದ ಈ ಕಾರಣದಿಂದ ಯಾವುದೇ ದೇಶದ ಇತಿಹಾಸ ಎಂಬುದು ಈ ಬಹುಜನರಿಂದ ದೂರವಾಗಿ ಸೀಮಿತವಾದ ಸಮುದಾಯದೊಡನೆ ಸಂಬಂಧಿಸಿದ ಜನಪದ ಪರಂಪರೆಗಳು ವಿಶಿಷ್ಟ ರೀತಿಯಲ್ಲಿ ಬೆಳೆದುಬಂದಿರುವುದು ತಿಳಿದಂತಹ ವಿಷಯವಾಗಿದೆ. ಈ ರೀತಿಯಲ್ಲಿ ಅಲಿಖಿತ, ಮೌಖಿಕ ಇತಿಹಾಸವೆಂಬ ಜಾನಪದ ಚರಿತ್ರೆಗಿಂತ ಪೂರ್ವದ್ದು, ಅಕ್ಷರ ಮತ್ತು ಬರವಣಿಗೆ ರೂಢಿಗೆ ಬಂದ ನಂತರವೂ ಅವುಗಳಿಂದ ದೂರವಿದ್ದವರು ಅಥವಾ ಓದು, ಬರಹ ವಂಚಿತರು ತಮ್ಮ ನಡುವಿನ ಘಟನೆಗಳನ್ನು ಮೌಖಿಕ ರೂಪದಲ್ಲೇ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸುತ್ತಾ ಬಂದರು. ಮುಂದೆ ಇವೇ ಜನಪದ ಕಲೆಗಳಾದವು.

ಇದೇ ರೀತಿ ಇಡೀ ಸಮಾಜದ ಸೊಲ್ಲು ಮತ್ತು ಶೋಕಜ್ಞಾನ ಹಾಗೂ ಅಭಿವ್ಯಕ್ತಿಯನ್ನು ವ್ಯಕ್ತ ಮಾಡುವವನನ್ನು ಸಹ ಮುಖ್ಯವೆಂದು ಪರಿಗಣಿಸುವುದು ನಿಜವಾಗಿ ಒಂದು ಒಳ್ಳೆಯ ಕೆಲಸ. ಹಾಗಾಗಿ ಇಂತಹ ಜನಪದ ಕಲೆಗಳು ಮತ್ತು ಕಲಾವಿದರು ಸಮೂಹವು ಚಾಮರಾಜನಗರ ಜಿಲ್ಲೆಯಾದ್ಯಾಂತ ತನ್ನ ಪ್ರಭಾವವನ್ನು ಬೀರುವುದು ಸ್ಪಷ್ಟವಾಗಿದೆ.

–

ಅಧ್ಯಾಯ – ೩

ಚಾಮರಾಜನಗರ ಜಿಲ್ಲೆಯ ಜನಪದ ಕಲೆಗಳು

ಚಾಮರಾಜನಗರ ಜಿಲ್ಲೆಯಲ್ಲಿ ಹಲವು ಪ್ರಮುಖ ಹಾಗೂ ವಿಶಿಷ್ಟ ಜಾನಪದ ಕಲೆ ಮತ್ತು ಕಲಾವಿದರುಗಳಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಬರುವಂತಹ ಜನಪದ ಕಲೆ ಮತ್ತು ಕಲಾವಿದರೆಂದರೆ ನೀಲಗಾರರ ತಂಬೂರಿ ಹಾಡುಗಾರಿಕೆ ಮತ್ತು ಬೀಸುಕಂಸಾಳೆ ಕುಣಿತ, ತಮಟೆವಾದನ, ಮುಖವೀಣೆ, ನಾದಸ್ವರ ವಾಲಗ, ತತ್ವ ಪದಕಾರರು, ಸೋಬಾನೆ ಹಾಡುಗಾರರು, ಕೊಳಲುವಾದಕರು, ಜಾನಪದ ರಂಗಭೂಮಿ ಕಲಾವಿದರು, ಅಪರೂಪವಾಗುತ್ತಿರುವ ಸೂತ್ರದ ಗೊಂಬೆಯಾಡಿಸುವವರು. ಗಾರುಡಿ ಗೊಂಬೆ ಕುಣಿಸುವವರು, ಕೊಂಬು ಕಹಳೆ ವಾದನ ಮಾಡುವವರು. ಪೂಜಾಕುಣಿತ, ರಂಗದಕುಣಿತ, ವೀರಮಕ್ಕಳ ಕುಣಿತ, ಕೋಲಾಟ, ಲಂಬಾಣಿನೃತ್ಯ, ಟಿಬೆಟಿಯನ್ ನೃತ್ಯ ಹೀಗೆ ಹಲವಾರು ಕಲೆ ಮತ್ತು ಕಲಾವಿದರುಗಳಿಂದ ಚಾಮರಾಜನಗರ ಜಿಲ್ಲೆ ಸಮೃದ್ಧ ಜಾನಪದ ಪರಂಪರೆಗಳನ್ನು ಹೊಂದಿದೆ.

ಈ ನಿಟ್ಟಿನಲ್ಲಿ ನಾವು ಅವಲೋಕಿಸಿದಾಗ ಸಮೃದ್ಧವಾದ ಜನಪದ ಕಲೆಗಳು ಮೈಗೂಡಿ ಅವರ ನಡುವೆ ಜೀವನವನ್ನೇ ಮಾಡುವಂತಹ ಕಲಾವಿದರು ಮತ್ತು ಅವರ ಕುಟುಂಬಗಳು ತಮ್ಮದೇ ಆದಂತಹ ನೈಜ ಜೀವನವನ್ನು ನಡೆಸುತ್ತಿದ್ದಾರೆ. ಕಲೆಯೇ ಜೀವನ ಆಧಾರವೆಂಬ ದಾರಿಯಲ್ಲಿ ಜೀವನ ಸಾಗುವ ಸನ್ನಿವೇಶವನ್ನೇ ಇಂದಿಗೂ ಸಹ ನಾವು ನೋಡುವುದಾಗಿದೆ. ಚಾಮರಾಜನಗರ ಜಿಲ್ಲೆಯ ಜನಪದ ಕಲೆಗಳ ಬಗ್ಗೆ ಈ ವಿವರಣೆಗಳ ಮುಖಾಂತರ ತಿಳಿಯೋಣ.

೧. ನೀಲಗಾರರ ತಂಬೂರಿ ಪದ ಹಾಡುಗಾರಿಕೆ

ಇದು ಜಿಲ್ಲೆಯಲ್ಲಿ ಮುಖ್ಯವಾಗಿ ಮತ್ತು ವ್ಯಾಪಕವಾಗಿ ಅನುಷ್ಠಾನದಲ್ಲಿರುವ ಆಚರಣೆಯಲ್ಲೂ ಇರುವ ಕಲೆಯಾನದ ಇವರನ್ನು ನಾವು 'ವೃತ್ತಿಗಾಯಕರು' ಎಂದು ಕರೆಯಬಹುದು. ಇವರು ತಂಬೂರಿ ಮತ್ತು ತಂತೀ ವಾದ್ಯವನ್ನು ನುಡಿಸುತ್ತಾ ಮಂಟೇಸ್ವಾಮಿ ಮತ್ತಿತರ ಶಿಷ್ಯರ ನಿಷ್ಠೆ ಸಾಧನೆ ಪವಾಡಗಳನ್ನು ಕುರಿತು ಮಂಟೇಸ್ವಾಮಿ ಕಾವ್ಯವೆಂಬ ಜನಪದ ಮಹಾಕಾವ್ಯವನ್ನು ಹಾಡುತ್ತಾರೆ.

ತಂಬೂರಿ ಪದದ ಕಲಾವಿದರು ಚಾಮರಾಜನಗರ ಜಿಲ್ಲೆಯಾದ್ಯಂತ ಮಾಗಿಯು ಮುಗಿದಂತೆ ತುಂಬುತ್ತಲೇ ಹೋಗುತ್ತಾರೆ. ಯಾಕೆಂದರೆ ಇದು ಮಾದೇಶ್ವರ ಮಂಟೇಸ್ವಾಮಿ ಪರಂಪರೆ ಬದ್ಧವಾಗಿ ಆವರಿಸಿದ ಕ್ಷೇತ್ರ ಹಾಗೂ ಈ ಎರಡು ಪಂಥಗಳು ನೆಲೆ ನಿಂತ ತಾಣ ಆದ್ದರಿಂದ ನೀಲಗಾರರ ಕಂಸಾಳೆ ಗೋಷ್ಠರು ಪ್ರತೀ ಊರೂರಿಗೂ

ಇದ್ದಾರೆ. ಇವರಲ್ಲಿ ಕಥೆ ಕಾವ್ಯ ಹಾಡುವ ತಂಬೂರಿಯವರು ಪ್ರತಿ ಊರಿನಲ್ಲೂ ಇರುತ್ತಾರೆ.

ತಂಬೂರಿ ನೀಲಗಾರರು

ಮಂಟೇಸ್ವಾಮಿಯ ಭಕ್ತರಾದ ನೀಲಗಾರರು ಕಂಸಾಳೆಯಂತೆಯೇ ಇನ್ನೊಂದು ರೀತಿಯ ವೃತ್ತಿಗಾಯಕರು, ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ನೀಲಗಾರರಿದ್ದಾರೆ. ಇವರನ್ನು ಮಂಟೇದಯ್ಯ, ಮಂಟೇದೇವರು ಎಂದು ಕರೆಯುವುದು ವಾಡಿಕೆ. ಮಳವಳ್ಳಿ, ಬೊಪ್ಪನಗೌಡನ ಪುರ ಮತ್ತು ಚಿಕ್ಕಲ್ಲೂರಿನಲ್ಲಿ ಇವರ ಮಠಗಳಿವೆ.

ಲೀಲಗಾರರು ಎಂಬ ಪದವೆ ನೀಲಗಾರರು ಎಂದಾಗಿದೆ. ಲೀಲೆಗಾರರೆಂದರೆ ಗುರುವಿನ ಲೀಲೆಯನ್ನು ಹಾಡುವವರು ಎಂದರ್ಥ. ಲೀಲಗಾರರಲ್ಲಿ ಪ್ರಧಾನವಾಗಿ ಹರಿಜನರೇ ಕಂಡುಬರುತ್ತಾರೆ. ಉಳಿದಂತೆ ಕುರುಬರು, ಉಪ್ಪಲಿಗೆಶೆಟ್ಟರು, ಮಡಿವಾಳರು, ಅಕ್ಕಸಾಲಿಗರು, ಪರಿವಾರದವರು, ಕುಂಬಾರರು ನೀಲಗಾರರಾಗಿ ರುವುದುಂಟು. ಇವರು ತಮ್ಮನ್ನು ಸಿದ್ದಪ್ಪಾಜಿಯ ಗುಡ್ಡಗಳು ಎಂದು ಕರೆದುಕೊಳ್ಳುತ್ತಾರೆ.

ನೀಲಗಾರರಲ್ಲಿ ಸಾಧಾರಣ ನೀಲಗಾರರು ಮತ್ತು ತಂಬೂರಿ ನೀಲಗಾರರು ಎಂದು ಎರಡು ವಿಧ. ಸಾಧಾರಣ ನೀಲಗಾರರು ಕೇವಲ ಗುಡ್ಡರು. ಇವರು ಕಾವ್ಯ ಅಥವಾ ಪದಗಳನ್ನು ಹಾಡುವುದಿಲ್ಲ. ಅಲ್ಲದೆ ಇವರಿಗೆ ಒಂದು ರುದ್ರಾಕ್ಷಿಯನ್ನು ಮಾತ್ರ ಕಟ್ಟಲಾಗುತ್ತದೆ. ತಂಬೂರಿ ನೀಲಗಾರರು ದೇವರ ಕತೆಗಳನ್ನು ಹಾಡುತ್ತಾ ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುತ್ತಾರೆ. ಇವರಿಗೆ ದೀಕ್ಷೆಯಾದಾಗ ಮೂರು ರುದ್ರಾಕ್ಷಿಮಣಿ- ಗಳನ್ನು ಕಟ್ಟಲಾಗುತ್ತದೆ. ಊರುಡಲು ಹೋದಾಗ ಮೂವತ್ತೊಂದು ಮಣಿಗಳ ರುದ್ರಾಕ್ಷಿಯನ್ನು ಧರಿಸುತ್ತಾರೆ. ತಲೆಗೆ ಕೆಂಪು ರುಮಾಲು, ಕರಿಯ ನಿಲುವಂಗಿ, ಕಚ್ಚೆ ಪಂಚೆಗಳು, ಜೋಳಿಗೆ, ಕೈಯಲ್ಲಿ ಕೋಲು ಇವರ ಉಡುಗೆ-ತೊಡುಗೆಗಳಾದರೆ ತಂಬೂರಿ ಇವರ ವಾದ್ಯ ವಿಶೇಷ. ಇದರೊಂದಿಗೆ ತಾಳ, ಗಗ್ಗರ ಡಕ್ಕೆಗಳೂ ಇರುವುದುಂಟು ಸಾಮಾನ್ಯವಾಗಿ ಮೂವರು ಇಲ್ಲವೆ ಗುಂಪಾಗಿ ಇವರು ಸಂಚಾರ ಹೊರಡುತ್ತಾರೆ.

ನೀಲಗಾರರ ದೀಕ್ಷೆಯ ರೀತಿನೀತಿಗಳು:

ನೀಲಗಾರರಿಗೆ ದೀಕ್ಷೆ ಕೊಡುವ ಎರಡು ಪಾರಂಪರಿಕ ಮಠಗಳು ಬೊಪ್ಪನ- ಗೌಡನಪುರ ಮತ್ತು ಮಳವಳ್ಳಿಗಳಲ್ಲಿ ಆ ಎರಡು ಮಠಗಳಲ್ಲಿ ಯಾವುದಾದರೊಂದು ಮಠದಿಂದ ಇವರು ದೀಕ್ಷೆ ಪಡೆದುಕೊಳ್ಳಬಹುದು. ಒಂದು ವೇಳೆ ಮಠಗಳಲ್ಲಿ ದೀಕ್ಷೆ ಪಡೆಯುವುದು ಸಾಧ್ಯವಿಲ್ಲವೆಂದರೆ ಜಾತ್ರೆಗಳಲ್ಲಿ ಪಡೆಯಬಹುದು. ಚಿಕ್ಕಲೂರು ಮತ್ತು

ಕಪ್ಪಡಿ ಈ ರೀತಿಯ ದೀಕ್ಷೆಗಳು ನಡೆಯುವ ಸ್ಥಳಗಳು. ವಟುವಿಗೆ ಏಳು ವರ್ಷವಾದಾಗ ದೀಕ್ಷೆಯಾಗುವುದು ರೂಢಿ. ಒಂದು ವೇಳೆ ಅಂಥ ಹಿರಿಯ ಮಗು ಹೆಣ್ಣಾದರೆ ಯಾವ ಗಮಡು ಮಗುವಿಗಾದರೂ ದೀಕ್ಷೆ ಮಾಡಿಸಬಹುದು. ದೀಕ್ಷೆಯಿಂದ ವಟುವಿಗೆ ಗುರುಗಳು ರುದ್ರಾಕ್ಷಿ ಮಣಿಯನ್ನಿತ್ತು ಹರಸುತ್ತಾರೆ. ಅವನ ಕಿವಿಗಳಲ್ಲಿ ಕೆಲವೊಂದು ಉಪದೇಶಗಳನ್ನು ನುಡಿಯುತ್ತಾರೆ.

ಹೀಗೆ ಹೇಳಿ ಅವನ ಮುಂಗೈಗೆ ಜೋಳಿಗೆ ಕಂಕುಳಿಗೆ ಬೆತ್ತ ಕೊಡುತ್ತಾರೆ. ಆ ಮೇಲೆ ವಟುವಿನ ತಂದೆ-ತಾಯಿಗಳಿಗೆ ಗುರುಗಳು ಹೀಗೆಂದು ಪ್ರಶ್ನೆ ಕೇಳುತ್ತಾರೆ.

"ಇವರು ಯಾರ ಮಗ" ಎಂದು ಕೇಳಿದಾಗ ಆ ಸಂದರ್ಭದಲ್ಲಿ

ಆಗ ಅವರು "ಇದುವರೆಗೂ ನಮ್ಮ ಮಗ, ಇನ್ನು ಮೇಲೆ ಸ್ವಾಮಿಯ ಮಗ" ಎಂದು ಹೇಳುತ್ತಾರೆ. ಅಂದಿನಿಂದ ಆತ ಸ್ವಾಮಿಯ ಸೇವೆಗೆ ಮೀಸಲು. ಆ ಮೇಲೆ ಊರಿಗೆ ಕರೆತಂದು ನಾಲ್ಕು ಜನ ನೀಲಗಾರರೊಂದಿಗೆ ಭಿಕ್ಷಾಟನೆ. ಅದೇ ದಿನ ಇತರ ನೀಲಗಾರರಿಗೆ ವಟುವಿನ ಮನೆಯಲ್ಲಿ ಅನ್ನದಾನ ಇದಾದ ನಂತರ ವಟು ಯಾರಾದರೊಬ್ಬ ಗುರುವನ್ನು ಆಯ್ಕೆ ಮಾಡಿಕೊಳ್ಳುವನು. ಅವನೊಂದಿಗೆ ಭಿಕ್ಷಾಟನೆ ಮಾಡುತ್ತಾ ತಾನೂ ಹಾಡು ಹೇಳುತ್ತಾ ಕೆಲವು ವರ್ಷಗಳ ಗುರುಸೇವೆಯ ನಂತರ ಹಾಡುಗಾರಿಕೆಯನ್ನು ಕಲಿತುಕೊಂಡು ಭಿಕ್ಷಾಟನೆಗೆ ತೊಡಗುತ್ತಾರೆ.

ತಂಬೂರಿ ಕಥನ ಶೈಲಿ:

ಮಂಟೇಸ್ವಾಮಿಯವರ ಶಿಷ್ಯರಾದ ರಾಚಪ್ಪಾಜಿ, ಸಿದ್ದಪ್ಪಾಜಿ ಇಬ್ಬರೂ ಆ ಮಹನೀಯನ ಎರಡು ಕಣ್ಣುಗಳು. ಸಿದ್ದಪ್ಪಾಜಿಯವರನ್ನಂತೂ ಗುರು ಮಂಟೇಸ್ವಾಮಿ-ಯವರ ದಳವಾಯಿ ಎಂದೇ ಕರೆಯುತ್ತಾರೆ. ಮಂಟೇದೇವರು ಸಿದ್ದಪ್ಪಾಜಿಯ ಅಂಕಿತದಲ್ಲೇ ಕಥೆಯನ್ನು ಮಾಡುತ್ತಾರೆ. ಅದು ಈ ತಂಬೂರಿಯ ಕಥನ ಶೈಲಿಯಲ್ಲಿ ಸೊಗಸಾಗಿ ಮೂಡಿಬರುತ್ತದೆ. ಗುರು ಮಂಜೇಶ ಒಡೆಯರು, ರಾಚಪ್ಪಾಜಿ, ಸಿದ್ದಪ್ಪಾಜಿ ಮುಂತಾದವರನ್ನು ಶಿಷ್ಯರನ್ನಾಗಿ ಪಡೆದು ಮೆರೆದ ಕೆಲವು ಪವಾಡಗಳ ಕಥೆ ಮಂಟೇಸ್ವಾಮಿಯವರದು.

"ಸಿದ್ದಯ್ಯ ಸ್ವಾಮಿ ಬನ್ನಿ
ಪವಾಡ ಸಿದ್ದಯ್ಯ ಸ್ವಾಮಿ ಬನ್ನಿ
ಸಿದ್ದಾ ಸಿದ್ದರಿಗೆಲ್ಲಾ ಅತಿ ಮುದ್ದು ಘನನೀಲಿ
ಸಿದ್ದಯ್ಯ ಶಿವನೆ.... ಬನ್ನಿ!"[೧]

೧. ದಕ್ಷಿಣ ಕರ್ನಾಟಕ ಜಾನಪದ ಕಾವ್ಯಪ್ರಕಾರಗಳು, ಜೀ.ಶಂ.ಪರಮಶಿವಯ್ಯ, ಪು. ೩.

ಹೀಗೆ ಸೋಲ್ಲು ಸೋಲ್ಲಿಗೂ ಗುರು ಸಿದ್ದಪ್ಪಾಜಿಯವರನ್ನು ನೆನೆಯುತ್ತಾ, ತಂಬೂರಿಯನ್ನು ನುಡಿಸುತ್ತಾ ಕಡೆಗೆ ತೊಡಗುತ್ತಾನೆ. ಮುಖ್ಯ ಕಥೆಗಾರ, ಹಿಮ್ಮೇಳದವರು, ತಾಳ, ಏಕತಾರಿಗಳನ್ನು ನುಡಿಸುತ್ತಾರೆ.

ನೀಲಗಾರರ ತಂಬೂರಿ ವಿಶಿಷ್ಟವಾದುದು. ತಂಬೂರಿಯು ಸುಮಾರು ೩ ಮೊಳ ಉದ್ದವಿರುತ್ತದೆ. ಇದನ್ನು ಹಲಸಿನ ಮರದಿಂದ ತಯಾರು ಮಾಡುತ್ತಾರೆ. ಇದರ ಮೇಲು ತುದಿಯಲ್ಲಿ ನಾಗರಹೆಡೆ ಇಲ್ಲವೇ ಸಿಂಹದ ಮುಖವನ್ನು ಬಿಡಿಸುತ್ತಾರೆ. ನೀಲಗಾರರು ತಾವು ಪಡೆದ ಪದಕ ಮತ್ತಿತರ ತಗಡಿನ ಸಾಧನಗಳನ್ನು ಅದರಲ್ಲಿ ನೇತು ಹಾಕುತ್ತಾರೆ. ಈಗಾಗಲೇ ಹೇಳಿರುವಂತೆ ಇವರು ಕಲಾ ಪ್ರದರ್ಶನದ ಸಂದರ್ಭದಲ್ಲಿ ಗಗ್ಗರ ಮತ್ತು ಢಕ್ಕೆಗಳನ್ನು ನುಡಿಸುತ್ತಾರೆ. ಒಬ್ಬನೇ ನೀಲಗಾರ ಹಾಡುವಾಗ ಚಕ್ರಾಕಾರದ ಗಗ್ಗರಗಳನ್ನು ಎಡಗೈ ಹೆಬ್ಬೆರಳಿಗೆ ಸಿಕ್ಕಿಸಿಕೊಂಡು ತಂಬೂರಿಯ ಮೇಲೆ ಬಡಿಯುತ್ತಾನೆ. ಬಲಗೈಯಲ್ಲಿ ತಂತಿಯನ್ನು ಮೀಟುತ್ತಾನೆ. ಮೂವರು ನೀಲಗಾರರು ಹಾಡುವಾಗ ಮುಖ್ಯ ಗಾಯಕ ತಂಬೂರಿ ಗಗ್ಗರಗಳನ್ನು ಹಿಡಿದು ಕುಳಿತಿರುತ್ತಾನೆ. ಅವನ ಅಕ್ಕಪಕ್ಕದಲ್ಲಿ ಶಿಷ್ಯರು ಕುಳಿತು ಅವರಲ್ಲೊಬ್ಬ ಡಕ್ಕೆಯನ್ನು ಬಡಿಯುತ್ತಾನೆ. ಮತ್ತೊಬ್ಬ ತಾಳ ನುಡಿಯುತ್ತಾನೆ. ಮುಖ್ಯ ಗಾಯಕನ ಮುಮ್ಮೇಳಕ್ಕೆ ಇವರು ಹಿಮ್ಮೇಳ ಕೊಡುತ್ತಾರೆ.

ನೀಲಗಾರರ ಹಾಡಿನ ರೀತಿ ಇತರ ವೃತ್ತಿಗಾಯಕರಿಗಿಂತ ತುಂಬ ಭಿನ್ನ. ಅಬ್ಬರವಿಲ್ಲದ ಆದರೆ ಸಂಕೋಮಲ ರಾಗದ ಈ ಹಾಡುಗಳು ಕೇಳುಗರನ್ನು ಬೇರೊಂದು ಜಗತ್ತಿಗೆ ಕರೆದೊಯ್ಯುವ ಶಕ್ತಿ ಪಡೆದಿದೆ. ಆರಂಭದ ಪಲ್ಲವಿಗಳು, ಕಥೆಯ ನಿರೂಪಣೆಯ ಸಂದರ್ಭದಲ್ಲಿ ಪಾತ್ರ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ಬಳಸುವ ವಿವಿಧ ರಾಗಗಳು ಆ ಸಂದರ್ಭದಲ್ಲಿ ಏರಿಳಿತ ಪಡೆಯುವ ಹಲವು ಗತಿಗಳು ಮಹತ್ವದ ಸಂಗೀತಗಾರರನ್ನು ನೆನಪಿಸುತ್ತವೆ. ನೀಲಗಾರರಿಗೆ ಇರುವ ಸಂಕೋಮಲ ಕಂಠ ಮತ್ತು ಆ ಕಂಠದ ಸಿರಿಯನ್ನು ಅವರು ಕಾಪಾಡಿಕೊಂಡಿರುವ ರೀತಿ ಅದ್ಭುತವಾದುದ್ದು. ಇವರ ಕಾವ್ಯ ಹೆಚ್ಚಾಗಿ ಹಾಡಿನ ರೂಪದಲ್ಲಿರುತ್ತದೆ. ನಡುನಡುವೆ ಮಾತ್ರ ಗದ್ಯ ಇರುತ್ತದೆ. ಕುಣಿತವಿಲ್ಲದ ಇವರ ಮೇಳಕ್ಕೆ ನಿರ್ದಿಷ್ಟವಾದ ರಂಗಸ್ಥಳ ಬೇಕಾಗಿಲ್ಲ.

ನೀಲಗಾರರು ಹಾಡುವ ಕಾವ್ಯಗಳನ್ನು ಧಾರ್ಮಿಕ ಕಾವ್ಯ ಹಾಗೂ ಲೌಕಿಕ ಕಾವ್ಯಗಳೆಂದು ವಿಭಾಗಿಸಲಾಗಿದೆ. ಧಾರ್ಮಿಕ ಕಾವ್ಯದಲ್ಲಿ "ಮಂಟೇಸ್ವಾಮಿ ಕಾವ್ಯ" ಸೇರುತ್ತದೆ. ಲೌಕಿಕ ಕಾವ್ಯದಲ್ಲಿ ಕುಶ-ಲವರ ಕಥೆ, ಅರ್ಜುನ ಜೋಗಿ ಹಾಡು, ಪಿರಿಯಾಪಟ್ಟಣದ ಕಾಳಗ, ಲಿಂಗರಾಜಮ್ಮ ಚೆನ್ನಿಗರಾಮ, ಸಾರಂಗಧರ, ಗುಂಡು ಬ್ರಹ್ಮಯ್ಯ, ಅಕ್ಕ ಗಂಗಮ್ಮ ಭುವನಮ್ಮ ಚೆನ್ನ ಬಸಣ್ಣ, ಬಾಲನಾಗಮ್ಮ, ಚೆಲುವರಾಯ,

ಬಿಳಿಗಿರಿರಂಗ ನಂಜುಂಡೇಶ್ವರ, ಕಾರುಗಹಳ್ಳಿ ಕಾಳಗ, ಕತ್ತಲರಾಯನ ಕಥೆ-ಮುಡುಕುತೊರೆ ಮಲ್ಲಿಕಾರ್ಜುನ, ಮೈದುನ ರಾಮಣ್ಣ, ಮಡಿವಾಳ ಮಾಚಯ್ಯ, ಬಂಜೆಹೊನ್ನಮ್ಮ, ಹರಳಯ್ಯನವರ ಕಥೆ, ಮಾತಂಗಿ ಕಾಳಗ, ಬಾಣಾಸುರ ವಧೆ, ಸತ್ಯವ್ರತ ಮೊದಲಾದ ಕಥೆಗಳು ಸೇರುತ್ತವೆ.

೨. ಗೊರವರ ಕುಣಿತ

ಗೊರವರ ಕುಣಿತ ಜಿಲ್ಲೆಯ ಪ್ರಮುಖ ಕಲೆಗಳಲ್ಲೊಂದು. ಗೊರವರ ಕುಣಿತ ಕರ್ನಾಟಕ ಜಾನಪದ ಕಲೆಗಳಲ್ಲಿ ಒಂದು ಮುಖ್ಯವಾದ ಹಾಗೂ ವಿಶಿಷ್ಟವಾದ ಕಲೆ. ಚಾಮರಾಜನಗರ, ಹಳೇ ಮೈಸೂರು ಸೀಮೆಯಲ್ಲಿ ಇವರನ್ನು ಕಡಬಡಯ್ಯನವರು ಎಂದು ಕರೆಯುವುದಿದೆ. ತಲೆಮೇಲೆ ಕರಡಿಗುಂಜಿನ ಬೊಟ್ಟಿಗೆ, ಎಡಗೈಲಿ ಡಮರುಗ, ಬಲಗೈಲಿ ಕೊಳಲು ಹಿಡಿದು ಮೈತುಂಬ ಕವಡೆ ಮಣಿಪೋಣಿಸಿದ ಕೆಂಪು ಉಡುಪು, ಎದೆ ಮೇಲೆ ಕುಂಕುಮ ತುಂಬಿದ ಬಾಡಾರದ ಚೀಲ, ಕಣ್ಣಸುತ್ತ ಅಣಿಯ ತುಂಬ ಕೆಂಪು ಕುಂಕುಮ ವಿಭೂತಿ ಬಳಿದುಕೊಂಡು ಊರುಕೇರಿಯ ಸುತ್ತುತ್ತಾ, ಮೈಲಾರಲಿಂಗ ಶ್ರೀಶೈಲ ಮಲ್ಲಿಕಾರ್ಜುನ, ಮುಡುಕುತೊರೆ ಮಲ್ಲಪುರ ಸ್ತುತಿಸುತ್ತಾ ಉಪದಾನ ಮಾಡುವವರೆ ಗೊರವರು.

ಗೊರವರಲ್ಲಿ ಕೆಲವರು ಮೈಲಾರಲಿಂಗನಿಗೆ ತಮ್ಮನ್ನು ತಾವು ಅರ್ಪಿಸಿ ಕೊಳ್ಳುತ್ತಾರೆ. ಹೀಗೆ ಅರ್ಪಿಸಿಕೊಳ್ಳುವುದಕ್ಕೆ 'ಹೊರೆಹಾಕುವುದು' ಅಥವಾ 'ದೇವರನ್ನು ಹೊರುವುದು' ಎಂದು ಕರೆಯಲಾಗುತ್ತದೆ. ಹೊರೆಹೊರೆಯುವುದು ಗೊರವರಿಗೆ ವಂಶಪಾರಂಪರ್ಯವಾಗಿ ಬಂದಿರುತ್ತದೆ. ಸಂತಾನ ವೃದ್ಧಿಗೆ, ಅನಿಷ್ಟ ನಿವಾರಣೆಗೆ ಅಥವಾ ಹೇಳಿದ ಹರಕೆ ಕೈಗೂಡಿದರೆ ಈ ಹರಕೆಗಳನ್ನು ಮಾಡುತ್ತಾರೆ. ಇಂತಹ ಹೊರೆಗಳಲ್ಲಿ ಗೊರವಪ್ಪನ ಹೊರೆಯು ಬಹು ಮುಖ್ಯವಾದುದು.

ಗೊರವರ ದೀಕ್ಷಾ ವಿಧಿಗಳು: ದೀಕ್ಷೆಗೆ ಬದ್ಧರಾದ ಗೊರವರಲ್ಲಿ ಅನೇಕ ಪ್ರಕಾರಗಳಿವೆ. "ನಾಯಿ ಗೊರವರು, ಕರಡಿ ಗೊರವರು, ಪಾರಿಗೊರವರು, ಮದ್ದಲಿಗೊರವರು, ಶಿವಗೊರವರು (ಭಂಡಾರದವರು) ಕಿನ್ನರಿಗೊರವರು, ಕುದುರೆಕಾರರು (ಕುದುರೆ ಗೊರವರು) ಕಂಚಾವೀರರು, ಬಲ್ಲಿನವರು, ನಿಶಾನೆಯವರು ತ್ರಿಶೂಲದವರು ಮೊದಲಾದ ಪ್ರಕಾರದವರಿದ್ದಾರೆ. ಹಾಗೆಯೇ ಅನೇಕ ಪ್ರಕಾರದ ಗೊರವಿಯರೂ ಇದ್ದು ಸಾಮಾನ್ಯ ಮುದ್ರೆಯವರು, ವಾಲಿಗೊರವಿಯರು, (ಭಂಡಾರದವರು) ಚಪುರದವರು ಉರಿಚಿಂಚಿ ಚಪುರದವರು, ಶಿವಾರದಾಳಿಯವರು, ಕಾವಂತೆಯರು,

ಕಾವಂತೆಯರು ಮೊದಲಾದವರಿದ್ದಾರೆ. ಸಾಮಾನ್ಯವಾಗಿ ಲಗ್ನಕಿಂತ ಮೊದಲು ಗೊರವ ಅಥವಾ ಗೊರವಿ ದೀಕ್ಷೆಯನ್ನು ಪಡೆಯುವುದು ಸಂಪ್ರದಾಯ."[೧]

ಗೊರವರಿಗೆ ಒಂದು ನಿರ್ದಿಷ್ಟ ದಿನದಂದು ದೀಕ್ಷೆ ಕೊಡಲಾಗುತ್ತದೆ. ಈ ದೀಕ್ಷೆಯು ಮೈಲಾರಲಿಂಗನ ಸನ್ನಿದಿಯಲ್ಲಿ ನಡೆಯುತ್ತದೆ. ದೀಕ್ಷೆಯ ಸಂದರ್ಭದಲ್ಲಿ ಅವರಿಗೆ ಕಂಬಳಿಯ ನಿಲುವಂಗಿಯನ್ನು ತೊಡಿಸುತ್ತಾರೆ. ಗಂಟೆ, ಜೋಳಿಗೆ, ಭಂಡಾರ ಬಕ್ಷ, ಬೆತ್ತ, ದೋಣಿ, ಡಮರು, ಶೂಲ ಅಥವಾ ತ್ರಿಶೂಲ ಮೊದಲಾದ ವಸ್ತುಗಳನ್ನು ಪೂಜಿಸಿ ಅವರಿಗೆ ಕೊಡುತ್ತಾರೆ. ಹಿಡಿಯುವಾಗ ಮತ್ತು ಇಡುವಾಗ ತ್ರಿಶೂಲವು ಮೇಲ್ಮುಖವಾಗಿರಬೇಕೆಂಬುದು ಸಂಪ್ರದಾಯ, ಕೆಂಪು ಬಣ್ಣದ ಮುರಗಿ-ಮುಂಡಾಸು, ಕೊರಳಿಗೆ ಕವಡೆಯ ಸರಗಳನ್ನು ಧರಿಸಲಾಗುತ್ತದೆ. ಇದನ್ನು ಒಟ್ಟಾಗಿ 'ಮುದ್ರೆ' ಎನ್ನುತ್ತಾರೆ. ಆಮೇಲೆ ಅವರಿಂದ ಪ್ರತಿಜ್ಞೆಯನ್ನು ಮಂಡಿಸಲಾಗುತ್ತದೆ.

ಹೀಗೆ ಗೊರವ ಸಂಪ್ರದಾಯವನ್ನು ಸ್ವೀಕರಿಸಿದವರಲ್ಲಿ 'ಮಡಿಯವರು' ಮತ್ತು 'ಮೈಲಿಗೆಯವರು' ಎಂದು ಎರಡು ವಿಧ. ಈ ಎರಡು ಪ್ರಕಾರಗಳ ಆಯ್ಕೆಯನ್ನು ದೀಕ್ಷೆ ತೆಗೆದುಕೊಳ್ಳುವವರೇ ಶ್ವೇಚ್ಛೆಯಿಂದ ನಿರ್ಧರಿಸುತ್ತಾರೆ. ಮೈಲಿಗೆಯವರು ಹೆಸರೇ ಹೇಳುವಂತೆ ಆಚರಣೆಯಲ್ಲಿ ಸರಳೀಕರಣವನ್ನು ಪಾಲಿಸುತ್ತಾರೆ. ಅವರು ಒಂದೇ ಹೊತ್ತು ಸ್ನಾನ ಮಾಡುತ್ತಾರೆ. ಮತ್ತು ನೀರು ಸಿಗದಿದ್ದ ಊರುಗಳಲ್ಲಿ ಮುದ್ರೆಯನ್ನು ತೊಳೆಯಲು ಒಂದೇ ತಂಬಿಗೆ ನೀರು ಸಾಕಾಗುತ್ತದೆ. ಅವರು ಬೇರೆಯವರಿಂದ ಎಲೆ-ಅಡಿಕೆ, ಬೀಡಿ-ಸಿಗರೇಟು ಕೇಳಿ ಪಡೆಯಬಹುದು. ಮನೆಯವರು ಮಕ್ಕಳು ಅಥವಾ ಬೇರೆಯವರು ನೀಡಿದ್ದು, ಇಲ್ಲವೇ ಅವರ ಎಂಜಲನ್ನು ಕೂಡ ಉಣ್ಣಬಹುದು. ಆದರೆ 'ಮಡಿಯವರು' ಎಲ್ಲಾ ವಿಷಯಗಳಲ್ಲಿಯೂ ತುಂಬಾ ಕಟ್ಟುನಿಟ್ಟು. ಅವರು ದಿನ ನಿತ್ಯ ತಪ್ಪದೇ ಎರಡು ಹೊತ್ತು ಸ್ನಾನ ಮಾಡಿ ಮೂರು ಹೊತ್ತು ಪೂಜೆ ಮಾಡಬೇಕು. ಭಕ್ತರ ಮನೆಯಲ್ಲಿ ದೋಣಿ ತುಂಬುವ ಕಾರ್ಯಕ್ರಮವಿದ್ದರೆ ತಾವೇ ಅಡಿಗೆ ಮಾಡಿ ದೇವರಿಗೆ ನೈವೇದ್ಯ ಅರ್ಪಿಸಬೇಕು. ಯಾರನ್ನೂ ಮುಟ್ಟಬಾರದು. ಕಂಡಕಂಡಲ್ಲಿ ನೀರು ಆಹಾರ ಸೇವಿಸಬಾರದು ಇತ್ಯಾದಿ ನಿಷೇದಗಳಿವೆ.

ಗೊರವರ ವೇಷ ಭೂಷಣ: ಮುರಗಿ-ಮುಂಡಾಸು ಇಲ್ಲವೇ ಕಂಬಳಿಯ ಕುಲಾವಿ, ಕವಡೆ ಸರ, ಹೆಗಲಲ್ಲಿ ಜೋಳಿಗೆ, ದೋಣಿ, ಭಂಡಾರ ಬಕ್ಸ, ಗಂಟೆ, ತ್ರಿಶೂಲ, ನಾಗಬೆತ್ತ, ಡಮರು ಇವು ಗೊರವರಲ್ಲಿ ಸಾಮಾನ್ಯವಾದ ಆದರೆ ಅಗತ್ಯವಾದ ಸಲಕರಣೆಗಳು. ಇವರಲ್ಲಿ ಕರಡಿ ಗೊರವರು ಸಾಮಾನ್ಯವಾಗಿ ಕವಡೆಯ ದೊಡ್ಡ ಸರಗಳನ್ನು ಧರಿಸಿದರೆ

೧. ಸಂ. ಪ್ರೊ. ಹಿ.ಚಿ.ಬೋರಲಿಂಗಯ್ಯ, ಕರ್ನಾಟಕ ಜನಪದ ಕಲೆಗಳ ಕೋಶ,ಪು. ೧೦೪.

ಇನ್ನು ಕೆಲವರು ಕೊರಳಲ್ಲಿ ಒಂದೆರಡು ಕವಡೆಗಳನ್ನು ಮಾತ್ರ ಧರಿಸುತ್ತಾರೆ. ಕರಡಿ ಗೊರವರು ಮುರಗಿ ಮುಂಡಾಸಿನ ಬದಲಿಗೆ ಕರಡಿಯ ಕೂದಲು ಸಹಿತವಾದ ಚರ್ಮದ ಟೊಪ್ಪಿಯನ್ನು ಧರಿಸುತ್ತಾರೆ. ಕೈಯಲ್ಲಿ ಕೊಳಲು ಅಥವಾ ಪಿಳ್ಳಂಗೋವಿ ಇರುತ್ತದೆ. ಕರಡಿ ಗೊರವರ ವೇಷ ತಕ್ಷಣ ನೋಡಿದರೆ ಹೆದರಿಕೊಳ್ಳುತ್ತದೆ. ಹಳ್ಳಿಗಳಲ್ಲಿ ಅಳುವ ಮಕ್ಕಳನ್ನು ಸುಮ್ಮನಿರಿಸಲು 'ಗೊರವಯ್ಯನನು ಕರೀತೀನಿ' ಎಂದೇ ಹೇಳುತ್ತಾರೆ.

ಗೊರವರು ನುಡಿಸುವ ವಾದ್ಯವು ವಿಶಿಷ್ಟವಾಗಿದ್ದು ಅದನ್ನು 'ಪುರಿ' ಎಂದು ಕರೆಯಲಾಗುತ್ತದೆ. ತಗಡಿನ ಎರಡು ಮೂರು ಗಂಟೆಗಳನ್ನು ಉದ್ದವಾದ ಕಟ್ಟಿಗೆ-ಯೊಂದಕ್ಕೆ ಸಾಲಾಗಿ ಕಟ್ಟಿ ಅದನ್ನು ಹಗ್ಗದಿಂದ ಬಿಗಿದು ಹೆಗಲ ಮೇಲಿಂದ ಕೆಳಕ್ಕೆ ಇಳಿ ಬಿಟ್ಟಿರುತ್ತಾರೆ. ಇದನ್ನು ಪಾರಿಗೊರವರು ಮಾತ್ರ ಧರಿಸುತ್ತಾರೆ. ಇದೇ ರೀತಿ ಕಿನ್ನರಿ ಗೊರವ 'ಕಿನ್ನರಿ'ಯನ್ನು ಮದ್ದಲೆ ಗೊರವ 'ಮದ್ದಲೆ'ಯನ್ನು ಪಡೆದಿರುತ್ತಾನೆ. ಢೋಳ, ತುಂತುಳಿ, ತಾಳ ಕಾಲ್ಗೆಜ್ಜೆ ಹಾಗೂ ಈಗಾಗಲೇ ತಿಳಿಸಿರುವ ವೇಷ ಭೂಷಣಗಳಿಂದ ಕುಣಿಯುವುದು ಗೊರವರ ವೈಶಿಷ್ಟ್ಯ. ಗೊರವ ಸಂಪ್ರದಾಯದ ಪ್ರಕಾರಗಳಲ್ಲಿರುವ ವೈವಿಧ್ಯವನ್ನು ಅನುಸರಿಸಿ ಕುಣಿತವು ವೈವಿದ್ಯವಾಗುತ್ತದೆ. ಡಮರುಗ ಗೊರವರ ಪವಿತ್ರ ವಾದ್ಯ. ಮಾದರಿಗಾಗಿ ಕೆಲವೊಂದು ಗೊರವರ ಕುಣಿತದ ಪ್ರಕಾರಗಳನ್ನು ವಿವರಿಸಲಾಗಿದೆ.

ಕುದುರೆಕಾರರು: ಮೈಲಾರಲಿಂಗನ ವಾಹನ ಕುದುರೆ. ಹಾಗಾದುದರಿಂದ ಕುದುರೆಕಾರ ಗೊರವ ತಮ್ಮನ್ನು ಮೈಲಾರಲಿಂಗನ ವಾಹನಗಳೆಂದೇ ಭಾವಿಸುತ್ತಾರೆ. ಇವರು ಹಸಿರು, ಕೆಂಪು ಬಣ್ಣಗಳ ಕುತನಿಯ ನಿಲುವಾಗಿ ಧರಿಸುತ್ತಾರೆ. ಕಾಲಿಗೆ ಗಗ್ಗರ ಇಲ್ಲವೇ ಗೆಜ್ಜೆಸರ, ಕೈಯಲ್ಲಿ ಬಾರುಕೋಲು ಹಿಡಿಯುತ್ತಾರೆ. ಕುದುರೆಯ ಆಹಾರವಾದ 'ಪರಾಳ'ವನ್ನು ಮುಕ್ಕುತ್ತಾ ಕುಣಿಯುವುದು ಇವರ ವಿಶೇಷ.

ಕಾರಣಿಕದ ಗೊರವ: ಇವರು ಗೊರವರಿಗೆ ಸಂಬಂಧಿಸಿದ ಸಾಮಾನ್ಯ ನಿಯಮಗಳನ್ನು ಪಾಲಿಸುವುದರೊಂದಿಗೆ ಕಾರಣಿಕ ಹೇಳಲು ಬೇಕಾದ ಬಿಲ್ಲು ಮತ್ತು ಬಟ್ಟೆಯನ್ನು ಹೆಚ್ಚಿಗೆ ಪಡೆಯುತ್ತಾರೆ. ತಲೆಯ ಮೇಲಿನ ಮುರಗೆಗೆ ಇನ್ನೊಂದು ಬಟ್ಟೆಯನ್ನು ಗವಸಿನಂತೆ ಹಾಕಿಕೊಳ್ಳುತ್ತಾರೆ. ದೋತರದ ಬದಲು ಶೇರಮಲದಂತಹ ಚಲ್ಲಣ ಧರಿಸಿರುತ್ತಾರೆ. ಮೈಲಾರಲಿಂಗನ ಜಾತ್ರೆಯ 'ಕಾರಣಿಕೋತ್ಸವ'ದಲ್ಲಿ ಕಾರಣಿಕ ನುಡಿಯುತ್ತಾರೆ.

ಕಂಚಾವೀರರು: ಗೊರವರಲ್ಲಿ ಈ ವರ್ಗದವರು ವಿಶೇಷರಾದವರು. ಇವರನ್ನು ವೀರರು, ಈರರು, ವೀರಗಾರರು ಈರಯ್ಯಗಳು, ಕಾಸೆಯವರು ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಇವರಲ್ಲಿ ಸಾಮಾನ್ಯ ಕಂಚಾವೀರರು ಹಾಗೂ ವೀರಗಾಸೆಯವರು

ಎಂದು ಎರಡು ವಿಧ. ಸಾಮಾನ್ಯ ಕಂಚಾವೀರರು ದೋತರ ಅಥವಾ ಚಲ್ಲಣ, ಅಂಗಿ, ಮುರಗಿ, ಮುಂಡಾಸು, ಸೆಲ್ಲೆ ಅಥವಾ ದಡಿಯ, ದೋತರ ಹಾಗೂ ಕೋಟು, ಕಂಕಣ, ಖಡ್ಗ, ಚಿತ್ತ ಅಥವಾ ಶಸ್ತ್ರಗಳನ್ನು ಧರಿಸುತ್ತಾರೆ. ವೀರಗಾಸೆಯವರು ತಲೆಯ ಮುಂಡಾಸು ಧರಿಸದೆ ಕೆದರಿದ ಕೂದಲು ಬಿಟ್ಟಿರುತ್ತಾರೆ. ತಲೆಗೆ ಕಾಡು ಆಕಳಿನ ಬಾಲದ ಕೂದಲಿನ ಜಟೆಯನ್ನು ಕಟ್ಟಿ, ಅದಕ್ಕೆ ಗೆಜ್ಜೆ ಸೇರಿದ ಜಡೆಯ ಪಟ್ಟಿಯನ್ನು ಬಿಗಿಯುತ್ತಾರೆ. ಕೊರಳಿಗೆ ರುದ್ರಾಕ್ಷಿ ಲಿಂಗದ ಕಂಚಿಗೆ ಹಾಕಿಕೊಂಡು 'ಜಂಗ'ನ್ನು ಇಳಿಬಿಟ್ಟು ದೋತರ ಕಾಸೆಯನ್ನು ಕಟ್ಟಿಕೊಳ್ಳುತ್ತಾರೆ. ನಡುವಿಗೆ 'ವೀರಮುಖ' ಹಾಗೂ ಸುತ್ತಲೂ ಕೂದಲಿನ ಕುಚ್ಚುಗಳನ್ನು ಇಳಿಬಿಟ್ಟಿರುತ್ತಾರೆ. ಉಳಿದಂತೆ ಗೊರವರ ಮಾಮೂಲು ಆಭರಣ ವಿಶೇಷಗಳಿರುತ್ತವೆ.

ಗೊರವರ ಕುಣಿತ: ಗೊರವರ ಕುಣಿತ ಕೂಡ ತುಂಬ ಸಾಂಪ್ರದಾಯಿಕವಾದದ್ದೆ ಅವರ ಹಬ್ಬ ಮತ್ತು ಜಾತ್ರೆಗಳಲ್ಲಿ ಅಲ್ಲದೆ ಆಹ್ವಾನಿಸುವ ಭಕ್ತರ ಮನೆಗಳಲ್ಲಿ ಈ ಕುಣಿತ ನೆರವೇರುತ್ತದೆ. ನೂತನ ಗೃಹಪ್ರವೇಶಕ್ಕೂ ಗೊರವರ ಕುಣಿತಕ್ಕೂ ಸಂಬಂಧವಿರುವುದು. ಈ ಕುಣಿತದ ಮತ್ತೊಂದು ವಿಶೇಷ. ಈ ಸಂದರ್ಭದ ಕುಣಿತವನ್ನು 'ಮಾಣಿ ಸೇವೆ' ಅಥವಾ 'ಒಗ್ಗಸೇವೆ' ಎಂದು ಕರೆಯಲಾಗುತ್ತದೆ. ಹಣ್ಣು, ಹೂವು, ಕಡ್ಡಿ ಕರ್ಪೂರಗಳಿಂದ ಹಾಲು ಹಣ್ಣು ನೈವೇದ್ಯವನ್ನು ಪೂಜಿಸಿದ ನಂತರ ಕಂಬಳಿಯ ಸುತ್ತ ಗೊರವಯ್ಯಗಳು ಲಯಬದ್ಧ ಹೆಜ್ಜೆ ಹಾಕುತ್ತಾ ಕುಣಿಯತೊಡಗುತ್ತಾರೆ. ಕಾಲಿನ ಗೆಜ್ಜೆಯ ನಿಯತ ಸದ್ದುಗಳು, ಕೈಯಲ್ಲಿನ ಡಮರುಗದ ಗಂಭೀರ ನಿನಾದಕ್ಕೂ ನಡುವೆ ದೈವವನ್ನು ಕುರಿತ ಉದ್ಗಾರಗಳು ಇರುತ್ತವೆ. ದಕ್ಷಿಣ ಕರ್ನಾಟಕದ ಭಾಗದಲ್ಲಿ ಇದನ್ನು 'ಮಣೇವು ಸೇವೆ' 'ಮಣೇವು' ಕುಣಿತ ಎಂದು ಕರೆಯುತ್ತಾರೆ. ಇನ್ನು ಹಬ್ಬ ಜಾತ್ರೆ ಅಥವಾ ಸಾರ್ವಜನಿಕವಾಗಿ ಪ್ರದರ್ಶಿಸುವ ಗೊರವರ ಕುಣಿತ ಮತ್ತಷ್ಟು ಚೆನ್ನಾಗಿರುತ್ತದೆ. ಇವರ ಆ ವೇಷಗಳೇ ನಿಂತು ನೋಡುವಂಥವು. ದೈವದ ಸ್ತುತಿ ಮಾಡುವ ಮೊದಲು ಹಿರಿಯ ಗೊರವ ಪಿಳ್ಳಂಗೋವಿ ಊದಿ ತನ್ನ ಡಮರುಗವನ್ನು ಢಗ ಢಗ ಢಗ ಎಂದು ಬಡಿದು ನಿಲ್ಲುತ್ತಾನೆ. ಆ ಸದ್ದಿಗೆ ತಕ್ಕಂತೆ 'ಮುಂದೆಜ್ಜೆ, ಹಿಂದೆಜ್ಜೆ' ಹಾಕುತ್ತಾ ಕುಣಿತ ಆರಂಭವಾಗುತ್ತದೆ. ಮಧ್ಯೆ ಮಧ್ಯೆ ತಲೆಗೆ ಹಾಕಿದ ಕರಡಿ ಕೂದಲಿನ ಟೊಪ್ಪಿಗೆಯನ್ನು ತೆಗೆದು ಮುಂದೆ ಚಾಚಿ ತೋರಿಸಿದಂತೆ ಮಾಡಿ ಮತ್ತೆ ಧರಿಸುತ್ತಾರೆ. ಆವೇಶಗೊಂಡಂತೆ ಹಿಂದೆ ಮುಂದೆ ತಿರುಗಿ ಗಿರಿಕಿ ಹೊಡೆದಂತೆ ಕುಣಿಯುತ್ತಾ ಮಂಡಲಾಕಾರದಲ್ಲಿ ಸುತ್ತುತ್ತಾರೆ. ಆ ಸಂದರ್ಭದಲ್ಲಿ ತಲೆಯ ಟೊಪ್ಪಿಗಳನ್ನು ತೆಗೆದು ಮಧ್ಯೆ ಇಟ್ಟು ಸುತ್ತಲೂ ಕುಣಿಯುವುದೂ ಉಂಟು.

ಗೊರವ ಕಥನ ಮೇಳ: ಗೊರವರ ಕುಣಿತಕ್ಕಿಂತ ಮುಖ್ಯವಾದದ್ದು ಅವರ ಕಥನ ಮೇಳ. ಗೊರವ ಕಲಾವಿದರು ತಮ್ಮ ಎದೆಯಲ್ಲಿ ನೂರಾರು ಹಾಡು ಕಥೆಗಳನ್ನು ಇಟ್ಟುಕೊಂಡ ಪ್ರತಿಭಾವಂತರು. ಆಹ್ವಾನಿಸುವ ಭಕ್ತರ ಮನೆಗಳಿಗೆ ಹೋಗಿ ಇಡೀ ರಾತ್ರಿ ಕಥೆ ನಡೆಸಿಕೊಡುವುದು ಇವರ ವೃತ್ತಿ, ದೀಕ್ಷಾಬದ್ಧ ಗೊರವರು ಭಿಕ್ಷೆಯನ್ನು ಮಾಡಬೇಕಷ್ಟೆ. ಆ ಸಂದರ್ಭದಲ್ಲಿ ಇಂದು ರಾತ್ರಿ ಕಥೆ ಮಾಡಿ ಎಂದು ಕೇಳಿಕೊಳ್ಳುವ ಭಕ್ತರೂ ಇರುತ್ತಾರೆ. ಮೈಲಾರ ಲಿಂಗನ ಕಾವ್ಯವಲ್ಲದೆ ಇತರೆ ಕಥೆಗಳನ್ನು ಗೊರವರು ಹಾಡುತ್ತಾರೆ.

ದಕ್ಷಿಣ ಭಾಗದ 'ಮುಡುಕುತೊರೆ' ಕ್ಷೇತ್ರಕ್ಕೆ ಸೇರಿದ ಗೊರವರು ಮಾದೇಶ್ವರ, ಮಂಟೇಸ್ವಾಮಿ ಕಥನಗಳನ್ನು ಹಾಡುವುದುಂಟು. ಹಾಡಿನ ಹಿನ್ನೆಲೆಗೆ ಡಮರುಗವೇ ಇವರ ವಾದನ, ಕಂಚಿನ ತಾಳ, ದಮ್ಮಡಿ ಮತ್ತು ಕೈಗೆ ಗೆಜ್ಜೆ ಕಟ್ಟಿಕೊಳ್ಳುವುದು ಎಂದು– ಗೊರವರ ಕಾವ್ಯಕಥನದ ರೀತಿ ಕೂಡ ಸಮ್ಮೋಹಕ.

ಮೈಲಾರಲಿಂಗ ಉದ್ಭವವಾದ ಬಗೆ ಹೇಗೆ ಯಾರ ನಿಗ್ರಹಾರ್ಥವಾಗಿ ಅಥವಾ ಉದ್ದಾರರ್ಥವಾಗಿ ಅವನು ಕೈಲಾಸದಿಂದ ಭೂಲೋಕಕ್ಕೆ ಬಂದ ಯಾವ ರೂಪವನ್ನು ಧರಿಸಿ ಅವನು ಮಣಿಮಲ್ಲಾಸುರನನ್ನು ಕೊಂದ ಎಂಬ ವಿಷಯಗಳು 'ತಾಳುಗತೆ'ಯಲ್ಲಿ ಪ್ರತಿಪಾದಿತವಾಗಿದ್ದು, ಮುಂದೆ ತುಪ್ಪದ ಮಾಳಿಯನ್ನು ಲಗ್ನವಾಗುವುದರಲ್ಲಿ ಮೈಲಾರಲಿಂಗ ತನ್ನ ಮಹಿಮೆಯನ್ನು ಮೆರೆದ ಪ್ರಸಂಗವೇ ವರ್ಣಿತವಾಗಿದೆ. ನಾಯಿಗಳನ್ನು ತನ್ನ ಕಡೆಗೆ ಸೆಳೆದುಕೊಂಡದ್ದು, ಏಳು ಹೆಡೆಯ ಸರ್ಪ ತುಪ್ಪದ ಮಾಳಿಯ ಕೊರಳನ್ನು ಬಿಟ್ಟು ಗೊರವನ ತಲೆಗೆ ಸುತ್ತಿಕೊಂಡದ್ದು ತುಪ್ಪದ ಮಾಳಿಯ ಅಣ್ಣಂದಿರು ಗೊರವನತ್ತ ಬೀಸಿದ ದೊಣ್ಣೆಯ ಏಟುಗಳು ತುಪ್ಪದ ಮಾಳಿಗೆ ತಾಕಿದುದು. ಕೊನೆಗೆ ಗೊರವ ಆ ಐದು ಮಂದಿ ಕರುಬಗೌಡಗಳಿಗೂ ಕವಡೆಯನ್ನು ಕಟ್ಟಿ ಗುಡ್ಡರನ್ನಾಗಿ ಮಾಡಿಕೊಂಡದ್ದು ಆ ಅಂಶಗಳೆಲ್ಲ ಈ ಕತೆಯಲ್ಲಿ ಕಾಣಬರುವುದರಿಂದ 'ಮೈಲಾರಲಿಂಗ'ನನ್ನು ಕುರಿತ ಜನಪದ ಧಾರ್ಮಿಕ ಕಾವ್ಯವೊಂದು ಖಚಿತ ರೂಪದಲ್ಲಿ ಲಭ್ಯವಿತ್ತೆನ್ನಲಾಗಿದೆ.

೩. ಕಂಸಾಳೆ:

'ಕಂಸಾಳೆ' ಮಲೆಮಾದೇಶ್ವರ ಕಾವ್ಯ ಮತ್ತು ಪರಂಪರೆಯ ಪ್ರತೀಕ. ಮಾದೇಶ್ವರನ ಒಕ್ಕಲಾಗಿ ಮಣಿಧಾರಣೆ ಮಾಡಿಸಿಕೊಂಡು ದೀಕ್ಷೆ ಪಡೆದವರು ಕಂಸಾಳೆ ನುಡಿಸುತ್ತಾರೆ. ಇವರನ್ನು 'ಮಾದೇಶ್ವರ ಗುಡ್ಡರು' ಎನ್ನುತ್ತಾರೆ. ಮಾದೇಶ್ವರ ಸಹ ಮಂಟೇಸ್ವಾಮಿ ರೀತಿಯಲ್ಲಿ ದಲಿತ ಬಹುಜನರ ಜೊತೆಯಲ್ಲಿ ಒಟ್ಟುಗೂಡಿಸಿ ಪಂಥ

ಕಟ್ಟಿದವರು. ಮಲೆ ಮಾದೇಶ್ವರ ಕಾವ್ಯವನ್ನು ಹಾಡುತ್ತಾ, ಕಂಸಾಳೆ ಕುಟ್ಟಿ, ಕುಣಿಯುವರೆ 'ಕಂಸಾಳೆ ಗಾಯಕರು' ಮತ್ತು 'ಬೀಸು ಕಂಸಾಳೆ ಕಲಾವಿದರು'. ಮಾದೇಶ್ವರ ಬೆಟ್ಟ, ಸಾಲೂರು ಮಠಗಳಲ್ಲಿ ಇವರು ದೀಕ್ಷೆ ಪಡೆಯುತ್ತಾರೆ. ಕಂಸಾಳೆ ಅಥವಾ ಕೈತಾಳ, ಕೈಬಟ್ಲು ಎಂದು ಕರೆಯಲ್ಪಡುವ ಇದು ಕಂಚಿನ ತಾಳ ವಾದ್ಯ. ಒಂದು ಅಂಗೈಯಲ್ಲಿ ಹಿಡಿದುಕೊಳ್ಳುವಷ್ಟು ಅಗಲದ ಕಂಚಿನ ಬಟ್ಟಲಾಗಿರುತ್ತದೆ. ಇಂತಹ ಬಟ್ಟಲನ್ನು ಎಡಗೈಲಿ ಹಿಡಿಯುತ್ತಾರೆ. ಇನ್ನೊಂದು ಅಂಗೈ ಅಗಲದಷ್ಟೆ ಸ್ವಲ್ಪ ಅಗಲ ಇದ್ದು ಪ್ಲೇಟ್ ಅಥವಾ ತಟ್ಟೆ ಆಕಾರ ಅದರ ಮಧ್ಯಭಾಗ ಉಬ್ಬಿದ್ದು ಆ ಉಬ್ಬಿನ ಮಧ್ಯದ ರಂಧ್ರಕ್ಕೆ ಗೊಂಡೆದಾರ ಅಳವಡಿಸಿ ಅದನ್ನು ಬಲಗೈಲಿ ಹಿಡಿಯುತ್ತಾರೆ. ಹೀಗೆ ಈ ಎರಡನ್ನು ಹಿಡಿದು ಪರಸ್ಪರ ಬಿರುಸಾಗಿ ತಾಗಿಸುವುದರಿಂದ ಬಂದು ತಾಳ ಹೊಮ್ಮುತ್ತದೆ. ಇದೇ ಕಂಚಿನ ತಾಳಗಳನ್ನು ಬೀಸಿ ಒಡೆಯುತ್ತಾ ಕುಣಿಯುವುದನ್ನು 'ಬೀಸು ಕಂಸಾಳೆ ಕುಣಿತ' ಎನ್ನುತ್ತಾರೆ.

ಮಾದೇಶ್ವರನ ಭಕ್ತರಾದ ದೇವರಗುಡ್ಡರು ಬಳಸುವ ವಿಶಿಷ್ಟ ವಾದ್ಯ ಪ್ರಕಾರವೇ ಕಂಸಾಳೆ. ಈ ಕಂಸಾಳೆಯನ್ನು ನುಡಿಸುತ್ತ ಗುಡ್ಡರು ಮಾದೇಶ್ವರನ ದೀರ್ಘ ಕಾವ್ಯವನ್ನು ಹಾಡುತ್ತಾರೆ. 'ಕಂಸಾಳೆ' ಕಂಚಿನಿಂದ ತಯಾರಿಸಿದ ತಾಳವಾಗಿದ್ದು ಅದರ ನಿಷ್ಪತ್ತಿಯ ಬಗ್ಗೆ ಚರ್ಚೆಗಳಾಗಿದ್ದು 'ಕಾಂಸ್ಕತಾಳವೇ ಕಂಸಾಳೆಯಾಗಿದೆ' ಎನ್ನುವ ಅಭಿಪ್ರಾಯವಿದೆ. ಇದಕ್ಕೆ ಕೇಶೀರಾಜನ ಸಂವರ್ದನೆಯೂ ಇದೆ. "ಪೂರ್ವ ಪದಾಂತಕ್ಕೆ ದೀರ್ಘಮುಂ ಉತ್ತರ ಪದಾದಿಗೆ ಲೋಪಮುಮಾಗಿ ಕಾಂಸ್ಯಾಕತಾಳಕ್ಕೆ ಕಂಸಾಳಂ ಎಂದಾಯ್ತು" (ಸು ೨೦೮) ಎಂದವನ ವಿವರಣೆ. ಹಳಗನ್ನಡ ಕಾವ್ಯಗಳಲ್ಲಿ ಪ್ರಾಸಂಗಿಕವಾಗಿ ಈ ತಾಳದ ಉಲ್ಲೇಕ ಬಂದಿದೆ. ಹರಿಹರನ ಗಿರಿಜಾಕಲ್ಯಾಣ ಹಾಗೂ ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣಗಳಲ್ಲಿ 'ಕಂಸಾಳೆ' ಎಂಬ ಪದ ಪ್ರಯೋಗವಿದೆ. ರಾಘವಾಂಕನ 'ಸಿದ್ದರಾಮ ಚಾರಿತ್ರ್ಯ ಭೀಮಕವಿಯ 'ಬಸವಪುರಾಣ' ಸೂರ್ಯಕವಿಯ ಕವಿಕಂಠಹಾರ ಗೋವಿಂದ ವಐದ್ಯನ ಕಂಠೀರವ ನರಸರಾಜ ವಿಜಯಂ' ಹಾಗೂ ಗೋವಿಂದ ಕವಿಯ 'ನಾಮಹಾತ್ಮಂ' ಗ್ರಂಥಗಳಲ್ಲಿ ಕ್ರಮವಾಗಿ ಕೌಸಾಲ ಕಂಸತಾಳ, ಕಾಂಸಾಳ, ಕೈತಾಳ ಎಂಬಿತ್ಯಾದಿ, ಪ್ರಯೋಗಗಳಿಗೆ ಆಡುಮಾತಿನಲ್ಲಿ ಕಂಸಾಳೆ, ಕೈತಾಳ, ಕೌಸಾಳೆ ಒಟ್ಟು ಇತ್ಯಾದಿಯಾಗಿ ಪ್ರಯೋಗವಿದೆ. ದೇವರಗುಡ್ಡರು ಮಾತ್ರ ಇದನ್ನು 'ಬಿರುದು' ಎಂದು ಕರೆಯುತ್ತಾರೆ. ಹೀಗೆ ಈವರೆಗೆ ಕಂಸಾಳೆಗೆ ಕಾಸ್ಯ ಎಂಬ ಮೂಲ ಪದದಿಂದ ನಿಷ್ಪತ್ತಿಯನ್ನು ಹೇಳಲಾಗಿದೆ. ಕಂಸಾಳೆಯು ಕಂಚಿನಿಂದ ತಯಾರಿಸಲಾದ ಒಂದು ತಾಳ ವಿಶೇಷ. ಮದ್ಯೆ ದಾರ ಕಟ್ಟಿರುವ ಅಂಗೈ ಅಗಲದ ಒಂದು ಬಟ್ಟಲು ಎಡ ಕೈಗೆ, ಹಾಗೆಯೇ ಇನ್ನೊಂದು ಕೈಯಲ್ಲಿ ಮಟ್ಟಸವಾದ ತಾಳ ಮುಚ್ಚಳದ ನಡುಭಾಗ ಬಿಟ್ಟಿದ್ದು

ಅದರ ರಂಧ್ರದ ಮೂಲಕ ದಾರವೊಂದನ್ನು ಬಿಗಿದು ಅದನ್ನು ಗೋಡೆಗಳಿಂದ ಅಲಂಕರಿಸಿ ಇಳಿಬಿಡುತ್ತಾರೆ. ಇದು ಸಾಮಾನ್ಯವಾಗಿ ಬಲಗೈ ಮೇಲಿಂದ ಇಳಿ ಬಿದ್ದಿರುತ್ತದೆ.

ಕಂಸಾಳೆ ಮೇಳದಲ್ಲಿ ಮೂರರಿಂದ ಎಂಟು ಜನ ಭಾಗವಹಿಸುತ್ತಾರೆ. ಹಾಡುವ ಸಂದರ್ಭದಲ್ಲಿ ಮೂವರು ನೃತ್ಯ ಸಂಧರ್ಭದಲ್ಲಿ ಎಂಟರಿಂದ ಹನ್ನೆರಡು ಜನ ಕಲಾವಿದರಿರುತ್ತಾರೆ. ಹಾಡುವ ಕಲಾವಿದರಿಗೆ ವಿಶೇಷ ವೇಷ ಭೂಷಣಗಳಿರುವುದಿಲ್ಲ. ನಿತ್ಯದ ಅಂಗಿ, ಪಂಚೆ, ಹೆಗಲಿಗೆ ಜೋಳಿಗೆ, ಕೊರಳಿಗೆ ರುದ್ರಾಕ್ಷಿ, ಹಣೆಗೆ ವಿಭೂತಿಗಳಿರುತ್ತವೆ. ಕಲಾವಿದರಲ್ಲಿ ಒಬ್ಬ ಕಂಜರ ಹಿಡಿದಿರುತ್ತಾನೆ. ಇತರರು ಹಿಮ್ಮೇಳದವರು ಮುಖ್ಯ ಹಾಡುಗಾರ ಹಿಡಿದು ಕುಳಿತಿರುತ್ತಾನೆ. ಕೆಲವೊಮ್ಮೆ ಕಂಸಾಳೆಯನ್ನು ಮುಖ್ಯ ಕಲಾವಿದರಲ್ಲದೆ ಇತರರೂ ಹಿಡಿದಿರುತ್ತಾರೆ. ಕಲಾವಿದ ಎಡಗೈ ಬಟ್ಟಲನ್ನು ಮೇಲ್ಮುಖವಾಗಿ ಅಂಗೈ ಮೇಲೆ ಇರಿಸಿಕೊಂಡು ಬಲಗೈಯ ತಾಳಕ್ಕೆ ಕುಟ್ಟುವಾಗ ನಾದ ಉಂಟಾಗುತ್ತದೆ. ಹಾಡಿನ ಲಯವನ್ನು ಅನುಸರಿಸಿ ತಾಳದ ನುಡಿತವೂ ಬದಲಾಗುತ್ತದೆ. ಹೀಗೆ ವೃತ್ತಿ ಕಲೆಯುವ ಕಂಸಾಳೆ ಪ್ರಾರಂಭವಾಗುತ್ತದೆ. ಅಂತಹ ಕಂಸಾಳೆಯ ಸೊಬಗನ್ನು ಮಾದೇಶ್ವರ ಸಾಂಗತದಲ್ಲಿ ಹೀಗೆ ವರ್ಣಿಸಲಾಗಿದೆ.

> "ವಾಸ ಕಂಸಾಳೆಯ ನುಡಿಸಿಕೊಂಡು ಮಾ
> ದೇಶನಂಘ್ರೀಗೆ ನಮೋಯೆಂದು
> ಭಾಷೆ ಪಾಲಕ ದುರಿತವ ಮೊರೆಯೆಂದು ವೀ
> ರೇಶನ ಕೊಂಡಾಡಿದರು
> ಕಂಸಾಳೆಯ ದೇವರ ಗುಡ್ಡರು"[೧]

ದೇವರ ಗುಡ್ಡನೆಂದರೆ ಶಿಷ್ಯನೆಂಬ ಅರ್ಥವನ್ನು ಆರೋಪಿಸಲಾಗುತ್ತಿದೆ ಯಾದರೂ ಅದು ವೈದಿಕ ಪರಿಭಾಷೆಯ ಶಿಷ್ಯತನವಲ್ಲವೆಂದೆನಿಸುತ್ತದೆ. ದೀಕ್ಷೆಯನ್ನು ಪಡೆದ ಮೇಲೆ ಗುಡ್ಡರಾಗುವ ಇವರು ಆ ಪಂಥದ ಪ್ರಚಾರಕರಾಗಿ, ಪ್ರಸಾರಕರಾಗಿ ಕಾರ್ಯನಿರ್ವಹಿಸುತ್ತಾರೆ. ಆದುದರಿಂದ ಗುಡ್ಡರೆಂದರೆ ಶಿಷ್ಯರು ಎಂದರ್ಥ. ಮಾಡಿಕೊಂಡರೆ ಆ ಪದಕ್ಕಿರುವ ಬಹುಮುಖತೆಯನ್ನು ನಿರಾಕರಿಸಿದಂತಾಗುತ್ತದೆ. ಮಾದೇಶ್ವರನ ಗುಡ್ಡರನ್ನು ಕೈಸಾಳೆಯವರು ಕಂಸಾಳೆಯವರು ಎಂದು ಕರೆಯುವುದು ರೂಢಿ ಎಂದರೆ ಕಂಸಾಳೆಯೇ ಇವರ ಪಾರಂಪರಿಕ ವಾದ್ಯ, ಹರಿಜನರು ಒಕ್ಕಲಿಗರು, ಕುರುಬರು, ಗಂಗಾಮತಸ್ಥರು, ಉಪ್ಪಲಿಗರು, ಮಡಿವಾಳರು, ಪರಿವಾರದವರು

೧. ಸಂ. ಪ್ರೊ. ಹಿ.ಚಿ.ಬೋರಲಿಂಗಯ್ಯ, ಕರ್ನಾಟಕ ಜನಪದ ಕಲೆಗಳ ಕೋಶ, ಪು. ೯೦.

ಮಾದೇಶ್ವರನ ಗುಡ್ಡರಾಗುತ್ತಾರೆ. ಮಾದೇಶ್ವರನ ಭಕ್ತರಾಗಿ ಗಂಡಸರು ಮತ್ತು ಹೆಂಗಸರು ದೀಕ್ಷೆ ಪಡೆದಾಗ ಗಂಡಸರನ್ನು ಗುಡ್ಡರೆಂದೂ ಹೆಂಗಸರನ್ನೂ ಗುಡ್ಡಮ್ಮ, ಗುಡ್ಡಿಯೆಂದು ಕರೆಯುತ್ತಾರೆ. ಆದರೆ ಸೂತಕವಾದ ಹೆಂಗಸರನ್ನು ಗುಡ್ಡಿಯಾಗಿ ಬಿಡುವ ಕ್ರಮವಿಲ್ಲ. ಗುಡ್ಡಿಯಾದ ಹೆಂಗಸಿಗೆ ಮತ್ತೆ ಮದುವೆಯೂ ಇರುವುದಿಲ್ಲ. ಇದು ಹರಿಜನರಲ್ಲಿಯೇ ಹೆಚ್ಚಾಗಿ ಕಂಡು ಬರುವ ಪದ್ಧತಿಯಾಗಿದ್ದು ಈಗ ವಿರಳವಾಗಿದೆ.

ಮಾದೇಶ್ವರನ ಕಥೆಯನ್ನು ಗುಡ್ಡರು ಮಾತ್ರ ಹಾಡುತ್ತಾರೆ. ಗುಡ್ಡಿಯರು ಬಿಡಿ ಹಾಡುಗಳನ್ನು ಹಾಡುವವರಾಗಿರುತ್ತಾರೆ. ಗುಡ್ಡರನ್ನು ಬಿಡುವ ಪದ್ಧತಿಯು ವಂಶ ಪಾರಂಪರ್ಯವಾಗಿ ನಡೆದು ಬರುವಂತಾದ್ದು. ಇಂತಹ ಗುಡ್ಡರನ್ನು ಸಿರಿಯ ದೇವರ ಗುಡ್ಡರು ಮತ್ತು ಅಲೆಮಾರಿ ಗುಡ್ಡರು ಎಂದು ಸಂಪ್ರದಾಯಗಳಲ್ಲಿ ಕಾಣಬಹುದು.

ಸಿರಿಯ ದೇವರ ಗುಡ್ಡರು: ಇವರು ಕಂಚಿನ ತಟ್ಟೆಯಲ್ಲಿ ಊಟ ಮಾಡುವುದಿಲ್ಲ. ಕಾರಣವೆಂದರೆ ಕಂಚನ್ನು ಇವರು ಮಾದೇಶ್ವರನ ಶ್ರೇಷ್ಠ ಕಂಸಾಳೆ ಎಂದು ಭಾವಿಸುತ್ತಾರೆ. ಇವರು ಕಾಲಿಗೆ ಪಾದರಕ್ಷೆ ಹಾಕುವುದಿಲ್ಲ. ಸೋಮವಾರ, ಶುಕ್ರವಾರ, ಅಮಾವಾಸ್ಯೆಯ ದಿನ 'ಕ್ವಾರ್ಯೂ' ಮಾಡುತ್ತಾರೆ. ಯುಗಾದಿ, ಶಿವರಾತ್ರಿ, ನವರಾತ್ರಿ, ದೀಪಾವಳಿ ಹಬ್ಬಗಳಿಗೆ ಮಾದೇಶ್ವರನ ದರ್ಶನಕ್ಕೆ ಹೋಗುತ್ತಾರೆ. ಇವರು ಮದುವೆ ಯಾಗಬಹುದು.

ಅಲೆಮಾರಿ ಗುಡ್ಡರು: ಇವರು ಮಾದೇಶ್ವರನ ಕಥೆಯನ್ನು ಸಂಪೂರ್ಣವಾಗಿ ಹಾಡುವವರು ಊರೂರು ಅಲೆಯುತ್ತ 'ಕ್ವಾರ್ಯೂ' ಮಾಡಿ ಮಾದೇಶ್ವರನ ಸೇವೆ ಮಾಡುತ್ತಿರುತ್ತಾರೆ. ದೀಪಾವಳಿ, ಯುಗಾದಿ, ಶಿವರಾತ್ರಿ ಮೊದಲಾದ ವಿಶೇಷ ಸಂದರ್ಭ ಗಳಲ್ಲಿ ಮಾದೇಶ್ವರನ ಗುಡ್ಡಕ್ಕೆ ಹೋಗುತ್ತಾರೆ.

ದೀಕ್ಷಾ ವಿಧಾನ: ಗುಡ್ಡರಾಗುವ ಮಾದೇಶ್ವರನ ಭಕ್ತರ ಆಯಾ ಜಾತಿಗೆ ಸಂಬಂಧಿಸಿದಂತೆ ಒಂದೊಂದು ಪ್ರದೇಶಕ್ಕೊಬ್ಬ 'ಪುರಸೇಕಾರಿ'ಯಿರುತ್ತಾನೆ. ಈತನೇ ಗುಡ್ಡರಿಗೆ ದೀಕ್ಷೆ ನೀಡುವಾತ ದೀಕ್ಷೆಯು ಮಾದೇಶ್ವರನ ಗುಡ್ಡದಲ್ಲಿ ಅಥವಾ ಅವರವರ ಊರಲ್ಲಿ ನಡೆಯ ಬಹುದು.

ಕುಳಿತು ಹಾಡುವ ಕಂಸಾಳೆ: ಮೂವರಿಂದ ಎಂಟು ಜನ ಭಾಗವಹಿಸುವ ಈ ಮೇಳದಲ್ಲಿ ಮುಖ್ಯ ಹಾಡುಗಾರ ಅವರ ಮಧ್ಯದಲ್ಲಿರುತ್ತಾನೆ. ಸಹ ಕಲಾವಿದರು ಡಪ್ಪು, ಕಂಸಾಳೆ, ಚಿಟಕೆ ಹಿಡಿಯ ಸುತ್ತ ಕುಳಿತಿರುತ್ತಾರೆ. ಮುಖ್ಯಗಾಯಕ ಹಾಡುತ್ತಾ ಮುಂದುವರಿ ಯುತ್ತಿದ್ದಂತೆ ವಾದ್ಯಗಳನ್ನು ನುಡಿಸುತ್ತ ಇತರರು ದನಿಗೂಡಿಸುತ್ತಾರೆ. ಕೆಲವು ವೇಳೆ

ಕಥೆ, ಸಂಭಾಷಣೆಯು ರೂಪದಲ್ಲಿ ನಡೆಯುವಾಗ ಉಳಿದವರು "ಹೌದಪ್ಪ ಹೌದು" ಎನ್ನುತ್ತಾರೆ. ಕೆಲವು ಕಲಾವಿದರು ತಾವೇ ಪಾತ್ರದಾರಿಗಳಂತೆ ಕಥೆಯನ್ನು ನಿರೂಪಿಸುವುದೂ ಇದೆ. ಒಬ್ಬ ಕಥೆಯನ್ನು ಹೇಳಿ ನಿಲ್ಲಿಸಿದಾಗ ಇನ್ನೊಬ್ಬ ಇನ್ನೊಂದು ಕಥೆಯನ್ನು ಮುಂದುವರಿಸಿಕೊಂಡು ಹೋಗುವುದು ಇನ್ನೊಂದು ಕ್ರಮ.

ಯಾತ್ರೆಯ ಸಂದರ್ಭದ ಹಾಡುಗಳು: ಮಾದಪ್ಪನ ದೀಕ್ಷೆ ಪಡೆದ ಗುಡ್ಡರು ಸಾಮಾನ್ಯವಾಗಿ ವರ್ಷಕ್ಕೊಂದು ಬಾರಿ ಬೆಟ್ಟಕ್ಕೆ ಹೋಗಿ ಬರಲೇಬೇಕೆಂಬ ನಂಬಿಕೆಯಿದೆ. ಬೆಂಗಳೂರು, ಚಾಮರಾಜನಗರ, ಮಂಡ್ಯ, ತುಮಕೂರು ಹಾಗೂ ಮೈಸೂರು ಜಿಲ್ಲೆಗಳ ಜನ ಶಿವರಾತ್ರಿ ಅಥವಾ ನವರಾತ್ರಿಯ ಸಂದರ್ಭಗಳಲ್ಲಿ ಒಟ್ಟೊಟ್ಟಾಗಿ ಹೊರಡುತ್ತಾರೆ. ಗುಡ್ಡರು ನೇತೃತ್ವ ವಹಿಸುತ್ತಾರೆ. ಹಿಂದೆ ಕಾಲ್ನಡಿಗೆಯೇ ಅನಿವಾರ್ಯವಾಗಿತ್ತು. ಕಂಸಾಳೆ ಹಾಡುಗಳು ಕಾವ್ಯವಾಗಿ ಬೆಳೆದದ್ದೇ ಈ ಯಾತ್ರೆಯಿಂದಾಗಿ ಅನ್ನುವಷ್ಟರ ಮಟ್ಟಿಗೆ ಹಾಡು ಮತ್ತು ತಾಳಗಳ ಸದ್ದು ದಾರಿಯುದ್ದಕ್ಕೂ ತುಂಬಿಹೋಗುತ್ತದೆ. ಶಿವರಾತ್ರಿಯ ಜಾತ್ರೆಯಲ್ಲಂತೂ ಹಾಡುಗಳ ಸುಗ್ಗಿ.

ಬೀಸು ಕಂಸಾಳೆ: ಇದರ ಪ್ರವರ್ತಕ ಮಾದೇವನೆಂದು ನಂಬಲಾಗಿದೆ. ಮಾದೇಶ್ವರರು ಕತ್ತಿ ಪವಾಡದ ಹಳ್ಳದಲ್ಲಿ ಬಿಲ್ಲಯ್ಯ ಕಾರಯ್ಯರನ್ನು ಪರೀಕ್ಷೆ ಮಾಡಿದ ಮೇಲೆ ಸಂತೋಷದಿಂದ ಕಂಸಾಳೆ ಬೀಸಿ ನೃತ್ಯ ಮಾಡಿದಲ್ಲಿಂದ ಇದರ ಪ್ರಾರಂಭ ಎಂಬ ನಂಬಿಕೆ ಇದೆ. ಇದರಲ್ಲಿ ಮತ್ತೆ ತಟ್‌ಬಟ್ಲು ಮತ್ತು ತಾರ್‌ಬಟ್ಲು ಎಂದು ಎರಡು ವಿಧಗಳಿವೆ. ಕಂಸಾಳೆಯನ್ನು ತಟ್ಟುತ್ತಾ ಕುಣಿಯುವುದೇ ತಟ್‌ಬಟ್ಲು, ಇದರಲ್ಲಿ ಮೂವರಿಂದ ಎಂಟು ಜನ ಭಾಗವಹಿಸುತ್ತಾರೆ. ಕಂಸಾಳೆಯ ಮೇಲಿನ ಮುಸುಕಿಗೆ ಸುಮಾರು ೦.೪೫ ಮೀಟರ್ ಅಥವಾ ೦.೬೧ ಮೀಟರ್ ಉದ್ದದ ದಾರ ಕಟ್ಟಲಾಗುತ್ತದೆ. ಅದಕ್ಕೆ ಬಣ್ಣದ ಗೋಡೆಗಳ ಅಲಂಕಾರವು ಇರುತ್ತದೆ. ಈ ದಾರದ ತುದಿಯನ್ನು ಹಿಡಿದು ಬೀಸಿ ತಾಳ ಹಾಕುವುದರಿಂದಲೇ ಇದನ್ನು ಬೀಸು ಕಂಸಾಳೆ ಎನ್ನಲಾಗುತ್ತದೆ.

ತಮ್ಮ ದೇವರ ಮಹಿಮಾಶಯಗಳನ್ನು ಸೊಗಸಾದ ರೀತಿಯಲ್ಲಿ ಹಾಡಿ, ನಲಿದು ಜನತೆಯಲ್ಲಿ ದೈವಭಕ್ತಿ ನಿಚ್ಚಳವಾಗಿ ಉಳಿಯುವಂತೆ ಶ್ರಮಿಸುವ ಈ 'ಗುಡ್ಡರು' ದೇವರ ಶಿಷ್ಯರೇ. ಹೌದು ಈ ಕಂಸಾಳೆಯವರು ಧಾರ್ಮಿಕ ಕಥೆಗಳನ್ನಷ್ಟೇ ಅಲ್ಲದೆ ಕೆಲವು ಲೌಕಿಕ, ಐತಿಹಾಸಿಕ ಹಾಗೂ ಪೌರಾಣಿಕ ಕಥೆಗಳನ್ನು ಕಲಿತಿರುತ್ತಾರೆ. ಇವುಗಳಲ್ಲಿ ಪ್ರಮುಖವಾದುವುಗಳು ಕಂಸಾಳೆಯವರಲ್ಲಿ 'ಬೀಸು ಕಂಸಾಳೆ'ಯವರು ಎಂಬ ಒಂದು ವರ್ಗದವರನ್ನು ಕಾಣಬಹುದು. ಆಕರ್ಷಿತ ರೀತಿಯಲ್ಲಿ ಕಂಸಾಳೆಯನ್ನು ವಿವಿಧ

ಭಂಗಿಯಲ್ಲಿ ಬೀಸಿಕೊಂಡು ಹಾಡುತ್ತಾ ಮಾಡುವ ನೃತ್ಯ ಅಪೂರ್ವವಾದದ್ದು. ನೃತ್ಯ ಪ್ರಧಾನವಾದ ಒಂದು ಮೇಳ ಅತ್ಯಾಕರ್ಷಕವಾದದ್ದು"[೧] ಈ ರೀತಿಯಲ್ಲಿ ಕಂಸಾಳೆ ಪರಂಪರೆಯು ಚಾಮರಾಜನಗರ ಜಿಲ್ಲೆಯಾದ್ಯಂತ ಪಸರಿಸಿದೆ.

೪. ವೀರಭದ್ರ ಕುಣಿತ:

ಇವತ್ತಿನ ವೀರಭದ್ರ ಕುಣಿತ ಮೇಲ್ಕಂಡ ಕಥೆಯ ನಾಯಕನಾದ ವೀರಭದ್ರನ ಪುನರಭಿಯ ಎಂದೇ ಕಲಾವಿದರು ಹೇಳುತ್ತಾರೆ. ಕಾಲಿಗೆ ಝುಣಝುಣಿಸುವ ಗೆಜ್ಜೆ ಮೊಣಕಾಲಿಗೆ ಹಿತ್ತಾಳೆಯ ಗಗ್ಗರ ನಡುವಿಗೆ ಬಿಗಿದ ವಸ್ತ್ರ ಕಾಸೆ ಹಾಕಿದ ಕೆಂಪು ಪಂಚೆ, ಕೆಂಪು ಜುಬ್ಬ, ಎದೆಗೆ ರುದ್ರನ ಪ್ರತಿಮೆ, ಕೈಯಲ್ಲಿ ಝಳಪಿಸುವ ಕತ್ತಿ, ಹಿಂದೆಲೆಗೆ ಶ್ವೇತವರ್ಣದ ಚಾಲಿ, ಹಣೆಗೆ ವಿಭೂತಿ, ಕಣ್ಣುಗಳಿಗೆ ರೌದ್ರತೆಯನ್ನು ತುಂಬುವಂತೆ ಹುಬ್ಬಿಗೆ ಹಚ್ಚಿದ ಕೆಂಪು ಆವೇಶದಿಂದ ಕತ್ತಿಯನ್ನು ಝಳಪಿಸುತ್ತಾ ಕುಣಿಯುವ ಕಲಾವಿದರ ಮಧ್ಯೆ ಮಧ್ಯೆ ಆಂಗಿಕ ಅಭಿನಯದ ಮೂಲಕ ಕಥೆಯನ್ನು ನಿರೂಪಿಸುತ್ತಾನೆ. ಕರಡೆ ಮತ್ತು ಚಮಾಳದ ಕಿವಿಗಡಚಿಕ್ಕುವ ನಿಯತ ಸದ್ದಿಗೆ ತಕ್ಕಂತೆ ವೀರಾವೇಶದಿಂದ ಯುದ್ಧಕ್ಕೆ ನಿಂತ ಕಲಿಯಂತೆಯೇ ನರ್ತಿಸುವ ಕಲಾವಿದ ಪ್ರತಿ ಕ್ಷಣದಲ್ಲಿಯೂ ಮುನ್ನುಗ್ಗುವ ಚಲನೆಯಲ್ಲಿಯೇ ಹೆಜ್ಜೆ ಇಡುತ್ತಾನೆ. ಮಧ್ಯೆ ಮಧ್ಯೆ ಕುಣಿತವನ್ನು ನಿಲ್ಲಿಸಿ ಶಿವ ಮತ್ತು ದಕ್ಷ ಬ್ರಹ್ಮನ ವೈರ, ದಕ್ಷ ಬ್ರಹ್ಮನ ಯಜ್ಞ ಹಾಗೂ ಅವನ ಸಂವಾದವನ್ನು ಕುರಿತಾದ ಕಥೆಯನ್ನು ಪ್ರಾಸಬದ್ಧವಾಗಿ ಭಾವಪೂರ್ಣವಾಗಿ ನಿರೂಪಿಸುತ್ತಾನೆ. ಶಿವನ ಹೊಗಳಿಕೆ ಇದರಲ್ಲಿ ಪ್ರಾಧಾನ್ಯ ಪಡೆಯುತ್ತದೆ. ಶಿವನನ್ನು ಹೊಗಳುವ ಮೂಲಕ ಶೈವ ಧರ್ಮದ ಪ್ರವಚನವೂ ನೆರವೇರುತ್ತದೆ. ಹೀಗೆ ಕುಣಿತದ ಮಧ್ಯೆ ಮಧ್ಯೆ ಅಳವಡಿಸಿ ಕೊಳ್ಳಲಾಗುವ ಈ ನಿರೂಪಣೆಗೆ 'ಒಡಬು' ಹೇಳುವುದು ಎಂದು ಕರೆಯುತ್ತಾರೆ.

ಬಿರುಸಿನ ಕುಣಿತದ ನಡುವಿನ ಈ ಒಡಬು ಕಲಾವಿದನ ವಿಶ್ರಾಂತಿಗೂ ಅವಕಾಶ ಮಾಡಕೊಡುತ್ತದೆ. ಒಡಬು ಹೇಳುವಾಗ ನುಡಿಸಿ ಮತ್ತಷ್ಟು ರಂಗೇರಿಸಲಾಗುತ್ತದೆ. ಒಡಬು ಹೇಳುವಾಗ ಕಣ್ಣು, ಕೈ ಮತ್ತು ಬಾಯಿಗಳು ಕೆಲಸ ಮಾಡಿದರೆ ಒಡಬಿನ ಒಂದು ಹಂತ ಮುಗಿಯುತ್ತಿದ್ದಂತೆಯೇ ಮೊಳಗುವ ಢೂಢೂ ಸದ್ದಿಗೆ ಹೆಜ್ಜೆ ಹಾಕಲು ಆರಂಭಿಸಿ ಈ ವೀರಾವೇಷದ ಕುಣಿತ ಒಂದು ತಾರಕಕ್ಕೆ ಮುಟ್ಟಿದಾಗ ಮತ್ತೆ ಒಡಬಿನ ಸ್ಥಿತಿಗೆ ಕಲಾವಿದ ಹಿಂತಿರುಗುತ್ತಾನೆ. ಹೀಗೆ ಕುಣಿತ ಮತ್ತು ಒಡಬುಗಳ ಈ ಚಂಪೂ ಶೈಲಿ ನೋಡುವ ಮತ್ತು ಕೇಳುವ ಇಂದ್ರಿಯಗಳನ್ನು ಪ್ರಚೋದಿಸುತ್ತಾ ಹೋಗುತ್ತದೆ. ಶಿವರಾತ್ರಿ, ಗೌರಿಹಬ್ಬ ಹಾಗೂ ಯುಗಾದಿ ಹಬ್ಬಗಳಲ್ಲದೇ ಶಿವೋಪಾಸನೆಯ ವಿಶಿಷ್ಟ

---

೧. ಡಾ. ಜೀ.ಶಂ.ಪರಮಶಿವಯ್ಯ, ಜಾನಪದ ಸಾಹಿತ್ಯ ಸಮೀಕ್ಷೆ, ಪು. ೧-೪.

ಸಂದರ್ಭಗಳೆಲ್ಲೆಲ್ಲ ಜರುಗುವ ಈ ಕುಣಿತ ವೀರಶೈವ ಜನಾಂಗದವರ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗವೆಂಬಂತೆ ಪ್ರತೀತವಾಗಿದೆ.

೫. ವೀರಗಾಸೆ:

ಮೇಲೆ ವಿವರಿಸಲಾದ ವೀರಭದ್ರನ ಕುಣಿತ ಈಗ ಅಪರೂಪವಾಗುತ್ತಿದೆ ಬದಲಾಗಿ ವೀರಗಾಸೆ ಜನಪ್ರಿಯವಾಗಿದೆ. ವೀರಭದ್ರನ ಕುಣಿತ ಒಬ್ಬ ಕಲಾವಿದನ ಪ್ರತಿಭಾ ಶಕ್ತಿ ಮತ್ತು ಸಾಮರ್ಥ್ಯಗಳ ಅಭಿವ್ಯಕ್ತಿಯಾದರೆ ವೀರಗಾಸೆ ಸಮೂಹದ ಅಭಿವ್ಯಕ್ತಿ. ಸಾಮಾನ್ಯವಾಗಿ ಜಾತ್ರೆ, ದೇವರ ಮೆರವಣಿಗೆ, ಹಬ್ಬ ಹುಣ್ಣಿಮೆ, ವೀರಶೈವರ ಮದುವೆ, ಗೃಹಪ್ರವೇಶ ಮೊದಲಾದ ಸಂದರ್ಭಗಳಲ್ಲಿ ವೀರಗಾಸೆ ನಡೆಯುತ್ತದೆ. ವೀರಶೈವರಲ್ಲಿ ವೀರಭದ್ರನನ್ನು ಮನೆದೇವರಾಗಿ ನಂಬುವವರು ವೀರಗಾಸೆ ಮಾಡಿದಾಗ ಅದನ್ನು 'ಆಡಣಿ' ಎಂದು ಕರೆಯಲಾಗುತ್ತದೆ. ಇದು ಒಂದು ರೀತಿಯ ವೈಶಿಷ್ಟ್ಯ-ಪೂರ್ಣವಾದ ಆಚರಣೆಯೇ ಆಗಿರುತ್ತದೆ.

ಸಾಮಾನ್ಯವಾಗಿ ವೀರಭದ್ರ ದೇವರ ಒಕ್ಕಲಿನವರು ತಮ್ಮ ಹಿರಿಯ ಮತ್ತು ಕಿರಿಯ ಮಗನ ಮದುವೆಯಲ್ಲಿ ಮಾತ್ರ. ವೀರಗಾಸೆಯನ್ನು ಮಾಡುತ್ತಾರೆ. ಈ ದಿವಸ ಐದು ಜನ ಮುತ್ತೈದೆಯರು ಮತ್ತು ಐದು ಜನ ಗಂಡು ಮಕ್ಕಳು ಉಪವಾಸವಿರುತ್ತಾರೆ. ಆ ಐದು ಜನ ಹೆಣ್ಣು ಮಕ್ಕಳಿಗೆ ಮತ್ತು ಗಂಡಸರಿಗೆ ಶಸ್ತ್ರ ಹಾಕುತ್ತಾರೆ. ಮನೆಯಿಂದ ದೇವಸ್ಥಾನದವರೆಗೆ ಹೋಗುವಾಗ ನಡೆಮುಡಿಯನ್ನು ನೆಲಕ್ಕೆ ಹಾಸುತ್ತಾರೆ. ಇದರ ಮೇಲೆ ಮದುಮಗ ಹಾಗೂ ಮುತ್ತೈದೆಯರು ಕೊಂಬಿ ದೇವರನ್ನು ತೆಗೆದುಕೊಂಡು ನಡೆಯುತ್ತಿರುತ್ತಾರೆ. ಹಾಗೆ ಹೋಗುವಾಗ ವೀರಭದ್ರ ದೇವರ ಹಾಗೂ ಹಲವು ದೇವರುಗಳ ಒಡಬುಗಳನ್ನು ಹೇಳುತ್ತಾರೆ. ದೇವಸ್ಥಾನದ ಮುಂಭಾಗದಲ್ಲಿ ಒಂದು ಅಡಿ ಆಳ, ಒಂದು ಅಡಿ ಉದ್ದ ಹಾಗೂ ಎರಡು ಅಡಿ ಅಗಲದ ಗುಂಡಿಯನ್ನು ತೆಗೆದು ಅತ್ತಿ, ಆಲ, ಶ್ರೀಗಂಧ ಮರದ ೧೦ ಹೊರೆ ಕಟ್ಟಿಗೆಗಳನ್ನು ಗುಂಡಿಗೆ ಹಾಕಿ ವೀರಗಾಸೆಯವರಿಂದ ಬೆಂಕಿಯನ್ನು ಹಚ್ಚಿಸುತ್ತಾರೆ. ಹಾಲುಕ್ಕಿಸಿ ಎದೆಕೊಡುತ್ತಾರೆ. ಸ್ವಾಮಿಗಳು, ಪುರವಂತರು, ಮದುಮಕ್ಕಳು ಮುತ್ತೈದೆಯರು ಯಜ್ಞಕುಂಡವನ್ನು ಹಾಯ್ದು ದೇವಸ್ಥಾನವನ್ನು ಪ್ರವೇಶಿಸುತ್ತಾರೆ. ಕೊಂಬಿದೇವರು ಈ ಆಚರಣೆಯಲ್ಲಿ ಬಹು ಮುಖ್ಯವಾದುದು.

ವೀರಗಾಸೆಯವರ ವೇಷಭೂಷಣ: ಕನಿಷ್ಠ ಎಂಟು ಅಥವಾ ಅಕ್ಕೆ ಮೇಲ್ಪಟ್ಟ ಸಮಸಂಖ್ಯೆಯ ಕಲಾವಿದರು ತಲೆಗೆ ಪೇಟ, ಕಿವಿಗೆ, ಕಡಕು, ಹಣೆಗೆ, ವಿಭೂತಿ ಕೊರಳಿಗೆ ರುದ್ರಾಕ್ಷಿ ಹಾಗೂ ನಾಗಾಭರಣ, ಎದೆಗೆ ವೀರಭದ್ರ ಸ್ವಾಮಿಯ ಹಲಗೆ,

ಸೊಂಟಕ್ಕೆ ದಕ್ಷಬ್ರಹ್ಮನ ಶಿರ ಕಟ್ಟಿಕೊಳ್ಳುತ್ತಾರೆ. ಕೈಗೆ ಕತ್ತಿ, ಕಾಲಿಗೆ ಕಡಗ ಮತ್ತು ಗೆಜ್ಜೆ ಹಾಗೂ ಮೈಗೆ ಕಾವಿ ಜುಬ್ಬ ಮತ್ತು ಕಾವಿಯ ಕಾಸೆಗಳಿರುತ್ತದೆ. ವೀರಶೈವರಿಗೆ ಮಾತ್ರ ವಿಶಿಷ್ಟವಾದ ಈ ಕಲೆ ಅವರ ವೇಷಭೂಷಣದಿಂದಲೇ ಈ ಹೆಸರು ಪಡೆದುಕೊಂಡಿದೆ ಎನಿಸುತ್ತದೆ. ಕಾಸೆ ಕಟ್ಟಿದವರೇ ಈ ಕಲೆಯ ಪ್ರಮುಖ ಕಲಾವಿದರು ವೀರಗೆಜ್ಜೆಯೇ ವೀರಕಾಸೆಯಾಗಿ ನಂತರ ವೀರಗಾಸೆಯಾಗಿರಬಹುದು ಎಂಬ ಅಭಿಪ್ರಾಯವೂ ಇದೆ. ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡುಬರುವ ಈ ವೀರಗಾಸೆಯ ವೇಷಭೂಷಣಗಳು ಪ್ರಾದೇಶಿಕತೆಗೆ ತಕ್ಕಂತೆ ಕೆಲವು ವ್ಯತ್ಯಾಸಗಳನ್ನು ಪಡೆದುಕೊಂಡಿವೆ. ಕೆಲವು ಕಡೆ ತಲೆಗೆ ಕೂದಲು ಮತ್ತು ರೇಷ್ಮೆದಾರದಿಂದ ತಯಾರಿಸಿದ ಚೌಲಿಯನ್ನು ಧರಿಸಲಾಗುತ್ತದೆ. ಕಾವಿ ಬಣ್ಣದ ಜರಿ ಅಂಚಿನ ಪೇಟವನ್ನು ತಲೆಗೆ ಸುತ್ತಿ ಅದರ ಮುಂಭಾಗಕ್ಕೆ ಜರಿಯ ಪಟ್ಟಿಯನ್ನು ಕಟ್ಟಲಾಗುತ್ತದೆ. ಗದ್ದದಿಂದ ತಲೆಯ ರುಮಾಲಿನವರೆಗೆ ಕೆಂಪು ಪಟ್ಟಿಯನ್ನು ಕಟ್ಟುತ್ತಾರೆ. ಸೊಂಟಕ್ಕೆ ಕೆಂಪು ಬಣ್ಣದ ಪೇಟವನ್ನು ತಲೆಗೆ ಸುತ್ತಿ ಅದರ ಮುಂಬಾಗಕ್ಕೆ ಜರಿಯ ಪಟ್ಟಿಯನ್ನು ಕಟ್ಟಲಾಗುತ್ತದೆ. ಸೊಂಟಕ್ಕೆ ಕೆಂಪು ಬಣ್ಣದ ಜೋಲುಗಳಿದ್ದು ಅವುಗಳಿಗೆ ಕಸೂತಿಗಳಿರುತ್ತವೆ. ಸೊಂಟದ ಎರಡೂ ಕಡೆ ಕಪ್ಪು ಬಣ್ಣದ ಚವರಿಕಚ್ಚುಗಳಿರುತ್ತದೆ. ಸೊಂಟಕ್ಕೆ ಬಿಳಿ ಪಂಚೆಯನ್ನು ವೀರಗಚ್ಚೆಯಾಗಿ ತೊಡುತ್ತಾರೆ. ಕೆಂಪು ಬಣ್ಣದ ಪೈಜಾಮ ಕಾಲಿಗೆ ಗೆಜ್ಜೆ, ಬಲಗೈಯಲ್ಲಿ ಮರದ ಖಡ್ಗ, ಕೊರಳಲ್ಲಿ ಬೆಳ್ಳಿಯ ಲಿಂಗದಕಾಯಿ ಎಡಗೈಯಲ್ಲಿ ಕರವಸ್ತ್ರಗಳಿರುತ್ತವೆ. ಹಾಗೆಯೇ ಕೆಲವರ ಕೈಯಲ್ಲಿ ತ್ರಿಶೂಲಾಕಾರದ ಶಸ್ತ್ರಗಳಿರುವುದೂ ಉಂಟು ಸಮಾಳ, ಮುಖವೀಣೆ, ಕಂಚಿನ ತಾಳಗಳು ಈ ಕಲೆಗೆ ಬೇಕಾದ ಮುಖ್ಯ ವಾದ್ಯ ಪರಿಕರಗಳು ಕಾಸೆ ಕಟ್ಟುವವರು ಎದೆಯ ಮೇಲೆ ಲಿಂಗಧಾರಣೆ ಮಾಡಬೇಕು.

ಆಚರಣೆ: ಸಾಮಾನ್ಯವಾಗಿ ಎಂಟರಿಂದ ಹನ್ನೆರಡು ಕಲಾವಿದರು ಕತ್ತಿಯನ್ನು ಬಾಗಿಸುತ್ತಾ ಕುಣಿಯುವ ಕಲಾವಿದರಾದರೆ, ಇಬ್ಬರು ಸಮಾಳ ಬಾರಿಸುತ್ತಾರೆ. ಒಬ್ಬ ಕರಡೆ ಬಾರಿಸುತ್ತಾನೆ, ಮತ್ತೊಬ್ಬ ಶೃತಿ, ಮತ್ತೆ ಒಬ್ಬೊಬ್ಬರು ತಾಳ ಹಾಕುತ್ತಾರೆ. ಈ ಕಾಲವಿದರಲ್ಲದೆಯೇ ಒಬ್ಬ ಮುಂದೆ ಬಂದು ಒಡಪುಗಳನ್ನು ಆಗಾಗ ಹೇಳಿ ಹಿಂತಿರುತ್ತಾನೆ. ಅವನು ಒಡಬು ಹೇಳುವವನಿಗೆ ಹುಂಗುಟ್ಟುವ ಮೂಲಕ ಪ್ರತಿಕ್ರಿಯಿಸುತ್ತಾ ಹಾಗೇ ನಿಲ್ಲುತ್ತಾನೆ. ಒಡಬು ಹೇಳುವ ವ್ಯಕ್ತಿ ಭಾವನಾತ್ಮಕವಾಗಿ ಅಭಿನಯಿಸಿ ಹಿಂದೆ ಸರಿಯುತ್ತಿದ್ದಂತೆ ಚಮಾಳ ಹಾಗೂ ಕರಡೆಯ ನಾದದ ಅಬ್ಬರಕ್ಕೆ ತಕ್ಕಂತೆ ಎಲ್ಲರೂ ರೌದ್ರತೆಯಿಂದ ಕುಣಿಯತೊಡಗುತ್ತಾರೆ. ನಿಯತವಾದ ಹೆಜ್ಜೆ, ಒಬ್ಬರಿಗೊಬ್ಬರು ತಾಕದಂತೆ ಸಾಲುಗಳನ್ನು ಏರ್ಪಡಿಸಿಕೊಳ್ಳುವ ರೀತಿ ಹಾಗೂ ಕುಣಿತದ

ಜೊತೆಗೆ ಪ್ರತಿಯೊಬ್ಬ ಕಲಾವಿದರು ತೋರುವ ವಿವಿಧ ಭಾವಗಳು ವೀರಗಾಸೆ ಕಲಾವಿದರ ಸೃಜನಶಕ್ತಿಗೆ ಒಂದು ಉದಾಹರಣೆ.

"ಇದು ವೀರಗಾಸೆಯ ನಾಂದಿ ಆಮೇಲೆ
ರುದ್ರಾಕ್ಷಿ ಮಹಿಮೆ
ಗುಗ್ಗಳದ ಒಡಬು
ವೀರಭದ್ರ ದೇವರ ಉಡುಗೆ-ತೊಡುಗೆ
ವಿಘ್ನೇಶ್ವರನ ಒಡಬು
ಪಂಚ ಮಂತ್ರಾಸುರ ಒಡಬು
ಭಸ್ಮಾಸುರ ಒಡಲು"[೧]

ಇಲ್ಲಿ ಒಬ್ಬ ವಿರಭದ್ರನ ಬದಲಾಗಿ ಎಂಟತ್ತು ಜನ ವೀರಗಾಸೆ ಹಾಕಿದ ಕಲಾವಿದರ ಸೇರ್ಪಡೆ ಒಂದು ಮುಖ್ಯ ಅಂಶವಾದರೆ ಈ ಸಮೂಹ ನೃತ್ಯ ತಂಡವನ್ನು ಜಾತ್ರೆ, ಸಂತೆ, ಮೇಳಗಳಿಗೆ ವಿಸ್ತರಿಸಿದ್ದು ಇನ್ನೊಂದು ಪ್ರಮುಖ ಅಂಶ. ಅಂದರೆ ವೀರಗಾಸೆ ವಿರಶೈವರ ಮಹತ್ವಗಳನ್ನು ಹೇಳುವ ಮತ್ತು ಅವರ ಧರ್ಮವನ್ನು ಪ್ರಚುರಪಡಿಸುವ ಕಲೆಯಾಗಿ ಒಂದು ಹಂತದಲ್ಲಿ ಮಾರ್ಪಾಡಾಯಿತು. ಈ ಉದ್ದೇಶದಿಂದಾಗಿಯೇ ವೀರಭದ್ರನ ಒಡಬಿನ ಜೊತೆಗೆ ಹನ್ನೆರಡನೇ ಶತಮಾನದ ಶರಣ ಒಡಬುಗಳೂ ಈ ಕಲೆಗೆ ಸೇರಿಸಲ್ಪಟ್ಟವು. ವೀರಗಾಸೆ ಈ ರೀತಿಯಾಗಿ ತನ್ನ ಉದ್ದೇಶವನ್ನು ವಿಸ್ತರಿಸಿಕೊಂಡ ಸಂದರ್ಭದಿಂದ ಆಯಾ ಕಲಾತಂಡಗಳನ್ನು ಭಕ್ತರು ಆಹ್ವಾನಿಸುವ ಸಂಪ್ರದಾಯವೂ ಆರಂಭವಾಯಿತು.

೬. ಭಜನೆ ಸಂಪ್ರದಾಯ:

ಭಜನೆ ಕರ್ನಾಟಕದಾದ್ಯಂತ ಕಂಡುಬರುತ್ತದೆ. ಒಂದೊಂದು ಭಾಗದಲ್ಲಿ ಹಾಡುವ ಭಜನೆಗಳ ಹಿನ್ನೆಲೆ ಹಾಗೂ ಪ್ರಕಾರಗಳ ಮಟ್ಟಿಗೆ ಸ್ವಲ್ಪ ವ್ಯತ್ಯಾಸವಾದರೂ ಒಟ್ಟಾಗಿ ಭಜನೆ ಮೇಳಗಳು ಒಂದಲ್ಲ ಒಂದು ರೀತಿಯಲ್ಲಿ ನಾಡಿನ ಉದ್ದಗಲಕ್ಕೂ ವ್ಯಾಪಿಸಿವೆ.

ಮಧ್ಯಕಾಲಿನ ಭಕ್ತಿಯುಗ ಈ ಭಜನೆ ಸಂಪ್ರದಾಯಕ್ಕೆ ಹತ್ತಿರವಾದುದು. ಶೈವ ಮತ್ತು ವೈಷ್ಣವ ಪಂಥಗಳೆರಡೂ ವ್ಯಾಪಕವಾಗಿ ಭಜನೆಯ ಪರಂಪರೆಯೊಂದನ್ನು ಹುಟ್ಟು ಹಾಕಿದವು. ವೈದಿಕ ಪರಂಪರೆಯ ನಿಗೂಢತೆಯನ್ನು, ಸೀಮಿತತೆಯನ್ನು

---

೧. ಪ್ರೊ. ಹಿ.ಚಿ.ಬೋರಲಿಂಗಯ್ಯ (ಸಂ.), ಕರ್ನಾಟಕ ಜನಪದ ಕಲೆಗಳ ಕೋಶ, ಪು. ೭೨-೭೩.

ಮೊತ್ತಮೊದಲ ಬಾರಿಗೆ ಇಲ್ಲಿ ಸಾಮಾಜಿಕವಾಗಿ ಸಾರ್ವತ್ರಿಕಗೊಳಿಸಲಾಯಿತು. ಈ ಪರಂಪರೆಯ ದಾಸರು ಭಜನೆಗಳಿಗೆ ತಾತ್ತ್ವಿಕ ರೂಪವೊಂದನ್ನು ಕೊಡುವುದಕ್ಕೆ ಸಮರ್ಥರಾದರು. ನವವಿಧ ಭಕ್ತಿಗಳ ಮೂಲಕ ಅವರ ಭಜನೆಗೊಂಡು ವ್ಯಾಖ್ಯಾನವನ್ನು ನೀಡಿದರು. ಹೀಗೆ ವ್ಯಾಖ್ಯೆ ಕೊಡುವುದರ ಮೂಲಕವೇ ಅವರ ಭಜನೆಗಳಿಗೊಂದು ನಿರ್ದಿಷ್ಟ ಒದಗಿತು. ಇಲ್ಲಿ ಗುರುತಿಸುವ ಭಜನೆ ಸಂಪ್ರದಾಯ ವೈಶಿಷ್ಟ್ಯವೆಂದರೆ ಈ ರೀತಿಯ ವ್ಯಾಖ್ಯೆಯನ್ನು ಕೂಡ ಕಾಲಾಂತರದಲ್ಲಿ ಮರಿಯುವುದು ಅಷ್ಟು ಮಾತ್ರವಲ್ಲ ಶೈವ ಮತ್ತು ವೈಷ್ಣವ ಎನ್ನುವ ವಿಂಗಡಣೆಯ ಗೆರೆಯನ್ನು ದಾಟಿ ಭಾವೈಕ್ಯದ ಕಡೆಗೆ ಸಾಗಿದೆ.

ಜನಪದರ ಭಜನೆಗಳೆಂದರೆ ಜಾತಿ ಮತಗಳನ್ನು ಮೀರಿದ ದೇಶಿಯ ಆರಾಧನಾ ಗೀತೆಗಳ ಸಂಪ್ರದಾಯ. ಅದರಲ್ಲಿ ಇಲ್ಲಿಯ ಗ್ರಾಮದೇವತೆಗಳ ಸ್ತುತಿ ಮುಖ್ಯವಾದುದು ಛಂದಸ್ಸು ಕೂಡ ಶುದ್ಧವಾಗಿ ದೇಶಿಯ ದಾಸರು ಬಳಸಿದ ಭಾಷೆ ಛಂದಸ್ಸುಗಳ ಶಿಷ್ಟ ರೂಪಗಳನ್ನು ಇಲ್ಲಿ ಗುರುತಿಸುವಂತಿಲ್ಲ ಬಹುತೇಕವಾಗಿ ಅವು ಶ್ರೀಮಂತರು ಪ್ರಾದೇಶಿಕ ಭಾಷೆಯ ರೂಪವಿಲ್ಲದೆ ಭಜನೆಗೂ ಮೇಳಗಳು ಕಂಡುಬರುತ್ತವೆ. ಹಿಂದುಗಳು ಮುಸಲ್ಮಾನ ಧರ್ಮದ ವಿಚಾರಗಳನ್ನೂ ಮುಸಲ್ಮಾನರು ಹಿಂದೂ ಧರ್ಮದ ವಿಚಾರಗಳನ್ನು ಭಜನೆಯಲ್ಲಿ ಒಳಗೊಳಿಸುವುದು ಇಲ್ಲಿಯ ವಿಶೇಷ.

ಭಜನೆಯನ್ನು ವ್ಯಕ್ತಿಗತ ಮತ್ತು ಸಾಮೂಹಿಕ ಎಂದು ಎರಡು ಹಂತಗಳಲ್ಲಿ ವಿಭಾಗಿಸಬಹುದು. ವ್ಯಕ್ತಿಗತ ಭಜನೆಯ ಸ್ಪಷ್ಟ ರೂಪಗಳನ್ನು ಏಕತಾರಿ ಪದಗಳಲ್ಲಿ ಕಾಣುತ್ತೇವೆ. ಏಕತಾರಿ ನುಡಿಸುತ್ತ ತಾನೊಬ್ಬನೇ ಭಜನೆ ಹಾಡುವುದು ಅಲ್ಲಿಯ ಕ್ರಮ. ಸಾಮೂಹಿಕ ಭಜನೆ ಮೇಳ ರೂಪದ್ದು, ಇಲ್ಲಿಯ ಸಂಖ್ಯೆಯನ್ನು ನಿರ್ದಿಷ್ಟವಾಗಿ ಹೇಳದೆ ಒಂದಕ್ಕಿಂತ ಹೆಚ್ಚು ಎನ್ನುವುದೇ ಸೂಕ್ತ ತಾಳ, ತಪ್ಪಡಿ, ಏಕತಾರಿ, ಚಂಪೂ ಮೊದಲಾದ ವಾದ್ಯ ವಿಶೇಷಗಳು ಇಲ್ಲಿರುತ್ತವೆ.

ಸಾಮೂಹಿಕ ಭಜನೆಯಲ್ಲಿ ಹಿಮ್ಮೇಳವಿರುತ್ತದೆ. ಮುಖ್ಯಗಾಯಕ ಭಜನೆಯನ್ನು ಹಾಡುತ್ತಾ ಹೋದಂತೆ ಉಳಿದವರು ಅದೇ ದಾಟಿಯಲ್ಲಿ ಇದನ್ನು ಪುರಾವರ್ತಿಸಿದರೆ ಇನ್ನು ಕೆಲವೊಮ್ಮೆ ಜೊತೆಯಲ್ಲೆ ಇಡೀ ಹಾಡನ್ನು ಪುನರಾವರ್ತಿಸುವುದು ಕಂಡು-ಬರುತ್ತದೆ. ನಿಧಾನಗತಿಯಲ್ಲಿ ಆರಂಭವಾಗಿ ಆ ಮೇಲೆ ತ್ವರಿತಗತಿಯಲ್ಲಿ ಮುಕ್ತಾಯ-ವಾಗುವುದು ಭಜನೆಗಳ ಸಾಮಾನ್ಯ ಲಕ್ಷಣ. ಪ್ರತಿಯೊಂದು ಭಜನೆ ಆರಂಭವಾಗುವಾಗ ಮತ್ತು ಮುಗಿಯುವಾಗ ಮುಖ್ಯಗಾಯಕನು "ಹರಹರ ಮಹಾದೇವ" ಎನ್ನುತ್ತಾನೆ. ಆಗ ಎಲ್ಲರೂ ಅದನ್ನು ಪುನರಾವರ್ತಿಸುತ್ತಾರೆ. ಹಾಗೆಯೇ 'ಶ್ರೀಮದ್ರಾಮಾಯಣ

ಗೋವಿಂದಾ' ಎಂದಾಗ "ಗೋವಿಂದಾ ಗೋವಿಂದಾ" ಎಂದು ಗುಂಪಿನಲ್ಲಿ ಗೋವಿಂದವಾಗುವುದು ಇದೆ. ಭಜನೆಯ ಕೊನೆಯ ಹಂತವೆಂದರೆ 'ಮಂಗಲಪದ' ಆಗ ಮೇಲೆ ಹೇಳಿದ ಜಯಕಾರಗಳು ಬಹಳ ಹೊತ್ತಿನವರೆಗೆ ನಡೆಯುತ್ತವೆ. ಸ್ಥಳೀಯ ದೇವರಗಳಿಗೂ ಆಗ ಜಯಕಾರಗಳಿರುತ್ತದೆ.

ನಿತ್ಯ ಭಜನೆಗಳು, ವಾರದ ಭಜನೆಗಳು, ವರ್ಷದ ಭಜನೆಗಳು ಎಂದು ಸ್ಥೂಲವಾಗಿ ಭಜನೆಯ ಕಾಲಗಳನ್ನು ವಿಭಾಗಿಸಬಹುದು. ಇದಲ್ಲದೆ ಸೋಮವಾರ, ಶನಿವಾರ ಮುಂತಾದ ಆಯಾಯ ದೇವರಿಗೆ ಸಲ್ಲುವ ವಾರಗಳಲ್ಲಿಯೂ ಭಜನೆ ನಡೆಯುವುದಿದೆ. ದೇವರ ಗುಡಿ, ಮನೆಗಳಲ್ಲಿ ಹಾಗೂ ಕೆಲವೊಮ್ಮೆ ಬೀದಿಬೀದಿಗಳಲ್ಲಿ ನಿರ್ದಿಷ್ಟ ಮಂಗಳ ಭಜನೆ ನಡೆಯುತ್ತವೆ. ಇಂತಹ ಸಂದರ್ಭದಲ್ಲಿ ದೇವರ ಭಾವಚಿತ್ರವನ್ನು ಅಲಂಕರಿಸಿ ಮನೆಮನೆಗೆ ಹೋಗುತ್ತಾರೆ. ಮೆನಯವರಿಂದ ಹಣ್ಣುಕಾಯಿ, ದಕ್ಷಿಣೆ ಪೂಜೆಗಳಾದ ಮೇಲೆ ಗುಡಿಯಲ್ಲಿಯೂ ಭಜನೆ ಇರುತ್ತದೆ. ಇದಕ್ಕೆ 'ಊರಾಡುವುದು' ಎಂದೇ ಹೆಸರು.

ಸಾಮಾನ್ಯವಾಗಿ ಭಜನೆ ಮೇಳದವರಿಗೆ ಆಹಾರ ನಿರ್ಬಂಧಗಳಿಲ್ಲ. ಆದರೂ ಕೆಲವೊಮ್ಮೆ ಭಜಕರು ಫಲಾಹಾರವಷ್ಟೇ ಮಾಡುವುದಿದೆ. ತಿಂಗಳ ಭಜನೆಯು ಸಾಮಾನ್ಯವಾಗಿ ಶ್ರಾವಣ ಮತ್ತು ಕಾರ್ತಿಕ ಮಾಸದಲ್ಲಿ ಇಡೀ ತಿಂಗಳು ನಡೆಯುತ್ತದೆ. ಇಂತಹ ಸಂದರ್ಭಗಳಲ್ಲಿ ಹಗಲು–ರಾತ್ರಿ ನಿರಂತರ ಭಜನೆ ನಡೆಯುತ್ತದೆ. ಕೊನೆಯ ದಿನ ವಿಶೇಷ ಪೂಜೆಯಿರುತ್ತದೆ. ಇಂತಹ ಭಜನೆಗಳಲ್ಲಿ ಭಕ್ತಾದಿಗಳು ಕುಣಿಯುವುದೂ ಇದೆ. ಈ ಸರಳವಾದ ಕುಣಿತವನ್ನು ಭಜನೆ ಕುಣಿತ ಎನ್ನುವರು. ಕುಣಿಯುವವರು ಕೈತಾಳಗಳನ್ನು ಹಿಡಿದುಕೊಂಡು ವೃತ್ತಾಕಾರವಾಗಿ ಸುತ್ತುತ್ತಾರೆ. ಮಧ್ಯೆ ಮಧ್ಯೆ ಭಜನೆಯ ತಾಳಲಯಕ್ಕನುಗುಣವಾಗಿ ಒಮ್ಮೆ ಎಡಗಾಲು ಮತ್ತೆ ಬಲಗಾಲನ್ನು ಎತ್ತುತ್ತಾ ಏಕಕಾಲದಲ್ಲಿ ತಾಳವನ್ನು ನುಡಿಸುತ್ತಾರೆ. ಇದು ಒಂದು ವಿಧ ಇನ್ನೊಂದು ವಿಧದಲ್ಲಿ ಮೇಳದವರೆಲ್ಲರೂ ಮುಂದಕ್ಕೆ ಹಾರಿ ತಾಳ ಹಾಕಿ ಮತ್ತೆ ಹಿಂದಕ್ಕೆ ಹಾರಿ ಇನ್ನೊಮ್ಮೆ ತಾಳ ಹಾಕುತ್ತಾರೆ. ಹೀಗೆ ಹಿಂದಕ್ಕೆ ಹಾರುವಾಗ, ತಿರುಗಿ, ಅಂದರೆ ಬೆನ್ನ ಹಿಂದಕ್ಕೆ ತಾಳ ಹಾಕುವುದು ವಾಡಿಕೆ. ಹೀಗೆ ಕೆಲವೊಂದು ಆಂಶಿಕ ಬದಲಾವಣೆಗಳಿದ್ದರೂ ಹೆಚ್ಚಾಗಿ ಈ ಕುಣಿತಗಳಲ್ಲಿ ಏಕತಾನತೆಯಿರುತ್ತದೆ. ಇಂತಹ ಭಜನೆಗಳಿಗೆ ಅಪಾರ ಸಂಖ್ಯೆಯಲ್ಲಿ ಪ್ರೇಕ್ಷಕರಿರುತ್ತಾರೆ. ಹಾಗೆಯೇ ಬೆಳಗಿನವರೆಗೆ ಪ್ರತ್ಯಕ್ಷವಾಗಿ ಪಾಲ್ಗೊಳ್ಳುತ್ತಾರೆ.

ಸಾಮಾನ್ಯವಾಗಿ ಭಜನೆಗಳಲ್ಲಿ ಸ್ತ್ರೀಪುರುಷರೆನ್ನುವ ಭೇದವಿಲ್ಲ ಪರಸ್ಪರ ಕಲೆತು ಭಜನೆ, ಮಾಡಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸ್ತ್ರೀಯರು ಮತ್ತು ಪುರುಷರು

ಪ್ರತ್ಯೇಕವಾಗಿ ಪಂಕ್ತಿಗಳಲ್ಲಿ ಕುಳಿತುಕೊಳ್ಳುತ್ತಾರೆ. ಆದರೆ ಮೇಲೆ ಹೇಳಿದ ಇಂತಹ ಕುಣಿತಗಳಲ್ಲಿ ಸ್ತ್ರೀಯರು ಭಾಗವಹಿಸುವುದಿಲ್ಲ. ಹಾಗೆಯೇ ಈಗಾಗಲೇ ಹೇಳಿದ ಸಂದರ್ಭಗಳಲ್ಲದೆ ಕೆಲವೊಮ್ಮೆ ವ್ಯಕ್ತಿಯ ಮರಣದ ಸಂದರ್ಭದಲ್ಲಿ ಮೈನೆರೆದಾಗ, ಗುರುಗಳ ಪುಣ್ಯದಿನಗಳಲ್ಲಿ ಉರುಸುಗಳಲ್ಲಿಯೂ ಭಜನೆ ನಡೆಯುವುದಿದೆ.

ಪ್ರತಿಯೊಂದು ಆರಾಧನಾ ಕಲೆಗಳಿಗೂ ಸಾಹಿತ್ಯ ಪರಂಪರೆಯೊಂದಿರುವಂತೆ ಭಜನೆ ಸಂಪ್ರದಾಯಕ್ಕೂ ಸಾಹಿತ್ಯ ಪರಂಪರೆಯಿದೆ. ಈಗಾಗಲೇ ಹೇಳಿದ ಮಧ್ಯಕಾಲೀನ ಭಕ್ತಿಪಂಥದ ಪರಂಪರೆಯೇ ಭಜನೆಗೆ ಹಿನ್ನೆಲೆಯಾಗಿದೆ. ಅಷ್ಟಲ್ಲದೆ ದಾಸ ಸಾಹಿತ್ಯದ ನೇತಾರರೂ ಇದೇ ಪರಂಪರೆಯಲ್ಲಿ ಬರುತ್ತಾರೆ. ಈಚಿನ ದಿನಗಳಲ್ಲಿ ಭಜನೆಯನ್ನು ಜನಪದ ಪರಂಪರೆಗೆ ತಂದು ನಿಲ್ಲಿಸಿದ ಅನೇಕ ಹಿರಿಯ ಕವಿಗಳು ಇಲ್ಲಿ ಆಗಿ ಹೋಗಿದ್ದಾರೆ. ಕಲಬುರ್ಗಿಯ ಕಡಕೊಳ ಮಡಿವಾಳಪ್ಪ ಅದೇ ಜಿಲ್ಲೆಯ ರಾಮಪುರದ ಬಕ್ಕಪ್ಪ, ಶಿಶುನಾಳ ಶರೀಫ, ಕಲಬುರ್ಗಿಯ ಕೂಡಲೂರು ಬಸವಲಿಂಗ ಶರಣ ಬಿಜಾಪುರದ ಸಾರವಾಡ ಚಿಕ್ಕಪ್ಪಯ್ಯ ಇವರೆಲ್ಲ ಉತ್ತರ ಕರ್ನಾಟಕದಲ್ಲಿ ಭಜನೆ ಸಂಪ್ರದಾಯವನ್ನು ಹಿರಿದಾಗಿ ಬೆಳೆಸಿದವರು. ಉಳಿದಂತೆ ದಕ್ಷಿಣ ಕರ್ನಾಟಕದಲ್ಲಿ ಆಯಾ ಪ್ರದೇಶದ ವೃತ್ತಿಗಾಯಕರೇ ಇದನ್ನು ಮುಂದುವರಿಸಿದ್ದಾರೆ. ಆದರೆ ದಕ್ಷಿಣ ಕನ್ನಡದಲ್ಲಿ ಅಂತಹ ಪರಪಂರೆ ಕಂಡುಬರುವುದಿಲ್ಲ.

೭. ನಂದಿ ಧ್ವಜ ಕುಣಿತ:

'ನಂದಿಧ್ವಜ'ವನ್ನು ನಂದೀಕಂಬ, ನಂದಿಕೋಲು, ಬರಡೇಕಂಬ, ವ್ಯಾಸಗೋಲು, ನಂದೀಪಟ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಸದ್ಯಕ್ಕೆ ಕರ್ನಾಟಕದಲ್ಲಿ ವೀರಶೈವರು, ನಾಯಕರು, ಮೈಸೂರು ಅರಸರ ಸಂಬಂಧಿಗಳು ಹಾಗೂ ಇತರೇ ಕೆಲವು 'ವೀರ' ಮನೆತನಗಳು ಧಾರ್ಮಿಕ ಉತ್ಸವಗಳ ಸಂದರ್ಭದಲ್ಲಿ ಈ ನಂದಿಧ್ವಜವನ್ನು ಪ್ರದರ್ಶಿಸುತ್ತಾರೆ. ವೀರಶ್ಯವರ ಪ್ರಕಾರ ಇದು ವೀರಭದ್ರನು ತನ್ನ ವಿರೋಧಿಯಾದ ದಕ್ಷಬ್ರಹ್ಮನ ಮೆಲೆ ಸಾಧಿಸಿದ ವಿಜಯದ ಸಂಕೇತವಾದರೆ ನಾಯಕ ಜನಾಂಗದವರಿಗೆ ತಮ್ಮ ಸುಸಂಸ್ಕೃತ ವೀರನಾದ ನಾಯ್ಕನ ಹಟ್ಟಿಯ ತಿಪ್ಪೇಸ್ವಾಮಿಯ ಸಂಕೇತ. ಹಾಗೆಯೇ ದಸರಾ ಉತ್ಸವದಲ್ಲಿ ಪ್ರದಶಿಸಲಾಗುವ ಮೈಸೂರಿನ ಬೃಹತ್ ನಂದೀಕರು ಯದುವಂಶದ ಅರಸರ ವಿಜಯದ ಸಂಕೇತ ಎಂದು ಹೇಳಲಾಗುತ್ತದೆ.

ನಂದಿಕಂಬ ಹೊತ್ತು ಕುಣಿಯುವವನು ಗಂಡು ಹೆಜ್ಜೆ ಹಾಕಿ ದೋತ್ರ ಧರಿಸಿರುತ್ತಾನೆ. ತಲೆಗೆ ಪೇಟ, ಹಣೆಗೆ ವಿಭೂತಿ, ಕಾಳಿಗೆ ಗೆಜ್ಜೆ, ನಂದೀಕಂಬವನ್ನು ಹಿಡಿದಿಟ್ಟುಕೊಳ್ಳುವ ಹೆಗಲಿಗೆ ಹಾಕಿದವರ ಇವಿಷ್ಟು ಕುಣಿತಗಾರನ ವೇಷಭೂಷಣ,

ನಂದೀಕಂಬದ ಕಲಾವಿದ ಬಲಿಷ್ಠ ದೇಹವುಳ್ಳವನಾಗಿರಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಈ ಕುಣಿತದ ಹಿನ್ನೆಲೆಗೆ ಕರಡೆ, ಡೊಳ್ಳು, ಚಮಾಳ ತಾಳ ಮತ್ತು ಶಹನಾಯಿ ಅಥವಾ ನಾಗಸ್ವರಗಳಿರುತ್ತವೆ. ಈ ಕುಣಿತಕ್ಕೆ ಸಾಮಾನ್ಯವಾಗಿ ತಮಟೆ ನಗಾರಿಗಳನ್ನು ಬಳಸಲಾಗುವುದಿಲ್ಲ. ಬೆಟ್ಟಕ್ಕೆ ಹೋಗಿ ಸುಮಾರು ೧೮-೨೦ ಅಡಿ ಎತ್ತರದ ಗಟ್ಟಿಮುಟ್ಟಾದ ಬಿದಿರು ಕಂಬವನ್ನು ಶುಭ ಮುಹೂರ್ತದಲ್ಲಿ ಕಡಿದು ತರಲಾಗುತ್ತದೆ. ನಂದತ ಅದನ್ನು ದೇವಸ್ಥಾನದ ಆವರಣದಲ್ಲಿ ನೆಲಕ್ಕೆ ಸೇರದಂತೆ ಮಡಿಯಲ್ಲಿ ಇಡಲಾಗುತ್ತದೆ. ಕೆಳಗಿನ ತಾಳುಗಂಬಕ್ಕೆ ಪುಟ್ಟ ಮಂಟಪದಂತೆ ಪೀಠವನ್ನು ರಚಿಸಲಾಗುತ್ತದೆ. ಅದರ ಮೇಲೆ ಹಿತ್ತಾಳೆಯ ನಂದಿಯನ್ನು ಕೂರಿಸಲಾಗುತ್ತದೆ. ಈ ಪೀಠಕ್ಕೆ ಹಿತ್ತಾಳೆ ಗಗ್ಗರವನ್ನು ಸೇರಿಸಲಾಗುತ್ತದೆ. ಕುಣಿಯುವಾಗ ಗಗ್ಗರದ ನಿಯವಾದ ಸದ್ದು ಮಾಡುತ್ತಾ ಕೇಳಲು ಸುಮಧುರವಾಗಿರುತ್ತದೆ. ಗಗ್ಗರದ ಮೇಲೆ ಇದೇ ರೀತಿಯ ಸದ್ದು ಮಾಡುವ ಹಿತ್ತಾಳೆಯ ಎರಡು ಬಳೆಗಳು ಇರುತ್ತವೆ. ಇದನ್ನು ಕೊಳಗ ಎಂದು ಕರೆಯಲಾಗುತ್ತದೆ. ಈ ಕೊಳಗ ಮತ್ತು ಗಗ್ಗರಗಳ ನಡುವೆ ಛತ್ರಿಯಾಕಾರದ ತಗಡುಗಳ ಜಾಲರಿ ಇರುತ್ತದೆ. ಜಾಲರಿಯ ಛತ್ರಿಗೆ ಸುತ್ತ ತಗಡಿನ ಲೋಲಾಕುಗಳಿರುತ್ತವೆ. ಈ ರೀತಿಯ ಗಗ್ಗರ ಬಳೆ ಮತ್ತು ಜಾಲರಿಗಳ ಸಾಲು ಕಂಬದ ಸುಮಾರು ೧೫ ಅಡಿ ಎತ್ತರವನ್ನು ವ್ಯಾಪಿಸುತ್ತವೆ. ಇವುಗಳ ಮೇಲಿನ ಭಾಗದ ಬಿದಿರು ಮರಗಳನ್ನು ಬಣ್ಣ ಬಣ್ಣದ ಬಟ್ಟೆಗಳಿಂದ ಸುತ್ತಲಾಗುತ್ತದೆ. ತುದಿಯಲ್ಲಿ ಕಾವಿ ಬಣ್ಣದ ಸಣ್ಣ ಧ್ವಜಗಳಿರುತ್ತವೆ. ಧ್ವಜದ ತುದಿಗೆ ರೇಷ್ಮೆದಾರದ ಕುಚ್ಚಿನ ಅಲಂಕಾರ ಇರುತ್ತದೆ. ನಂದೀಕಂಬದ ತುತ್ತತುದಿಗೆ ಒಂದು ಪುಟ್ಟ ಛತ್ರಿ ಇರುತ್ತದೆ. ಛತ್ರಿಯ ಸುತ್ತ ಲೋಲಾಕುಗಳಿರುತ್ತದೆ. ಇದನ್ನು ಕಲಶ ಎಂದು ಕರೆಯಲಾಗುತ್ತದೆ.

ನಂದೀಕಂಬದ ಕುಣಿತ ಅದರ ಎತ್ತರ ಮತ್ತು ಭಾರದ ಕಾರಣಕ್ಕಾಗಿ ಅಷ್ಟು ಸಲೀಸಲ್ಲ. ಹೀಗಾಗಿ ಅದನ್ನು ಕುಣಿಯುವುದು ಒಂದು ರೀತಿಯ ಶಕ್ತಿ ಪ್ರದರ್ಶನವೂ ಹೌದು. ಅಲ್ಲದೆ ಕುಣಿಯುವಾಗ ಯಾವ ಕಾರಣಕ್ಕೂ ನಂದೀಕಂಬ ಬೀಳಬಾರದು. ಬಿದ್ದರೆ ಅದು ಅಶುಭ ಸೂಚಕ ಮತ್ತು ಅನಾಹುತ ಸಂಕೇತ ಕೂಡ. ಈ ಕಾರಣದಿಂದ ನಂದೀಕಂಬ ಹೊತ್ತು ಕುಣಿಯುವ ಕಲಾವಿದ ಕೇವಲ ಶಕ್ತಿವಂತನಷ್ಟೇ ಅಲ್ಲ ಯುಕ್ತಿವಂತನೂ ಆಗಿರಬೇಕಾಗುತ್ತದೆ. ನಂದೀಕಂಬದ ಕುಣಿತದಲ್ಲಿ ಒಂದ್ಹೆಜ್ಜೆ ಎರಡೆಜ್ಜೆ, ಮೂರೆಜ್ಜೆ, ನಾಲ್ಕೆಜ್ಜೆ, ದೌಡಹೆಜ್ಜೆ, ಚಿಕ್ಕ ಹೆಜ್ಜೆ, ಮಧ್ಯೆಹೆಜ್ಜೆ, ಕಟ್ಟಿಹೆಜ್ಜೆ ಮುಂತಾದ ಹಲವು ಪ್ರಕಾರಗಳಿವೆ.

೮. ತಮಟೆ ವಾದನ:

ಕೊಡಗು ಮತ್ತು ದಕ್ಷಿಣ ಕನ್ನಡವನ್ನುಳಿದು ಕರ್ನಾಟಕದಾದ್ಯಂತ ತಮಟೆ ಪ್ರಸಿದ್ಧವಾಗಿದೆ. ಅದರಲ್ಲೂ ಚಾಮರಾಜನಗರ ಜಿಲ್ಲೆಯಲ್ಲಿನ ಹರಿಜನರ ಅದರಲ್ಲೂ ಮುಖ್ಯವಾಗಿ ಆದಿಕರ್ನಾಟಕದವರ ತಮಟೆವಾದನ ವಿಶೇಷವೆಂಬುದು ತಮಟೆಗಿರುವ ಹೆಗ್ಗಳಿಕೆ. ಹಲಗೆ, ತಪ್ಪಡೆ, ಪಟದ ಹರೆ ಎಂದು ಕರ್ನಾಟಕದಲ್ಲಿ ಕರೆಯಲಾಗುವ ಇದನ್ನು 'ಪಲಕ' ಎಂದು ತೆಲುಗಿನಲ್ಲಿ ಕರೆಯುತ್ತಾರೆ.

ತಮಟೆಗೆ ಬಹಳ ಪ್ರಾಚೀನವಾದ ಇತಿಹಾಸವಿದೆ. "ಅದರ ಪ್ರಾಚೀನತೆಯು ವಡ್ಡಾರಾಧನೆಯ ಕಾಲಕ್ಕೆ ಹೊಗುತ್ತದೆ.(ಕ್ರಿ.ಶ ೯ನೆ ಶತಮಾನ) 'ಪರ' ಎಂದು 'ವಡ್ಡಾರಾಧನೆ'ಯಲ್ಲಿಯೂ ಅಲ್ಲಮನ ವಚನ ಚಂದ್ರಿಕೆ, ಬಸವಣ್ಣನ ವಚನಗಳು, ಜೀವಂಧ್ರರ ಚರಿತೆಗಳಲ್ಲಿ ಹರೆ (ಪರೆ) ಎಂಬುದಾಗಿಯೂ ಸನತ್ಕುಮಾರ ಚರಿತ್ರೆ, ಸೊಬಗಿನ ಸೋನೆ, ರಾಘವಾಂಕ ಚರಿತೆ, ಚೆನ್ನಬಸವಪುರಾಣ, ಭರತೇಶ ವೈಭವ, ಸಿದ್ಧರಾಮ ಚರಿತೆಗಳಲ್ಲಿ ತಪ್ಪಟೆ, ತಂಬಟೆ, ತಂಬರ ಇತ್ಯಾದಿ ಹೆಸರುಗಳಿಂದಲೂ ಉಲ್ಲೇಖಿತವಾಗಿದೆ."[೧]

ತಮಟೆಯು ಹಳ್ಳಿಯ ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಜಾತ್ರೆ, ಉತ್ಸವ, ಕುಣಿತ, ಹಬ್ಬ, ಬಯಲಾಟ ಮರಣ, ಮದುವೆ, ಮೆರವಣಿಗೆಗಳಿಗೆ ಹಲಗೆ ಅವಶ್ಯಕ. ರಾಜರ ಕಾಲದಲ್ಲಿ ಹಲಗೆ ಬಡಿಯುತ್ತಲೇ ಡಂಗುರ ಸಾರುವುದು ವಾಡಿಕೆಯಾಗಿತ್ತು. ಇತ್ತೀಚಿನ ದಿನಗಳಲ್ಲಿಯೂ ಕಾಲರಾ, ನೆರೆ ಮುಂತಾಗಿ ತಕ್ಷಣ ಎಚ್ಚರಿಕೆ ವಹಿಸಬೇಕಾದ ಸಂದರ್ಭಗಳಲ್ಲಿ ಹಲಗೆ ಇರುವ ಕಡೆ ಡಂಗುರ ಸಾರುವುದುಂಟು.

ತಮಟೆಯ ತಯಾರಿ ಸರಳವಾದುದು, ಒಂದು ವೃತ್ತಾಕಾರವಾದ ಮರದ ಇಲ್ಲವೇ ಕಬ್ಬಿಣದ ಬಲೆಯನ್ನು ಸಿದ್ಧಗೊಳಿಸಲಾಗುತ್ತದೆ. ಈ ಬಳೆಗೆ ನಾಲ್ಕು ಚಕ್ಕೆಗಳನ್ನು ಮಾಡಿ ಮೊಳೆ ಹೊಡೆದು ಬಿಗಿಗೊಳಿಸಲಾಗುತ್ತದೆ. ಮರದ ಬಳೆಗಾದರೆ ಹೊನರು ಮರ, ಸಿಗರೇವು ಮರ, ಹಲಸಿನ ಮರವನ್ನು ಹಾಕಿದರೆ ಉತ್ತಮ ತಮಟೆಯಾಗುತ್ತದೆ. ಕಬ್ಬಿಣದ ಬಳೆಗಾದರೆ ಉತ್ತಮ ಬಂಡಿಯ ಚಕ್ರದ ಪಟ್ಟಾವನ್ನು ಉಪಯೋಗಿಸುತ್ತಾರೆ. ಈ ಬಳೆಯ ವ್ಯಾಸ ಸುಮಾರು ಅರ್ಧ ಅಂಗುಲದಿಂದ ಒಂದೂವರೆ ಅಡಿ-ಯಾಗಿರುತ್ತದೆ. ಮೇಕೆ ಚರ್ಮ ಇದರ ಮುಚ್ಚಳಿಕೆಯಾಗಿರುತ್ತದೆ. ಹುಣಸೆ ಬೀಜದ ಅಂಟು, ಮೇಕೆ ಇಲ್ಲವೇ ದನದ ಚರ್ಮದ ದಾರದಿಂದಲೇ ಈ ಚರ್ಮವನ್ನು ಬಳೆಗೆ

೧. ರಾಜಶೇಖರ.ಪಿ.ಕೆ, ದಕ್ಷಿಣ ಕರ್ನಾಟಕದ ಜನಪದ ವಾದ್ಯಗಳು, ಪು. ೨೨೧.

ಬಿಗಿಯಲಾಗುತ್ತದೆ. ಪ್ರಾದೇಶಿಕವಾಗಿ ಹಲಗೆಯ ಆಕಾರ ವ್ಯತ್ಯಾಸವಾಗುತ್ತದೆ. ಹೀಗಾಗಿ ಒಂದೂವರೆ ಅಡಿಯಿಂದ ಎಂಟು ಅಡಿ ವ್ಯಾಸದ ಹಲಗೆಗಳಿವೆ.

ಹಲಗೆಯನ್ನು ನುಡಿಸುವುದಕ್ಕೆ ಮೊದಲು ಬೆಂಕಿಯಲ್ಲಿ ಕಾಯಿಸಿದರೆ ನಾದ ಹಿತವಾಗಿರುತ್ತದೆ. ಹಲಗೆಯ ಕಂಠಕ್ಕೆ ತೊಗಲಿನ ಬಾರು ಇರುತ್ತದೆ. ಇದನ್ನು ಹೆಗಲಿಗೆ ಏರಿಸಿ ಎದೆಯ ಎಡ ಭಾಗಕ್ಕೆ ಎತ್ತರಿಸಿ ನುಡಿಸುತ್ತಾರೆ. ಎಡಗೈ ಕಂಠದ ಮೇಲ್ಗಡೆಯಲ್ಲಿರುತ್ತದೆ. ಈ ಕೈಗೆ ಒಂದೂವರೆ ಅಡಿ ಉದ್ದ ಬೆತ್ತದ ಇಲ್ಲವೇ ಬಿದಿರಿನ 'ಛಡಿ' ಇರುತ್ತದೆ. ಎಡಗೈ ಹಲಗೆಯ ಕಂಠದ ಭಾಗದಲ್ಲಿ ಮಾತ್ರ ನುಡಿಸುತ್ತಿದ್ದರೆ ಬಲಗೈ ಹಲಗೆಯ ವಿವಿಧ ಭಾಗಗಳಲ್ಲಿ ಸಂಚರಿಸಿ ವಿವಿಧ ಗತಿಯ ನಾದವನ್ನು ಹೊರಡಿಸುತ್ತದೆ.

ಈಗಾಗಲೇ ಹೇಳಿರುವಂತೆ ಪ್ರಾದೇಶಿಕ ವ್ಯತ್ಯಾಸಗಳಿಗನುಸಾರವಾಗಿ ಹಲಗೆಯ ಆಕಾರ ಬದಲಾದಂತೆ ಹಲಗೆ ಮೇಳದ ಸ್ವರೂಪವೂ ಬದಲಾಗುತ್ತದೆ. ಗುಲ್ಬರ್ಗಾ, ಬಳ್ಳಾರಿ, ಜಿಲ್ಲೆಗಳಲ್ಲಿ ಕೇವಲ ನಾಲ್ಕಾರು ಹಲಗೆಗಳನ್ನು ಮಾತ್ರ ಸೇರಿಸಿ ಗತ್ತು ಬಾರಿಸುತ್ತಾರಾದರೆ ಸನಾದಿ, ಕಂಸೆ ದಿಮ್‌ಗಳನ್ನು ಸೇರಿಸಿ ಮೇಳ ಮಾಡುವುದು ಇತರೆಡೆ ಪ್ರಚಲಿತವಾಗಿದೆ. ಗತ್ತು ಬಾರಿಸುವುದಕ್ಕೆ ದೊಡ್ಡ ಹಲಗೆಗಳಾದರೆ ಸಣ್ಣ ಹಲಗೆಗಳು ಬೋಲ್ ಬಾರಿಸುವುದಕ್ಕೆ ಸಹಕಾರಿಯಾಗುತ್ತದೆ.

ಹಲಗೆ ಮೇಳಕ್ಕೆ ಹಲಗೆ ಮಜಲು, ಹಲಗೆ ಬಾಜಿ, ಹಲಗೆ ಮದಲಸಿ ಮುಂತಾದ ಹೆಸರುಗಳಿವೆ. ಏನೇ ಇದ್ದರೂ ಹಲಗೆಯೇ ಇಲ್ಲಿ ಪ್ರಧಾನ. ಅದಕ್ಕೆ ಸಾಟಿಯಾಗಿ ಸನಾದಿ, ದಿಮ್ಮು, ಟಕೂರಿ, ಜಾಗಡಿ ಮೊದಲಾದ ವಾದ್ಯಗಳಿರುತ್ತವೆ. ಕೆಲವೆಡೆ ತಾಸೆಯೂ ಇರುವುದುಂಟು. ಹಲಗೆಯನ್ನು ಹರಿಜನರು ಮಾತ್ರ ಬಾರಿಸುವುದರಿಂದ ಹೂಲೇಪ ಮ್ಯಾಳ, ಚಲವಾದಿಗಳ ಮೇಳ ಎಂದೂ ಕರೆಯುವುದುಂಟು. ಹರಿಜನರು 'ಪೋತುರಾಜ' ಎಂಬ ವೇಷ ಹಾಕಿಕೊಂಡು ಹಬ್ಬ ಹರಿದಿನಗಳಲ್ಲಿ ಹಲಗೆ ನುಡಿಸುತ್ತಾ ಕುಣಿಯುತ್ತಾರೆ. ಲಂಬಾಣಿಗರೂ ತಮ್ಮದೇ ಆದ ಸಣ್ಣ ಗಾತ್ರದ 'ಫಗರಿ' ಎಂದು ಕರೆಯಲಾಗುವ ಹಲಗೆಯನ್ನು ಹೊಂದಿದ್ದಾರೆ.

ತಮಟೆ ಬಾರಿಸುತ್ತಾ ನೆಲದ ಮೇಲೆ ಇರುವ ನೋಟು, ಸೂಜಿ ಇತ್ಯಾದಿಗಳನ್ನು ಕಣ್ಣು ರೆಪ್ಪೆಯಿಂದ ತೆಗೆಯುವ ಚಮತ್ಕಾರತೆಯನ್ನು ಹಲಗೆ ವಾದಕರು ಮಾಡುವುದುಂಟು. ಕೆಲವು ಕಲಾವಿದರು ಎರಡು ಹಲಗೆಗಳನ್ನು ಕಟ್ಟಿಕೊಂಡು ಬಾರಿಸುವುದು ಮುಂದಕ್ಕೆ ಉರುಳಿ ಅಕ್ಕಪಕ್ಕಕ್ಕೆ ತಿರುಗಿ ಅಂಗಾತ ಮಲಗಿ ಎರಡು ಕಾಯಿಗಳ ಮಧ್ಯೆ ತಮಟೆ ಇಟ್ಟು ನುಡಿಸುವುದು ಬಹಳ ಮುಖ್ಯವಾದ ವಿಚಾರವೆಂದರೆ

ದೇವರ ಉತ್ಸವ ಧಾರ್ಮಿಕ ಕಾರ್ಯ, ತೇರು, ಜಾತ್ರೆ ಹಾಗೂ ಹಲವು ಕಲೆಗಳಿಗೆ ಪೂರಕವಾಗಿ ತಮಟೆ ಇಲ್ಲದಿದ್ದರೆ ಏನೂ ನಡೆಯುವಂತಿಲ್ಲ.

೯. ಕೊಂಬು ಕಹಳೆ:

ಕೊಂಬು ಕಹಳೆ ಒಂದು ಗಾಳಿ ವಾದ್ಯ. ಒಂದು ಕಾಲಕ್ಕೆ ರಾಜ್ಯದಲ್ಲಿ ಹಾಗೂ ಸಮಾಜದಲ್ಲಿ, ಎಚ್ಚರಿಕೆ ನೀಡುವ ವಾದ್ಯವಾಗಿ ಬಳಕೆಯಾಗುತ್ತಿತ್ತು. ಹಾಗೆ ರಾಜಮರ್ಯಾದೆಗೆ ಅತಿರಥ, ಮಹಾರಥರ ಗೌರವಸ್ಥರ, ನಾಯಕರ ಆಗಮನದ ಸಂಕೇತವಾಗಿ ಬಳಕೆಯಾಗುತ್ತಿತ್ತು. ಕೊಂಬು ಕಹಳೆ ಗಾಳಿ ಮಧ್ಯಗಳು, ಕಹಳೆಯನ್ನು 'ಸಿಂಗ' 'ಕೊಂಬು' ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. 'ಶೃಂಗದ' ತದ್ಭವ ಸಿಂಗ, ಸಿಂಗಿ, ಕೊಂಬು ಎಂಬುದು ಬೇರೆ ವಾದ್ಯ. ಎತ್ತಿನ ಕೊಂಬನ್ನೇ ಮೊದಲು ಊದುತ್ತಿದ್ದರು. ನೋಡಲು ಎತ್ತಿನ ಕೊಂಬಿನಂತಿರುವ ಕಹಳೆಗೆ 'ಕೊಂಬು ಕಹಳೆ' ಎಂದು ಕರೆದರು. ನಂತರ ಕೊಂಬು ಲೋಹ ವಾದ್ಯವಾಯಿತು. ಕಹಳೆ ಬೇರೆ ಕೊಂಬು ಬೇರೆಯಾಯಿತು. ಕಹಳೆ ಕೊಂಬಿಗಿಂತ ದೊಡ್ಡದು. ಹೆಚ್ಚು ನಾದವನ್ನು ಹೊರಡಿಸುತ್ತದೆ. ಉತ್ತರ ಕರ್ನಾಟಕದಲ್ಲಿ ಕಹಳೆ ಅದರ ವರ್ತುಲಾಕಾರದಲ್ಲಿರುತ್ತದೆ. ಊದುವ ಭಾಗ ಒಂದು ಇಂಚು ದಪ್ಪ ಇರುತ್ತದೆ. ಕಹಳೆ ಒಂದು ಇಂಚಿನ ವೃತ್ತಾಕಾರದಿಂದ ಪ್ರಾರಂಭವಾಗಿ ತುದಿಯಲ್ಲಿ ಸುಮಆರು ೪.೫ ಇಂಚಿನಷ್ಟು ಅಗಲವಾಗಿರುತ್ತದೆ. ಎರಡು ತುದಿಗಳಲ್ಲಿಯ ನಡುವಿನ ಅಂತರ ೫ ಅಡಿ ಇರುತ್ತದೆ. ಕೊನೆಯ ಭಾಗದಲ್ಲಿ ಗಗ್ಗರಿ ಆಕಾರದ ಅಲಂಕಾರ ಇರುತ್ತದೆ. ಕಹಳೆಯಲ್ಲಿ ಮೂರು ಅಥವಾ ನಾಲ್ಕು ಭಾಗಗಳನ್ನು ಕಾಣುತ್ತೇವೆ. ಊದುವಾಗ ಆ ಭಾಗಗಳನ್ನು ಸರಿಯಾಗಿ ಜೋಡಿಸಿಕೊಂಡು ಊದಲಾಗುತ್ತದೆ. ನಂತರ ಅಷ್ಟು ಭಾಗಗಳನ್ನು ಬಿಚ್ಚಿ ಮಧ್ಯದ ಎರಡೂ ಕಡೆಯ ಭಾಗಗಳಿಗೆ ನೂಲಿನ ಅಥವಾ ಸರಪಳಿ ಹಗ್ಗದ ಪಟ್ಟಿ ಹೆಗಲಿಗೆ ಹಾಕಿಕೊಳ್ಳಲಾಗುತ್ತದೆ.

ಕಹಳೆಯಲ್ಲಿ ಎರಡು ಪ್ರಕಾರಗಳನ್ನು ಕಾಣುತ್ತೇವೆ. ಒಂದು ಅರ್ಧ ಚಂದ್ರಾಕೃತಿಯಾದರೆ, ಇನ್ನೊಂದು ಎಸ್ ಆಕೃತಿಯನ್ನು ಹೊಂದಿರುತ್ತದೆ. ಗಾಳಿ ವಾದ್ಯಗಳ ಗುಂಪಿನಲ್ಲಿ ಕಹಳೆಗೆ ಅಗ್ರಸ್ಥಾನವಿದೆ ಅದನ್ನು ಹಿತ್ತಾಳೆಯಿಂದ ಮಾಡಿರುತ್ತಾರೆ.

ಪ್ರಾಚೀನತೆ: ಪ್ರಾಚೀನ ಕಾಲದಿಂದ ಕಹಳೆಯ ಬಳಕೆ ಇತ್ತು. ಅನೇಕ ಸಂದರ್ಭಗಳಲ್ಲಿ ಕಹಳೆ ಊದುತ್ತಿದ್ದರು. ತರತರಹದ ನಾದಗಳನ್ನು ಕಹಳೆಯಿಂದ ಹೊಂದಿಸುತ್ತಿದ್ದರು. 'ಕಿತ್ತೂರಿನ ಕಾಳಗ' ಎಂಬ ಗ್ರಂಥದಲ್ಲಿರುವ 'ಹಿಡಿಯೋ ಮೋಜಿನ ಕಾಳಿಯ' ಎಂಬ ಜನಪದ ಗೀತೆಯಲ್ಲಿ ಚಿಕ್ಕಾಳಿ, ಚಿನಿಕಾಳಿ, ಎಚ್ಚರಂಗಿಕಾಳಿ, ಬಿದುದಿನ ಕಾಳಿ, ಹೆಗ್ಗಾಳಿ,

ಜೋತುಕಾಳಿ, ಮೋಜಿನಕಾಳಿ ಎಂಬ ಒಟ್ಟು ಹದಿನಾಲ್ಕು ತರಹದ ನಾದಗಳನ್ನು ಕಹಳೆಯಲ್ಲಿ ಊದುತ್ತಿದ್ದರು ಎಂಬ ಕುರುಹು ಇದೆ. 'ಸಿಂಗಿ ರಾಜ ಪುರಾಣ'ದಲ್ಲಿ ಧಾರೆ ಕಹಳೆ ಬಗ್ಗೆ, 'ಸೊಬಗಿನ ಸೋನೆ'ಯಲ್ಲಿ ಜಾವಗಹಳೆಯ ಬಗ್ಗೆ ಉಲ್ಲೇಖವಿದೆ."[೧] 'ಚೆನ್ನಬಸವ ಪುರಾಣ'ದಲ್ಲಿ ಬರಗುಗಹಳೆ, ಪಟುಗಹಳೆ, ಕೊಂಬುಗಹಳೆ, ಮೊಂಗಹಳೆಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ರಾಜರುಗಳಲ್ಲಿ 'ರಣಕಹಳೆ' ಇರುತ್ತಿತ್ತು. ಕೋಟೆಯ ಎತ್ತರದ ಸ್ಥಳದಲ್ಲಿ ಶತ್ರುಗಳು ಬಂದರೆ ಕಹಳೆ ಊದಿ ಸೈನಿಕರನ್ನು ಉಚ್ಚರಿಸುತ್ತಿದ್ದರು. ಯುದ್ಧ ಕಾಲದಲ್ಲಿ ಕಹಳೆ ಊದಿ ಸೈನಿಕರಿಗೆ ಸ್ಫೂರ್ತಿ ನೀಡುತ್ತಿದ್ದರು. 'ಹೂಲಿಗಹಳೆ' ಊದಿ ಹುಲಿ ಎಬ್ಬಿಸುತ್ತಿದ್ದರು. ಬೇಟೆಗಾಗಿ ಎಚ್ಚರಿಸುತ್ತಿದ್ದರು. ಪ್ರತಿಷ್ಠೆಯ ಸಂಕೇತಕ್ಕಾಗಿ ಬಿರುದಿನ ಕಹಳೆ ಊದುತ್ತಿದ್ದರು. ಸಮಯ ತಿಳಿಸುವುದಕ್ಕಾಗಿ ಜಾವಗಹಳೆ ಊದುತ್ತಿದ್ದರು. ಪುತ್ರೋತ್ಸವ, ಪೂಜೆ ಮೊದಲಾದ ಸಂದರ್ಭಗಳಲ್ಲಿ ಕೂಡ ಕಹಳೆ ಊದುತ್ತಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಬಳ ಮತ್ತು ಭೂತಕೋಲದ ಸಂದರ್ಭಗಳಲ್ಲಿ ನಲಿಕೆ ಜನಾಂಗದವರು ಕೊಂಬುಕಹಳೆ ಊದುತ್ತಾರೆ. ಕಾಸರಗೋಡು ಮತ್ತು ಇತರ ಗಡಿ ಭಾಗಗಳಲ್ಲಿ ಪೈರು ಕೊಯ್ದ ಬಳಿಕ ಪುರುಷರು ಕಹಳೆಯೂದುತ್ತಾ ಬಂದು ಭತ್ತ ಸಂಗ್ರಹಿಸುತ್ತಾರೆ. ಚಾಮರಾಜನಗರ, ದಕ್ಷಿಣ ಕನ್ನಡ, ಮೈಸೂರು, ತುಮಕೂರು, ಮಂಡ್ಯ ಜಿಲ್ಲೆಗಳ ಮಾರಿದೇವತೆಯ ಉತ್ಸವದ ಪ್ರತಿಯೊಂದು ಕಾರ್ಯಕ್ರಮಕ್ಕೆ ಕಹಳೆ ಪ್ರಮುಖ ವಾದ್ಯ.

ದೇವರ ಉತ್ಸವ, ಜಾತ್ರೆ, ಧರ್ಮಾಧಿಕಾರಿಗಳ ಆಗಮನದ ಸಂದರ್ಭದಲ್ಲಿ ಕಹಳೆ ಊದುತ್ತಾರೆ. ಬೆಳಗಾಂವ್, ಧಾರವಾಡ ಜಿಲ್ಲೆಗಳಲ್ಲಿ ಶವ ಸಂಸ್ಕಾರದ ಮೆರವಣಿಗೆಯಲ್ಲಿ ಕಹಳೆ ಊದುತ್ತಾರೆ. ಜೈನರ ಶವಸಂಸ್ಕಾರದ ಕಾರ್ಯಕ್ರಮದಲ್ಲಿ ಕಹಳೆಯದು ಮುಖ್ಯ ಪಾತ್ರ. ಕಹಳೆಯನ್ನು ಒಂಟಿಯಾಗಿ ಮತ್ತು ಮೇಳ ವಾದ್ಯವಾಗಿಯೂ ಉಪಯೋಗಿಸುತ್ತಾರೆ.

೧೦. ಮಾರಿಕುಣಿತ:

ಚಾಮರಾಜನಗರ ಜಿಲ್ಲೆಯಲ್ಲಿ ಮಾರಿಹಬ್ಬಗಳ ಕೊರತೆಗಳೇ ಎನ್ನುವಷ್ಟು ಜಿಲ್ಲೆಯಾದ್ಯಂತ ಹರಡಿಕೊಂಡಿದೆ. ಆ ಸಂದರ್ಭದಲ್ಲಿ ಈ ಮಾರಿಕುಣಿತದ ಬಳಕೆ- ಬರುತ್ತದೆ. ಮಾರಿಹಬ್ಬದ ಸಂದರ್ಭದಲ್ಲಿ ಪ್ರದರ್ಶಿಸಲಾಗುವ ಈ ಕುಣಿತ ಎರಡು ರೀತಿಯಲ್ಲಿರುತ್ತದೆ. ಬಲಿ ಕೊಡಲಾದ ಕೋಣನ ತಲೆಯನ್ನು ಹೊತ್ತು ಕುಣಿಯುತ್ತಾ

೧. ಪ್ರೊ. ಹಿ.ಚಿ.ಬೋರಲಿಂಗಯ್ಯ (ಸಂ.), ಕರ್ನಾಟಕ ಜನಪದ ಕಲೆಗಳ ಕೋಶ, ಪು. ೨೪೩.

ನಿರ್ದಿಷ್ಟ ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸೇರುವುದು ಒಂದು ಬಗೆ. ಇದು ಸಂಪೂರ್ಣವಾಗಿ ಆಚರಣೆಯ ಒಂದು ಭಾಗ. ಮಾರಿ ಹಬ್ಬದ ಸಂದರ್ಭದಲ್ಲಿ ಕೊಂಡ, ಬಂಡಿ ಇತ್ಯಾದಿ ಆಚರಣೆಗಳು ಮುಗಿದ ನಂತರ ಮಾರಿಯ ಪ್ರತೀಕವನ್ನು ಹೊತ್ತು ಕುಣಿಯುವುದು ಇನ್ನೊಂದು ಬಗೆ.

ಕೋಣನ ತಲೆಯನ್ನು ಹೊತ್ತು ಮೆರವಣಿಗೆ ಹೊರಡುವ ಆಚರಣೆಯ ಭಾಗವಾಗಿ ಬರುವ ಕುಣಿತ ಎಲ್ಲರಿಗೆ ಸಂಬಂಧಿಸಿದ್ದಲ್ಲ. ಈ ಆಚರಣೆ ಸಂಪೂರ್ಣ-ವಾಗಿ ದಲಿತರಿಗೆ ಸೇರಿದ್ದು. ದಲಿತರಲ್ಲಿ ಕೂಡ ಮಾರಿಯ ಪೂಜಾರಿ ಮಾತ್ರ ಆ ತಲೆಯನ್ನು ಹೊರಬೇಕು. ಬಲಿಯಾದ ಕೋಣನ ರುಂಡವನ್ನು ದೇವರ ಕಲ್ಲಮುಂದೆ ಇರಿಸಿ, ಕೋಣನ ಬಲಗಾಲನ್ನು ಕತ್ತರಿಸಿ ಅದರದೇ ಬಾಯಿಗೆ ಇಟ್ಟು ರೌದ್ರ-ಗೊಳಿಸಲಾಗುತ್ತದೆ. ತನ್ನ ಹಲ್ಲಿನಿಂದ ತನ್ನದೇ ಬಲಗಾಲನ್ನು ಕಚ್ಚಿ ಹಿಡಿದು ಈ ರುಂಡವನ್ನು ಪೂಜಿಸಲಾಗುತ್ತದೆ. ಅಷ್ಟರಲ್ಲಿ ಸ್ನಾನಮಾಡಿ ಮಡಿ ಉಟ್ಟುಕೊಂಡ ಪೂಜಾರಿಯ ಮೇಲೆ ಸಿಂಬಿ ಇಟ್ಟು ರುಂಡವನ್ನು ಹೊರಿಸಲಾಗುತ್ತದೆ. ಊರಾಚೆಯ ಮಾರಿಯ ಆ ವಾಸಸ್ಥಾನದಲ್ಲಿ ಆರಂಭವಾಗುವ ಈ ರುಂಡದ ಮೆರವಣಿಗೆ ಊರೊಳಗಿನ ಒಂದು ನಿರ್ದಿಷ್ಠ ಸ್ಥಳದವರೆಗೆ ಮುಂದುವರೆಯುತ್ತದೆ. ರುಂಡ ಹೊತ್ತ ಪೂಜಾರಿಯ ಮೈಮೇಲೆ ಆವೇಶ ಬರುತ್ತದೆ. ಆ ಆವೇಶದಲ್ಲಿಯೇ ತಮಟೆ, ನಗಾರಿ ಮತ್ತು ವಾದ್ಯದ ಸದ್ದಿಗೆ ತಕ್ಕಂತೆ ನಿಯತವಾಗಿ ಹೆಜ್ಜೆ ಹಾಕುತ್ತಾ ಕುಣಿಯುತ್ತಾ ಬರುವ ಆ ರುದ್ರನರ್ತನ ಭಕ್ತರಲ್ಲಿ ಕೂಡ ತುಂಬುತ್ತದೆ. ಈ ಸಂದರ್ಭದಲ್ಲಿ ಮಾರಿಯ ಮಹಿಮೆಯನ್ನು ಕೊಂಡಾಡುವ ಹಾಡುಗಳನ್ನು ಗಟ್ಟಿ ಧ್ವನಿಯಲ್ಲಿ ಹಾಡಲಾಗುತ್ತದೆ. ದಾರಿಯ ನಡುವೆ ಪೂಜಾರಿಯನ್ನು ನಡೆದು ನಿಲ್ಲಿಸಿ ಹಣ್ಣುಕಾಯಿಯ ಪೂಜೆಯನ್ನು ಸಲ್ಲಿಸುತ್ತಾರೆ. ಗ್ರಾಮದ ನಿರ್ದಿಷ್ಟ ಸ್ಥಳದಲ್ಲಿ ಆಚರಣೆಯು ಮುಕ್ತಾಯಗೊಂಡ ನಂತರ ಪೂಜಾರಿಯ ತಲೆಯ ಮೇಲಿಂದ ರುಂಡವನ್ನು ಕೆಳಗಿಳಿಸಿ, ಕಲ್ಲಿನ ಮೇಲಿಟ್ಟು ಮತ್ತೆ ಪೂಜಿಸಲಾಗುತ್ತದೆ. ಕೋಣನ ತಲೆಯಮೇಲೆ ಅಗಲವಾದ ಮಣ್ಣಿನ ಹಣತೆಯನ್ನು ಹೊತ್ತಿಸಿಟ್ಟು ಅದಕ್ಕೆ ತೈಲವಾಗಿ ಕಡಿದ ಕೋಣನ ನೆಣವನ್ನೇ ಬಳಸಲಾಗುತ್ತದೆ. ಹೀಗೆ ಈ ಆಚರಣಾತ್ಮಕ ಕುಣಿತಕ್ಕೆ ಒಂದು ನಿರ್ದಿಷ್ಟ ಆದಿ ಮತ್ತು ಅಂತ್ಯ. ಗೊತ್ತುಪಡಿಸಲಾದ ಸ್ಥಳ ಮತ್ತು ಜನ ಹಾಗೂ ಸ್ಪಷ್ಟವಾದ ಉದ್ದೇಶ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಬಲಿ ನಿಷೇಧಕ್ಕೆ ಒಳಪಟ್ಟಿರುವುದರಿಂದ ಹಾಗೂ ಇಂಥ ಬೀಭತ್ಸಕ್ಕೆ ಆಧುನಿಕ ತರುಣರು ಹಿಮ್ಮುಖವಾಗಿರುವುದರಿಂದ ಕೋಣನ ರುಂಡದ ಮೆರವಣಿಗೆಯ ಬದಲು ಕೋಣವೊಂದನ್ನು ಅಲಂಕರಿಸಿ ಅದೇ ನಿರ್ದಿಷ್ಟ ಸ್ಥಳ ಹಾಗೂ ಸಂದರ್ಭದಲ್ಲಿ ಮೆರವಣಿಗೆ ಮಾಡಿ ಅದನ್ನು ಕಡಿಯದೇ ಸ್ವತಂತ್ರಗೊಳಿಸಲಾಗುತ್ತದೆ. ಶಿರ್ಸಿ ಮತ್ತು

ಸಾಗರದ ಮಾರಿ ಜಾತ್ರೆಗಳಲ್ಲಿ ಇಂಥ ಸಾಂಕೇತಿಕ ಆಚರಣೆಗಳು ನಡೆಯುತ್ತದೆ. ಆದರೆ ಅನೇಕ ಹಳ್ಳಿಗಳಲ್ಲಿ ಬಲಿಪದ್ಧತಿ ಇನ್ನೂ ಆಚರಣೆಯಲ್ಲಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಇದಲ್ಲದೆ ಹೆಚ್ಚು ಕಟ್ಟುಪಾಡುಗಳಿಲ್ಲದೆ ಎಲ್ಲರೂ ಪಾಲ್ಗೊಳ್ಳಲು ಅವಕಾಶವಿರುವ ಇತರೆ ಕುಣಿತಗಳೂ ಉಂಟು. ಗುಂಡಿಯ ಬಯಲಿನಲ್ಲಿ ಕಾಲಿಗೆ ಗೆಜ್ಜೆ ಕಟ್ಟಿ ನಡುವಿಗೆ ಬಟ್ಟೆ ಸುತ್ತಿ ತಮಟೆ ನಗಾರಿಗಳ ಗತ್ತಿಗೆ ತಕ್ಕಂತೆ ಹತ್ತಾರು ಜನ ಒಟ್ಟಿಗೆ ಕುಣಿಯುವ ಕುಣಿತವನ್ನು ಕೂಡ ಮಾರಿ ಕುಣಿತ ಎಂದು ಕರೆಯಲಾಗುತ್ತದೆ. ಈ ಸಾಮೂಹಿಕ ಕುಣಿತದಲ್ಲಿ ಮಾರಿಯ ಪ್ರತೀಕವನ್ನು ಪೂಜೆಯ ರೂಪದಲ್ಲಿ ಹೊತ್ತವನೂ ಇರಬಹುದು. ತಲೆಯ ಮೇಲೆ ಒನಕೆ ಹೊತ್ತವನೂ ಇರಬಹುದು. ಕೈಯಲ್ಲಿ ಬೇವಿನ ಸೊಪ್ಪು ಹಿಡಿದು ಹಿಂದೆ ಮುಂದೆ ಆಡಿಸುತ್ತ ಹೆಜ್ಜೆ ಹಾಕುವವರೂ ಇರಬಹುದು. ಈ ಎಲ್ಲಾ ಕುಣಿತಗಳ ಹಿನ್ನೆಲೆಗೆ ಮಾರಿಯನ್ನು ಹೊಗಳುವ ಹಾಡುಗಳೂ ಇರುತ್ತದೆ. ಮಾರಿ ಹಬ್ಬದ ಸಂದರ್ಭದ ಈ ಕುಣಿತವನ್ನೇ 'ರಂಗದ ಕುಣಿತ' ಎಂದು ಕೆಲವು ಕಡೆ ಕರೆಯುತ್ತಾರೆ. ಆದರೆ ರಂಗದ ಕುಣಿತ ಕೇವಲ ಮಾರಿಹಬ್ಬಕ್ಕೆ ಮಾತ್ರ ಮೀಸಲಾಗಿರದೆ ಇತರೆ ಗ್ರಾಮದೇವತೆಯರ ಹಬ್ಬಗಳಲ್ಲಿ ಕೂಡ ನಡೆಯುತ್ತದೆ. ಕೆಲವು ಕಡೆ ಪೂಜಾರಿಯೂ ಕುಣಿಯುವವರ ಜೊತೆ ಸೇರುವುದುಂಟು. ಪೂಜಾರಿ ಕುಣಿಯುವ ಸಂದರ್ಭದಲ್ಲಿ ತಲೆಯ ಮೇಲೆ ಬಿದಿರುಬುಟ್ಟಿ, ಕಳಸ ಇಲ್ಲವೇ ಕೈಯಲ್ಲಿ ಬೆತ್ತವೊಂದನ್ನು ಹಿಡಿದುಕೊಮಡಿರುವುದು ರೂಢಿ. ಮತ್ತೆ ಕೆಲವು ಕಡೆ ಮಾರಮ್ಮನ ಕೊಂಡ ಹಾಯುವ ಗುಡ್ಡನೇ ಮಾರಮ್ಮನ ಪ್ರತೀಕ ಹೊತ್ತು ಕುಣಿಯುತ್ತಾನೆ. ಪೂಜಾರಿ ಅಥವಾ ಗುಡ್ಡ ಕುಣಿಯುವಾಗ ಮಾರಮ್ಮನೇ ಕುಣಿಯುತ್ತಾಳೆ ಎಂದು ಜನ ನಂಬುತ್ತಾರೆ.

"ಗಲ್ಲುಗಲ್ಲೆಂಬುತಾಳೆ ಮಾರಮ್ಮ
ನಿಲ್ಲೆಂದರೋಗುತ್ತಾಳೆ
ಹೊಂಬಾಳೆಗೆ ವಾಲುತಾಳೆ
ಚಿನ್ನದಾಗೆ ತೂಗುತಾಳೆ
ಹೊಂಬಾಳೆ ಹೊಳೆವ ನೋಡು
ಮಾರವ್ವ ಕೆನ್ನೆಯ ತೆಳವ ನೋಡು
ಕೆಣಕಿದರವಳ ಟಿಗಣ್ಣೆ ಮಾರವ್ವ
ಮರೆತೋರ ಸೊಕ್ಕ ಮುರಿವಳು"[೧]

೧. ಪ್ರೊ. ಹಿ.ಚಿ.ಬೋರಲಿಂಗಯ್ಯ (ಸಂ.), ಕರ್ನಾಟಕ ಜನಪದ ಕಲೆಗಳ ಕೋಶ, ಪು. ೨೪೩.

ಮಾರಮ್ಮನ ಪೂಜಾರಿಗಳು ಹೆಚ್ಚಿನವರು ಹೊಲೆಯರು. ಕೆಲವು ಗ್ರಾಮಗಳಲ್ಲಿ ಬೆಸ್ತರು, ಪರಿವಾರದವರು, ಕುರುಬರು, ಒಕ್ಕಲಿಗರು ಮುಂತಾಗಿ ಇತರೆ ಶೂದ್ರ ಸಮುದಾಯದವರೂ ಪೂಜಾರಿಗಳಾಗಿರುವುದುಂಟು. ಇಂಥ ಕುಣಿತಗಳ ಸಂದರ್ಭದಲ್ಲಿ ಪೂಜಾರಿ ಹೊತ್ತ ಕಳಸಕ್ಕೆ ಅಥವಾ ಗುಡ್ಡ ಹೊತ್ತ ದೇವರಿಗೆ ಮಕ್ಕಳನ್ನು ಮುಟ್ಟಿಸುವ ಸಂಪ್ರದಾಯವೂ ಉಂಟು. ಇದರಿಂದ ಮಕ್ಕಳಿಗೆ ಒಳ್ಳೆಯದಾಗುತತದೆ ಎಂಬ ನಂಬಿಕೆ ಇದೆ. ಹೆಗಲ ಮೇಲೆ ಮಕ್ಕಳನ್ನು ಮುಟ್ಟಿಸುವ ಕುಳ್ಳಿರಿಸಿಕೊಮಡು ಕುಣಿತದವರ ಜೊತೆ ಸೇರುವ ಕುಣಿತಗಾರನೂ ಇರುತ್ತಾರೆ. ಕ್ರಮೇಣವಾಗಿ ಇದೊಂದು ಸಾಮೂಹಿಕ ಕುಣಿತವಾಗಿ ರೂಪುಗೊಳ್ಳುತ್ತದೆ. ಕುಣಿತದಲ್ಲಿ ಪ್ರದಾನವಾಗಿ ಚರ್ಮವಾದ್ಯಗಳಾದ ತಮಟೆ, ನಗಾರಿ, ಹಲಗೆ, ಡೋಲು, ಚಕ್ರಾದಿಬಳೆ, ಉರುಮೆ, ಅರೆ ಮುಂತಾದವುಗಳಲ್ಲದೆ ವಾಲಗ, ಶೃತಿ, ಮೋರಿ, ಕೊಂಬು, ಕಹಳೆ ಮುಂತಾದ ಗಾಳಿ ವಾದ್ಯಗಳೂ ಬಳಕೆಯಾಗುತ್ತದೆ.

೧೧. ಸೂತ್ರದ ಗೊಂಬೆಯಾಟ ಕಲೆ:

ಜಿಲ್ಲೆಯ ಮತ್ತೊಂದು ಪ್ರಮುಖ ಕಲೆಯಾಗಿದೆ. ಇದು ಕರ್ನಾಟಕವನ್ನು ಒಳಗೊಂಡಂತೆ ವಿಶ್ವದ ಅತ್ಯಂತ ಪ್ರಾಚೀನ ಕಲೆಗಳಲ್ಲಿ ಒಂದಾಗಿದೆ. ಪುರಾತನದಲ್ಲಿ ಮಾನವನ ರಂಗಭೂಮಿ ಪ್ರವೇಶವಾದ ಸಂದರ್ಭದಲ್ಲಿ ಈ ಸೂತ್ರದ ಗೊಂಬೆಯಾಟ ಪ್ರಮುಖವಾದವು.

ಆರಂಭದಲ್ಲಿ ಜೇಡಿ ಮಣ್ಣಿನಿಂದ ಗೊಂಬೆಗಳನ್ನು ಬಳಸುತ್ತಿದ್ದ ನಂತರದಲ್ಲಿ ಮರದ ಗೊಂಬೆಗಳು ಚಾಲನೆಗೆ ಬಂದವು. ಚಾಮರಾಜನಗರಜಿಲ್ಲೆಯಲ್ಲಿ ಈ ಕಲೆಯನ್ನು ವಿಶ್ವಕರ್ಮ ಆಚಾರಿಗಳು, ವೀರಶೈವರು ಪ್ರಸ್ತುತಪಡಿಸುವುದು ಕಂಡು–ಬರುತ್ತವೆ. ಮನುಷ್ಯ, ದೇವತೆಗಳು, ರಾಮಾಯಣ, ಮಹಾಭಾರತ ಪಾತ್ರಗಳ ಮರದ ಗೊಂಬೆಗಳನ್ನು ಮಾಡಿ ಬಣ್ಣಹಾಕಿ ಉಡುಪುಗಳನ್ನು ತೊಡಿಸಿ ಗೊಂಬೆಗಳನ್ನು ಪಾತ್ರಧಾರಿಗಳಂತೆ ಸಿದ್ಧಗೊಳಿಸುತ್ತಾರೆ. ಇದೊಂದು ಮನರಂಜನಾ ಕಲೆಯಾಗಿದ್ದು ಚಾಮರಾಜನಗರ ತಾಲ್ಲೂಕಿನ ಯಡಿಯೂರು ಗ್ರಾಮದಲ್ಲಿ ಶಂಕರಪ್ಪನವರ ಕಲಾ ಸಾಧನೆಯು ತಿಳಿದುಬರುತ್ತದೆ.

ಸೂತ್ರದ ಗೊಂಬೆಗಳ ಉಗಮ ಮಾನವ ಇತಿಹಾಸದಷ್ಟೆ ಪ್ರಾಚೀನವಾದುದು ಎಂಬ ಅಭಿಪ್ರಾಯವಿದ್ದು ಕ್ರಿಸ್ತಪೂರ್ವದಲ್ಲೂ ಸೂತ್ರದ ಗೊಂಬೆಯಾಟ ಬಳಕೆಯಲ್ಲಿತ್ತು ಎಂದು ತಿಳಿದುಬರುತ್ತದೆ. ಮಹಾಭಾರತದ ಕಾಲದಿಂದಲೇ ಸೂತ್ರದ ಗೊಂಬೆಗಳನ್ನು ಮನರಂಜನೆಯ ಸಾಧನಗಳಾಗಿ ಬಳಕೆಯಾಗುತ್ತಿತ್ತು.

ಈಚೆಗೆ ಹಲವು ಮಹತ್ವದ ಜನಪದ ಕಲೆಗಳಾದ ಸೂತ್ರದ ಗೊಂಬೆಯಾಟ ಮೂಲೆಗುಂಪಾಗಿರುವುದು ದುರದೃಷ್ಟಕರ ಸಂಗತಿ. ಇತ್ತೀಚಿನ ಆಧುನೀಕರಣದ ತಂತ್ರಜ್ಞಾನದಿಂದ ದೃಶ್ಯಮಾಧ್ಯಮದಿಂದ ಈ ರೀತಿಯಲ್ಲಿ ಜಾನಪದ ಕಲೆಗಳು ಮೂಲೆಗುಂಪಾಗಿಸುತ್ತಿರುವುದು ಶೋಚನೀಯ.

ಸೂತ್ರದ ಗೊಂಬೆಯಾಟ ಮನರಂಜನೆಗಾಗಿ ಸಾದರಗೊಳ್ಳುವ ಕಲೆ. ಒಂದು ಕಾಲದಲ್ಲಿ ಇದನ್ನು ಪ್ರಸ್ತುತಪಡಿಸುವುದು ಈ ಕಲೆಯನ್ನು ಕಲಿಸುವುದು ಬಹಳ ಮರ್ಯಾದೆಯನ್ನು ಪದವಿಯನ್ನು, ಪಡೆದಂತೆ ಇತ್ತು. ಇದರ ಜೊತೆಗೆ ಗೌರವ ಮತ್ತು ಆದಾಯ ತರುವಂತಹ ಕಲೆಯಾಗಿತ್ತು. ಜನತೆಗೆ ಮತ್ತು ಸಮಾಜಕ್ಕೆ ಇದೊಂದು ಅಗತ್ಯವಾದ ಕಲೆ ಮತ್ತು ಸಂಸ್ಕೃತಿಯಾಗಿ ಬೆಳೆದುಬಂದಿದೆ.

ಈ ಕಲೆಯು ಇಂಗ್ಲಿಷರು, ಡಚ್ಚರು, ಜರ್ಮನ್ನರು ಮತ್ತು ಇಟಲಿಯನ್ನರ ಪೋಷಣೆಯಿಂದ ೧೭ನೇ ಶತಮಾನದ ಈಚೆಗೆ ಹೆಚ್ಚು ಪ್ರಸಿದ್ಧಿ ಪಡೆಯಿತು. ಈ ಕಲೆ ಪ್ರದರ್ಶನ ಒಂದು ನಾಟಕ ಪ್ರದರ್ಶನದಷ್ಟೇ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಈ ತಂಡದಲ್ಲಿ ೧೦ರಿಂದ ೧೨ಜನ ಕಲಾವಿದರಿರುತ್ತಾರೆ. ಐದು ಜನರ ಹಿಮ್ಮೇಳ ಕಲಾವಿದರಾಗುತ್ತಾರೆ. ಒಂದು ಸ್ಕ್ರಿಪ್ಟ್ ಇದ್ದು, ದೃಶ್ಯಗಳು ಪಾತ್ರಗಳು, ಸಂಭಾಷಣೆ-ಗಳಿರುತ್ತದೆ. ಇವೆಲ್ಲವನ್ನು ತೆರೆಯ ಹಿಂದೆ ನಿಂತು ಕಲಾವಿದರೆ ಸಂಭಾಷಿಸಿಸುತ್ತಾ ಕಥೆಯನ್ನು ಪ್ರಸ್ತುತಪಡಿಸುತ್ತಾರೆ. ತೆರೆಯ ಮುಂದೆ ಗೊಂಬೆಗಳು ಅಭಿನಯಿಸುತ್ತದೆ. ಸೂತ್ರಧಾರನ ಕೈಚಳಕ ಮೂಲಕ ನಾಟಕದ ಸಂಭಾಷಣೆ, ಹಾಡು, ಸಮಯ ಸಂದರ್ಭಕ್ಕೆ ತಕ್ಕಹಾಗೆ ಹಿಮ್ಮೇಳದ ಹಾರ್ಮೋನಿಯಂ, ಮೃದಂಗ, ಮುಖವೀಣೆ, ಗಾಯಕರು ಈ ಎಲ್ಲಾ ಕಲಾವಿದರು ತಮ್ಮ ತಮ್ಮ ಪಾತ್ರನಿರ್ವಹಿಸುತ್ತಾರೆ. ಹೀಗೆ ಸೂತ್ರದ ಗೊಂಬೆಯಾಟ ನಡೆಯುತ್ತದೆ. ಒಂದು ರಾತ್ರಿ ಪ್ರದರ್ಶನಕ್ಕೆ ೧೫೦೦, ೨೦೦೦ ರೂ. ಸಂಭಾವನೆ ಇರುತ್ತದೆ.

ಸಾಮಾನ್ಯವಾಗಿ ರಾಮಾಯಣ, ಮಹಾಭಾರತ ಬೇರೆ ಬೇರೆ ಪ್ರಸಂಗಗಳು, ಹರಿಶ್ಚಂದ್ರ ಕಥೆ, ಗೊಲ್ಲರ ಕಥೆಗಳನ್ನು ಇವರ ಪ್ರಸ್ತುತಪಡಿಸುತ್ತಾರೆ. ಹಬ್ಬಗಳು, ಜಾತ್ರೆಗಳು, ಗೌರಿಗಣೇಶ ಸಮಾರಂಭ ಸಮಯ, ಈ ಕಲಾ ಪ್ರದರ್ಶನ ಮಾಡಿಸುತ್ತಾರೆ.

೧೨. ನಾದಸ್ವರ ಮತ್ತು ಮುಖವೀಣೆಗಳು

ಚಾಮರಾಜನಗರ ಜಿಲ್ಲೆಯ ಜಾನಪದ ಕಲೆಗಳಾಗಿದ್ದು ಇಂದು ಇವು ಅಳಿವಿನ ಅಂಚಿನಲ್ಲಿವೆ. ಚಾಮರಾಜನಗರ ಜಿಲ್ಲೆಯ ಕೆಲವು ಕಡೆಗಳಲ್ಲಿ ಮುಖವೀಣೆಯನ್ನು ಸಣ್ಣವಾದ್ಯವೆಂದು ಕರೆಯುತ್ತಾರೆ. ಮದುವೆ ಮತ್ತು ದೇವತಾ ಕಾರ್ಯಗಳಿಗೆ ಇದನ್ನು

ನುಡಿಸುತ್ತಾರೆ. ಹಾಗೇ ನಾದಸ್ವರ, ವಾಲಗ, ಸಹ ಸಾಂಕೇತಿಕವಾಗಿ ಅಲ್ಲಲ್ಲಿ ಉಳಿದುಕೊಂಡಿದೆ. ಇಂದಿನ ಆಧುನಿಕ ನಾಗರೀಕತೆಯ ಬರದಲ್ಲಿ ಇವು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡಿರುವುದಾದರೂ ಅಗತ್ಯವೆನಿಸಿ ಉಳಿದುಕೊಂಡಿದೆ.

ಮದುವೆ, ಮೆರವಣಿಗೆ, ದೇವರ ಉತ್ಸವಗಳಿಗೆ ನಾದಸ್ವರ ವಾಲಗಮುಖ್ಯ, ಆ ಕಾರಣಕ್ಕೆ ಇದು ಉಳಿದಿದೆಯಾದರೂ ಇದಕ್ಕೆ ಗೌರವ ಪ್ರತಿಷ್ಠೆ ಮರ್ಯಾದೆಗಳು ಸಿಗುತ್ತಿಲ್ಲ. ಹಳ್ಳಿಗಳ ಕಡೆ ಈ ಮೊವಾರಿ ಕಲೆಗೆ ಒಳ್ಳೆಯ ಬೆಲೆ ಇತ್ತು. ವಾದ್ಯ ಕಲಿಯುವರಿಗೆ ಇಂದು ತುಂಬಾ ಪ್ರೋತ್ಸಾಹ ನೀಡುವಂತ ಆಚಾರವು ಇಂದಿಗೂ ನಡೆಯುತ್ತಿವೆ. ಇದನ್ನು ಕಲಿತರೆ ಗೌರವ, ಮರ್ಯಾದೆ ಇದೆ. ಮದುವೆ ದೇವರ ಕಾರ್ಯಗಳಿಗೆ ಹೋದರೆ ನಾಲ್ಕು ಕಾಸು ಸಂಪಾದನೆನೂ ಇದೆ. ಆದರೆ ಅದರ ಬೆಳವಣಿಗೆ ಈಚೆಗೆ ಕುಂಠಿತವಾಗಿದೆ. ನಾದಸ್ವರ ಸಂಗೀತ ಪರಿಕರಗಳನ್ನು ಮೊವಾರಿ, ವಾಲಗ, ವಾದ್ಯ ಎಂದು ಕರೆಯುತ್ತಾರೆ. ಇದು ಒಂದು ದೇಶೀ ಜಾನಪದ ಕಲೆ. ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರದಲ್ಲಿ ಇದು ಜನಪ್ರಿಯ ಬಹುಜನ ದೇಶೀ ಸಮುದಾಯಗಳಾದ ದಲಿತರು, ಹಿಂದುಳಿದವರು ಕರ್ನಾಟಕದಲ್ಲಿ ಅದರಲ್ಲಿ ಚಾಮರಾಜನಗರ ಜಿಲ್ಲೆಯ ಜನರು ಇದನ್ನು ಕಸುಬಾಗಿ ಕಲೆಯಾಗಿ ಅನುಸರಿಸುತ್ತಾ ಉಳಿಸಿದ್ದಾರೆ, ಬೆಳೆಸಿದ್ದಾರೆ. ಮದುವೆ ದೇವರ ಉತ್ಸವ ಮೊದಲಾದ ಮಂಗಳ ಕಾರ್ಯಗಳಿಗೆ ಪಾಲನೆ ಇಲ್ಲದೆ ನಡೆಯುವುದೇ ಇಲ್ಲ. ವಾಲಗ, ಡೋಲು, ಶೃತಿ, ಒಟ್ಟು ಸೇರಿ ಒಂದು ತಂಡವಾಗುತ್ತದೆ. ದೇವರ ಮೆರವಣಿಗೆಗೂ 'ವಾದ್ಯ ಬಂದರೆ ಕಳೆ. ನಂತರ ಮದುವೆಯಲ್ಲಿ ಅವರ ಕಾರ್ಯವೈಖರಿ ಅನನ್ಯ. ಮದುವೆಯಾದಂತಹ ನೂತನ ವಧುವರರಿಗೆ ಇವರ ಪ್ರದರ್ಶನವು ಅವಶ್ಯಕ ಮದುವೆಯಾದ ನೂತನ ವಧುವರರಿಗೆ ಊರಿನ ಮುಖ್ಯಭಾಗದಲ್ಲಿ ರಸ್ತೆಯಲ್ಲಿ ಮೆರವಣಿಗೆ ಮಾಡಿಸುವುದು. ಇಡೀ ಊರಿನ ಜನ ಹೊಸ ಮದುಮಗಳನ್ನು ನೋಡಲಿ ಎಂದು ಊರ ಬಂದು ಸುತ್ತು ಸುತ್ತಿ ದೇವರ ಗುಡಿ ಅಥವಾ ಚಾವುಡಿಯಲ್ಲಿ ಕಂಕಣ ಬಿಚ್ಚುತ್ತಿದ್ದರು. ಈ ಮೆರವಣಿಗೆಯ ಉದ್ದಕ್ಕೂ ಅಲ್ಲಲ್ಲಿ ಕಛೇರಿಯನ್ನು ನಡೆಸಿದಂತೆ ರಂಗಕಟ್ಟಿ ಡೋಲು, ವಾದ್ಯಗಳ ವಿವಿಧ ಮೆಟ್ಟುಗಳನ್ನು ಪ್ರದರ್ಶಿಸಲಾಗುತ್ತಿತ್ತು. ಈ ರೀತಿಯಲ್ಲಿ ವಾದಸ್ವರ ಸಂಗೀತದ ಮಹತ್ವದ ಕಾರ್ಯವನ್ನು ಶುಭಕಾರ್ಯಗಳಿಗೆ ಅತ್ಯಾವಶ್ಯಕವಾಗಿ ಬೇಕಾಗಿದೆ. ಸಣ್ಣವಾದ್ಯ ಅಥವಾ ಮುಖವೀಣೆಯಿಂದ ಹೊರಡುವ ಗಾನ ತುಂಬಾ ವಿಶಿಷ್ಟವಾದುದು. ದೊಡ್ಡವಾದ್ಯಕ್ಕಿಂತ ಇದರಿಂದ ಹೊಮ್ಮುವ ಧ್ವನಿ ಸಣ್ಣರಾಗ. ಅದಕ್ಕೆ ಇದನ್ನು ಸಣ್ಣ ವಾದ್ಯ ಅನ್ನುತ್ತಾರೆ. ಗಾತ್ರದಲ್ಲಿ ಸಹ ಇದ್ದು ಪುಟ್ಟ ಪರಿಕರ. ದೇವರ ಉತ್ಸವ ಮತ್ತು ಮಂಗಳ ಕಾರ್ಯಗಳಿಗೆ ಇದು ಹೆಚ್ಚು ಅಚ್ಚುಮೆಚ್ಚು. ಮಾರಿಕುಣಿತ, ರಂಗಗೀತೆಮಟ್ಟುಗಳು ಈ ವಾದ್ಯದಲ್ಲಿ

ಹೊರಟರೆ ಅಚ್ಚುಕಟ್ಟಾಗಿ ತನ್ನದೇ ಆದಂತಹ ಸೊಗಡನ್ನು ಹೊಂದಿರುವುದು ಇದರ ವೈಶಿಷ್ಟ್ಯ

೧೩. ಸೋಬಾನೆ ಪದಗಳು:

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಸೋಬಾನೆ ಪದಗಳು ಆಚರಣೆ ಪ್ರಧಾನ-ವಾದವು. ಪ್ರತಿಯೊಂದು ದೇಶಿ ಸಮುದಾಯಗಳು ತಮ್ಮದೇ ವಿಶಿಷ್ಟ ದೇವತೆಗಳ ಒಕ್ಕಲಿಗೆ ಸೇರಿದ್ದು ಅವುಗಳ ಪೌರಾಣಿಕ ಕತೆಗಳು ಸೋಬಾನೆ ಪದಗಳ ವಸ್ತು-ವಾಗಿರುತ್ತವೆ. ಶಿವಪಾರ್ವತಿಯರೂ ಗಿರಿಜಾಕಲ್ಯಾಣ, ನಂಜುಂಡೇಶ್ವರ ಕಲ್ಯಾಣ ಮೊದಲಾದ ವಿಭಿನ್ನ ಶೈವ ಕಥನಗಳೇ ವಸ್ತುವಾಗಿರುತ್ತದೆ.

ಸೋಬಾನೆ ಕಥನಗಳನ್ನು ಹಾಡುವವರೆಲ್ಲಾ ಹೆಂಗಸರು, ಪ್ರತಿಯೊಂದು ಜಾತಿ, ಜನಾಂಗ, ಸಮುದಾಯಗಳಲ್ಲೂ ಮದುವೆ ಶಾಸ್ತ್ರಗಳನ್ನು ನಡೆಸಿಕೊಡಲು ಇಂತಹ ಸೋಬಾನೆಪದ ಹಾಡುವ ಮಹಿಳಾ ತಂಡಗಳಿರುತ್ತವೆ. ಪ್ರತಿ ಊರಲ್ಲೂ ಇಂತಹ ಹಲವು ತಂಡಗಳಿರುತ್ತವೆ. ಇತ್ತೀಚೆಗೆ ಆಧುನಿಕತೆ, ನಾಗರಿಕತೆ ಭರದಲ್ಲಿ ಇಂತಹ ಸೋಬಾನ, ಜೋಗುಳ ಮೊದಲಾದ ಜನಪದ ಕಥನಗಳು ಕಾಣೆಯಾಗುತ್ತದೆ. ಹಾಗಾಗಿ ಇಂದು ಸೋಬಾನೆ ಕಲಾವಿದೆಯರು ಪ್ರಮುಖರಾಗಿದ್ದಾರೆ.

ಸೋಬಾನೆ ಪದ ಹಾಡದೆ ಯಾವ ಮದುವೆ ವಸಗೆಯೂ ಆಗುವುದಿಲ್ಲ. ಎಂತಹ ವಾದ್ಯ ಡೋಲು ಬಂದರೂ ಸರಿ ಕೆಲವು ಶಾಸ್ತ್ರಗಳಿಗೆ ಸೋಬಾನೆಯವರು ಬರಲೇಬೇಕು, ಹಾಡಬೇಕು. ಸೋಬಾನೆ ಸೊಲ್ಲು ಕೇಳದೆ ಮದುವೆ ಮನೆಗೆ ಕಳೆ ಇರುವುದಿಲ್ಲ. ಮದುವೆಗೆ ಮುಂಚೆ ನಡೆಯುವ ಶಾಸ್ತ್ರಗಳು, ನೀರಾಕುವ ಶಾಸ್ತ್ರಗಳಿಗೆ ವಾದ್ಯ ನುಡಿಸುವುದಿಲ್ಲ. ಗ್ರಾಮೀಣ ಪ್ರದೇಶದ ಮದುವೆಗಳಲ್ಲಿ ಸೋಬಾನೆ ಕಲಾವಿದರೆ ಮುಖ್ಯ. ದಲಿತರು, ಹಿಂದುಳಿದ ಸಮುದಾಯಗಳ ಮದುವೆಗಳಲ್ಲಿ ಇಂದಿಗೂ ಸೋಬಾನೆ ಹೇಳಿಸಿಯೇ ಶಾಸ್ತ್ರಮಾಡುವ ಪದ್ಧತಿ ಇದೆ. ಪ್ರತಿಯೊಂದು ಹಿಂದುಳಿದ ವರ್ಗಗಳಲ್ಲಿಯೂ ಇಂತಹ ಸೋಬಾನೆ ಗಾಯಕರಿದ್ದಾರೆ. ಎಲ್ಲರೂ ಮಹಿಳೆಯರೆ.

ಪಾರ್ವತಿ ಕಲ್ಯಾಣ, ಮುಡುಕುತೊರೆ ಮಲ್ಲಪ್ಪ, ಬಿಳಿಗಿರಿರಂಗಸ್ವಾಮಿ, ನಂಜುಂಡೇಶ್ವರ, ಬೀಗರಪದ, ವಸಗೆಪದವಾಗಿ ಕಲ್ಲುಪದ, ಜೋಗುಳ ಮೊದಲಾದ ಜನಪದ ಪ್ರಕಾರಗಳನ್ನು ಹಾಡುತ್ತಾರೆ. ಈ ಸೋಬಾನೆ ಜತೆಗೆ ಅರುಣ ದೇವತೆ, ಮಾದೇಶ್ವರ, ಮಂಟೇಸ್ವಾಮಿ, ಸಿದ್ದಪ್ಪಾಜಿ, ನಂಜುಂಡೇಶ್ವರ, ಚಾಮುಂಡೇಶ್ವರಿಗೆ ಸಂಬಂಧಿಸಿದ ಬಿಡಿ ಪದಗಳನ್ನು ಇವರು ಹಾಡುತ್ತಾರೆ. ಮದುವೆಶಾಸ್ತ್ರ, ಬಸಿರೊಸಗೆ,

ಸೋಬನ, ತೊಟ್ಟಿಲು ಕಟ್ಟುವಾಗ ದೇವರ ಉತ್ಸವ, ಜಾತ್ರೆ ಹೀಗೆ ಯಾವ ಸಂದರ್ಭಕ್ಕೆ ಯಾವುದೂ ಬೇಕೋ ಅಂತಹ ಪದಗಳನ್ನು ಹಾಡುತ್ತಾರೆ.

ಈ ಸೋಬಾನೆ ಪದ ಹಾಡುವುದನ್ನು ವೃತ್ತಿಯಾಗಿ ಮಾಡಿಕೊಳ್ಳಲಾಗದು. ಅದು ಸಂದರ್ಭಕ್ಕೆ ಶಾಸ್ತ್ರಕ್ಕೆ ಮಾತ್ರ ಸೀಮಿತ. ಹಾಗಾಗಿ ಇವರಿಗೆ ಈ ಹಾಡುಗಾರಿಕೆ ಸಂಭಾವನೆ ತಂದುಕೊಡಲ್ಲ. ಇದು ಸಂಸ್ಕೃತಿಯ ಒಂದು ಭಾಗ ಹಾಗೂ ಆಚರಣೆಗೆ ಪೂರಕವಾದ ಹಾಡುಗಾರಿಕೆ ಕಲೆ, ಮದುವೆ ಅಥವಾ ಯಾವುದೇ ಶಾಸ್ತ್ರಗಳಿಗೆ ಹಾಡಲು ಕರೆಯುವುದೇ ಇವರಿಗೆ ಒಂದು ಗೌರವ. ಆದರೂ ಮದುವೆಶಾಸ್ತ್ರಕ್ಕೆ ಹಾಡಲು ಹೋದರೆ ಅಕ್ಕಿ, ಹಣ್ಣು, ಕಾಯಿ, ಅರಿಷಿಣ, ಕುಂಕುಮ, ಎಲೆಅಡಿಕೆ, ಐವತ್ತು ನೂರು ರೂಪಾಯಿ ಗೌರವ ಧನ ಕೊಡುತ್ತಾರೆ. ದೊಡ್ಡ ಶ್ರೀಮಂತರು, ಜಮೀನುದಾರರು, ದೊಡ್ಡ ಉದ್ಯೋಗಸ್ಥರು ಸಂಭಾವನೆ ಜೊತೆಗೆ ಸೋಬಾನೆ ಹಾಡುದಾರರಿಗೆ ಸೀರೆ ಬ್ಲವ್ಸ್ ಪೀಸ್‌ಗಳನ್ನು ಕೊಡುತ್ತಾರೆ. ಈ ರೀತಿಯಲ್ಲಿ ವಿವಿಧ ಸಂಗತಿಗಳನ್ನು ಈ ಸೋಬಾನೆ ಕಾವ್ಯ ಪ್ರತಿಬಿಂಬಿಸುತ್ತದೆ. ಇಂದು ಇದು ಸಹ ಅಳಿವಿನ ಅಂಚಿನಲ್ಲಿದೆ.

೧೪. ತತ್ವಪದಕಾರರು

ತತ್ವಪದಕಾರರು ಜಿಲ್ಲೆಯ ಜಾನಪದ ಗಾಯಕರಲ್ಲಿ ಪ್ರಮುಖರು. ನೀಲಗಾರರು, ಕಂಸಾಳೆ, ಹಾಡುಗಾರರಷ್ಟೇ ವ್ಯಾಪಕವಾಗಿ ತತ್ವಪದಕಾರರು ಇದ್ದಾರೆ. ವಚನ ಚಳುವಳಿಯ ನಂತರದ ದಿನಗಳಲ್ಲಿ ಶೈವ ಪಂಥ ಪ್ರವೇಶಿಸಿದ ದಲಿತರು ಆ ಕಡೆ ವೀರಶೈವರಿಂದ ಮಾನ್ಯಗೊಳ್ಳದೆ ಈ ಕಡೆ ದಲಿತ ಸಂಸ್ಕೃತಿಯಲ್ಲೂ ಇರಲಾಗದ ಇಕ್ಕಟ್ಟಿಗೆ ಸಿಲುಕಿದ್ದಾರೆ. ಇವರನ್ನು ಗುರುಮಕ್ಕಳು, ಗುರುಬೋಧನೆ ಪಡೆದವರು ಎನ್ನಲಾಗುತ್ತದೆ. ಜಿಲ್ಲೆಯಲ್ಲಿ ಈ ಪಂಥ ವಿಶಿಷ್ಟವಾಗಿ ಇಂದಿಗೂ ಅಸ್ತಿತ್ವದಲ್ಲಿದೆ. ಇವರು ಹಲವು ಹಿರಿಯ ಸಾಧುಸಂತರು, ಗುರುಗಳು ರಚಿಸಿದ ತತ್ವಪದಗಳನ್ನು ಹಾಡುತ್ತಾ ಜಿಲ್ಲೆಯ ಜಾನಪದವನ್ನು ಉಳಿಸಿ ಬೆಳೆಸಿದ ಕಲಾವಿದರ ಬಹುದೊಡ್ಡ ಸಂಖ್ಯೆ ಕಾಣಸಿಗುತ್ತದೆ.

ವೀರಶೈವ ಲಿಂಗಾಯಿತ ಶರಣ ಸಂಸ್ಕೃತಿ ಸಂಪ್ರದಾಯಗಳನ್ನು ಅನುಸರಿಸುವ ಗುರುಮಕ್ಕಳು ತತ್ವವನ್ನು ಹಾಡುತ್ತಾ ಸಾತ್ವಿಕ ಜೀವನ ನಡೆಸುತ್ತಾರೆ. ಒಬ್ಬ ಸಾಮಾನ್ಯವಾಗಿದ್ದರೂ ಸಹ ಆಚಾರವಂತರು, ಬಡತನ, ಸಾಮಾಜಿಕ, ಅಸಮಾನತೆ ನಡುವೆಯೂ ತತ್ವಗಳನ್ನು ಹಾಡುತ್ತಾ ಬದುಕನ್ನು ಉನ್ನತಿಯತ್ತ ಸಾಗುತ್ತಿರುವ ಜನರಿದ್ದಾರೆ.

ಊರೂರ ಮೇಲೆ ತಾಲ್ಲೂಕು ಜಿಲ್ಲೆ ಹೀಗೆ ಎಲ್ಲಿಗೆ ಬೇಕಾದರೂ ಹೋಗಿ ಹಾಡುತ್ತ ಸಾವು, ತಿಥಿ, ಅರಕೆ ತೀರಿಸಲು ಕಾಯಿಲೆ, ದೋಷ ನಿವಾರಣೆಗೆ ಹೀಗೆ ಬೇರೆ

ಬೇರೆ ಕಾರಣ ಉದ್ದೇಶಗಳಿಗಾಗಿ ಭಕ್ತರು ತತ್ವ ಹಾಡಿಸಲು ಕರೆಸುತ್ತಾರೆ. ಗುರುದೀಕ್ಷೆ ಪಡೆದ ಗುರುಮಕ್ಕಳು ತಮ್ಮ ಮನೆಯ ಪ್ರತಿ ವಿಶೇಷ ಕಾರ್ಯಗಳಿಗೂ ಕರೆಸುತ್ತಾರೆ. ಗುರುದೀಕ್ಷೆ ಪಡೆಯದವರ ಆಹ್ವಾನಗಳಿಗೂ ಹೋಗಿ ಹಾಡುವಂತಹ ಕಲಾವಿದರಿದ್ದಾರೆ.

೧೫. ಪೂಜಾಕುಣಿತ:

ಪೂಜಾಕುಣಿತವು ಚಾಮರಾಜನಗರಜಿಲ್ಲೆಯಲ್ಲಿ ಹೆಚ್ಚು ಪ್ರಚಲಿತವಾಗಿದೆ. ಇದು ಶಕ್ತಿದೇವತೆಗಳಿಗೆ ಸಂಬಂಧಿಸಿದ ಕುಣಿತವಾಗಿದ್ದು, ಆಯಾ ಗ್ರಾಮ ದೇವತೆಗಳ ಪ್ರತೀಕಗಳಾಗಿ ಈ ಪೂಜೆಗಳು ನಡೆಯುತ್ತದೆ. ಹಬ್ಬದ ಸಂದರ್ಭದಲ್ಲಿ ಗುಡಿಯೊಳಗಿನ ದೇವತೆಯು ಪೂಜೆಯ ರೂಪದಲ್ಲಿ ಹೊರಬರುತ್ತಾಳೆ. ಬಿದಿರಿನ ತಳಿ ಮಧ್ಯೆ ದೇವತೆಯ ಮುಖವಾಡಗಳನ್ನು ಇರಿಸಿಕೊಂಡು ಕುಣಿಯುವುದಕ್ಕೆ ಪೂಜಾಕುಣಿತ ಎನ್ನುವರು. ಸುಮಾರು ೫ ಅಡಿ ಉದ್ದ ೪ ಅಡಿ ಅಗಲವಿರುವ ಬಿದಿರಿನ 'ಗಳು' ಮತ್ತು ಇದರ ಹಚ್ಚೆಗಳನ್ನು ಜೋಡಿಸಿ ಪೂಜೆಯನ್ನು ಸಿದ್ದಪಡಿಸುತ್ತಾಳೆ. ಇದರ ಮಧ್ಯಭಾಗದಲ್ಲಿ ದೇವರ ಮುಖವಾಡವನ್ನು ಕಟ್ಟಿರುತ್ತಾರೆ. ಎರಡು ಕಡೆಗಳಲ್ಲಿ ತಳಿಯ ಉದ್ದಕ್ಕೂ ಭಕ್ತರು ಹರಕೆ ಹೊತ್ತು ಸಲ್ಲಿಸಿರುವ ಬಣ್ಣದ ಸೀರೆಗಳನ್ನು ಇಳಿಬಿಟ್ಟು ತಳಿಯ ಮೇಲ್ತುದಿಗೆ ಏಳು ಅಥವಾ ಬರುತ್ತಾ ಹಿತ್ತಾಳೆ ಇಲ್ಲವೆ ಬೆಳ್ಳಿಯ ಕಳಸಗಳಿಂದ ಅಲಂಕರಿಸಿರುತ್ತಾರೆ. ಮುಖವಾಡಕ್ಕೆ ಸೇರಿದಂತೆ ತಿಳಿಯ ಮೇಲ್ಭಾಗಕ್ಕೆ ಅರ್ಧ-ಚಂದ್ರಾಕಾರದ ಹಿತ್ತಾಳೆ, ಬೆಳ್ಳಿ ಪ್ರಭಾಳೆ ಕಟ್ಟಿ ಅದರ ಮೇಲುಗಡೆ ತಳಿಯ ಎರಡು ಕಡೆಗಳಲ್ಲಿ ಪೂರ್ಣಚಂದ್ರನ ಆಕಾರದ ಹಿತ್ತಾಳೆಪಟ್ಟಿಗಳನ್ನು ಕಟ್ಟಿರುತ್ತಾರೆ. ಭಕ್ತಾದಿಗಳು ಹರಕೆ ಹೊತ್ತು ಸಲ್ಲಿಸಿರುವ ಕಡಗ, ಕಾಲುಮುರಿ, ಹಸ್ತ, ಓಲೆ, ದಾಬು ಮೊದಲಾದ ಆಭರಣಗಳನ್ನು ಇಟ್ಟು ಆಲಂಕರಿಸಿ ದೇವಿಯ ವಿಗ್ರಹ ಮತ್ತು ತಳಿ ತುಂಬಾ ಹೂವಿನ ಮಾಲೆಯನ್ನು ಇಳಿಬಿಟ್ಟು ಅಲಂಕರಿಸಿರುತ್ತಾರೆ. ತಳಿಯ ಹಿಂಭಾಗಕ್ಕೂ 'ಬೆನ್‌ಬಟ್ಟೆ' ಕಟ್ಟಿರುತ್ತಾರೆ. ಇದನ್ನು ಹೊತ್ತು ಕುಣಿಯಲು ಅನುಕೂಲವಾಗುವಂತೆ ತಳಿಯ ಕೆಳಭಾಗದಲ್ಲಿ ಮಧ್ಯೆ ಕಂಚು ಅಥವಾ ಹಿತ್ತಾಳೆಯ ಒಂದು ಗಿಂಡಿಯನ್ನು ಸೇರಿಸಿ ಬಿಗಿದಿರುತ್ತಾರೆ. ಇದು ತಲೆಯಮೇಲೆ ಅಲುಗಾಡದಂತೆ ಕೂರುತ್ತದೆ.

ಗ್ರಾಮದೇವತೆಯ ವಿಗ್ರಹಗಳನ್ನು ಇರಿಸಿ ದೇವರ ಪೂಜಾವನ್ನು ಮಾಡಿ ಪೂಜಾಕುಣಿತವನ್ನು ಮಾಡುವರು. ಪ್ರತಿಯೊಂದು ದೇವತೆಯ ಹೆಸರಿನಲ್ಲಿ ಗುಡ್ಡಸೊಬ್ಬನು ಹೊತ್ತು ಕುಣಿಯುವವರು ಬೇರೆ ಇರುತ್ತಾರೆ. ಹಬ್ಬ ಹರಿದಿನ ಮಾತ್ರ ಅಲ್ಲದೆ ಭಕ್ತಾದಿಗಳು ಹರಕೆ ಮಾಡಿಕೊಂಡಾಗಲೂ ಪೂಜಾಕುಣಿತವನ್ನು ಪ್ರದರ್ಶನ ಮಾಡುವುದುಂಟು. ಸಾಮಾನ್ಯವಾಗಿ ಈ ಪ್ರದರ್ಶನದ ಸ್ಥಳ ಹಳ್ಳಿಯ ಗುಡಿಮುಂಭಾಗದ

ರಂಗಸ್ಥಳ ವಿಶಾಲವಾದ ಬಯಲಾಗಿರುತ್ತದೆ. ಪೂಜೆಯನ್ನು ಹೊತ್ತು ಕುಣಿಯುವವರು ಬಿಳಿ ಅಂಗಿ ತೊಟ್ಟು ವೀರಗಾಸೆಯ ರೀತಿಯಲ್ಲಿ ಪಂಚೆ ಧರಿಸಿ ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ. ಹಣೆಗೆ ಕುಂಕುಮ ಇಟ್ಟುಕೊಂಡಿರುತ್ತಾರೆ. ತಮಟೆ, ನಗಾರಿ, ಡೋಲು ಬಡಿತಕ್ಕೆ ಅನುಗುಣವಾಗಿ ಮೂರ್ಹೆಜ್ಜೆ, ನಾಲ್ಕೆಜ್ಜೆ, ಐದ್ಹೆಜ್ಜೆ, ಆರ್ಹೆಜ್ಜೆ - ಹೀಗೆ ವಿವಿಧ ಮಟ್ಟುಗಳಲ್ಲಿ ಕುಣಿಯುತ್ತಾರೆ. ಕಾಲಪರಿಣತ ಕಲಾವಿದರು ಪೂಜಾಕುಣಿತದಲ್ಲಿ ಅನೇಕ ಚಮತ್ಕಾರಗಳನ್ನು ತೋರುವುದುಂಟು. ಭಾರವಾದ ಪೂಜೆಯನ್ನು ಹೊತ್ತು ಸಾಲಾಗಿ ಬೋರಲಿಟ್ಟ ಮಡಿಕೆಗಳ ಮೇಲೆ ಅವು ಒಡೆಯದಂತೆ ತಾಳಕ್ಕೆ ತಕ್ಕಂತೆ ಒಂದೊಂದೇ ಹೆಜ್ಜೆಯಲ್ಲಿ ನಡೆಯುವುದು. ಮುಖವನ್ನು ಒಂದೇ ಕಡೆ ಮಾಡಿಕೊಂಡು ತಲೆಯ ಮೇಲಿರುವ ಪೂಜೆಯನ್ನು ಮಾತ್ರ ಒಂದು ಸುತ್ತು ತಿರುಗುವಂತೆ ಮಾಡುವುದು ಬಹಳ ಸೊಗಸಾಗಿರುತ್ತದೆ. ಸಾಮಾನ್ಯವಾಗಿ ಈ ಸಂದರ್ಭದಲ್ಲಿ ಹಿನ್ನೆಲೆಯಾಗಿ ಚರ್ಮವಾದ್ಯ ನುಡಿಸುವವರು ಮತ್ತು ಪೂಜಾಕುಣಿತದಲ್ಲಿ ಕೆಲವರು ಎಂಟು ಹತ್ತು ವರುಷದ ಬಾಲಕರನ್ನು ಎರಡು ಕಡೆಯ ನಡುವಿನ ಮೇಲೆ ಕೂರಿಸಿಕೊಂಡು ಕುಣಿಯುವುದ-ರೊಂದಿಗೆ ಸಾಹಸವನ್ನು ತೋರುತ್ತಾರೆ. ಇದಲ್ಲದೆ ಪೂಜೆ ಹೊತ್ತು, ಹಗ್ಗದ ಮೇಲೆ ನಡೆಯುವುದು. ನೆಲದ ಮೇಲೆ ರೂಪಾಯಿಗಳನ್ನು ತುಟಿಯಿಂದ ಕಚ್ಚಿ ಮೇಲೆತ್ತುವುದು ಮುಂತಾದ ಚಮತ್ಕಾರಗಳನ್ನು ನುರಿತ ಕೆಲವೇ ಕಲಾವಿದರು ಮಾಡಬಲ್ಲರು. ಪೂಜಾಕುಣಿತವು ಗ್ರಾಮದೇವತೆಗಳ ಹಬ್ಬ ಹರಿದಿನ, ಜಾತ್ರೆ ಸಂದರ್ಭದಲ್ಲಿ ಆಚರಣಾತ್ಮಕ ಕಲೆಯಾಗಿ ಪ್ರದರ್ಶನಗೊಳ್ಳುವುದರಿಂದ ಇದಕ್ಕೆ ಬಹಳ ಭಯಭಕ್ತಿಯ ನೇಮನಿಷ್ಠೆಗಳಿವೆ. ಪೂಜೆ ಹೊತ್ತು ಕುಣಿಯುವವರನ್ನು ವಿಶೇಷವಾಗಿ ಗೌರವಿಸ-ಲಾಗುತ್ತದೆ. ಕೆಲವು ಹಬ್ಬಗಳಲ್ಲಿ ಇತರೆ ಊರುಗಳಿಂದ ಆಹ್ವಾನಿಸಲಾದ ಹತ್ತಾರು ದೇವತೆಗಳು ಒಂದೆಡೆ ಸೇರಿ ಹತ್ತಾರು ಪೂಜೆಗಳ ಒಟ್ಟಾರೆ ಕುಣಿತವೇ ಏರ್ಪಡುತ್ತದೆ. ಆಯಾ ಊರುಗಳಿಂದಲೇ ಬಂದ ತಮಟೆ ನಗಾರಿಯವರು ಒಟ್ಟಿಗೆ ಸೇರಿ 'ಗತ್ತು' ಹೊಡೆಯುವಾಗ ಆ ಶಬ್ದ ಮತ್ತು ಕುಣಿತವು ನೋಡಲು ಮನರಂಜನೆಗೆ ಅವಕಾಶ ಮಾಡಿಕೊಡುತ್ತದೆ.

೧೬. ರಂಗದ ಕುಣಿತ:

ರಂಗದ ಕುಣಿತವು ಸಾಮಾನ್ಯವಾಗಿ ಚಾವಡಿಯ ಮುಂಭಾಗ, ಊರದೇವಿಯ ಗುಡಿಯ ಮುಂಭಾಗದ ಅಂಗಳದಲ್ಲಿ ನಡೆಯುವಂತಹ ಕುಣಿತವಾಗಿರುತ್ತದೆ. ಇದನ್ನು ಬಯಲು ಸೀಮೆಯಲ್ಲಿ "ಸುಗ್ಗಿ ಕುಣಿತ"ವೆಂದು ಕರೆಯುತ್ತಾರೆ. ಇದು ಮಾರಿಹಬ್ಬಗಳ ಸಂದರ್ಭದಲ್ಲಿ ಹೆಚ್ಚಾಗಿ ನಡೆಯುವಂತಹ ಕಾರ್ಯಕ್ರಮವಾಗಿದ್ದು 'ಮಾರಿಕುಣಿತ' ಎಂದು ಪ್ರಸಿದ್ಧಿ ಪಡೆದಿದೆ. ಕುಣಿತದಲ್ಲಿ ಎಷ್ಟು ಜನರಾದರೂ ಭಾಗವಹಿಸಬಹುದು.

ಸಮಸಂಖ್ಯೆಯ ಜನ ಇರಬೇಕು ಅಷ್ಟೇ. ವೃತ್ತಾಕಾರವಾಗಿ ಕುಣಿಯುವುದು ಸಾಮಾನ್ಯ. ಕೆಲವು ಸಂದರ್ಭಗಳಲ್ಲಿ ಮೂರು ಅಥವಾ ನಾಲ್ಕು ಸಾಲಿನಲ್ಲಿ ಕುಣಿಯುವುದುಂಟು. ಕುಣಿಯುವವರು ತಮಟೆ ಅಥವಾ ಡೋಲಿನ ಗತಿಗೆ ತಕ್ಕಂತೆ ಹೆಜ್ಜೆ ಹಾಕಬೇಕು. ಹೆಜ್ಜೆಯ ಬೇರೆ ಬೇರೆ ಗತಿಗೆ ಬೇರೆ ಬೇರೆ ಹೆಸರುಗಳಿವೆ. ಒಂದೊಂದು ಗತಿಗೂ ಇಂತಿಷ್ಟೇ ಹೆಜ್ಜೆಗಳನ್ನು ಹಾಕಬೇಕೆಂಬ ನಿಯಮವಿದೆ. ಮಾರಮ್ಮನ ಗತಿ, ಕೂತಾಟದ ಗತಿ, ಬಾಬಯ್ಯನ ಗತಿ, ಸೈಕಲ್ಲವೆ, ಒಳಗತಿ, ಕೀಳುಗತಿ, ಸೀಮೆಗತಿ, ಬೈಸಿಗೆಗತಿ, ಕತ್ತರಾಗಾಲಗತಿ, ತಂಬಡಿಗತಿ. ಹೀಗೆ ನಾನಾ ಗತಿಗಳಿವೆ. ಯಾವುದೇ ವೇಷ-ಭೂಷಣಗಳಿಲ್ಲದ ಮತ್ತು ಆರಾಧನೆಯ ವಿಧಿಕ್ರಿಯೆಗಳಿಗೆ ಒಳಪಟ್ಟು ಕುಣಿಯಬೇಕಾಗಿಲ್ಲದ ಈ ರಂಗದ ಕುಣಿತ ಒಂದು ರೀತಿಯಲ್ಲಿ ಹಬ್ಬದಲ್ಲಿ ಪ್ರದರ್ಶಿಸಬೇಕಾದ ಅವರ ಕಲೆಯ ತಾಲೀಮು ಎಂದೂ ನಡೆಯುತ್ತದೆ. ಪ್ರಾದೇಶಿಕವಾಗಿ ಇನ್ನೂ ಹಲವು ಕುಣಿತಗಳುಂಟು. ತಮಟೆ ನಗಾರಿಗಳ ನಿಯತಗತಿಯ ಹಿನ್ನೆಲೆಯಲ್ಲಿ ವೈವಿಧ್ಯಮಯ ಹೆಜ್ಜೆಗಳನ್ನು ಹಾಕುತ್ತ ಕುಣಿಯುವುದು ಹೆಜ್ಜೆಮೇಳ. ತಲೆಯಮೇಲೆ ದೇವರ ಪ್ರತೀಕವಾದ ಪೂಜೆಯನ್ನು ಹೊತ್ತು ಕುಣಿಯುವುದು. ಪೂಜಾಕುಣಿತ, ಕೈಯಲ್ಲಿ ಉದ್ದನೆಯ ಜವಳೆ ಹಿಡಿದು ಬಳುಕಿಸುತ್ತಾ ಕುಣಿಯುವುದು. ಪಟಾಕುಣಿತ, ಕೈಯಲ್ಲಿ ಉರಿಯುವ ಪಂಜುಗಳನ್ನು ಹಿಡಿದು ಕುಣಿಯುವ ಪಂಜಿನ ಕುಣಿತ, ತಮಟೆ ನಗಾರಿಗಳಿಲ್ಲದೆ ನಡೆಯುವ ಕೋಲಾಟ, ಬೆಂಕೆ ಬರಾಟೆ, ಕೊರವಂಜಿ ಮುಂತಾದ ಕುಣಿತಗಳನ್ನು ಈ ಸಂದರ್ಭಗಳಲ್ಲಿ ನೆರವೇರುತ್ತದೆ. ಒಟ್ಟಾರೆ ಈ ಕುಣಿತ ಹಬ್ಬದ ತಯಾರಿಯ ಹಿನ್ನೆಲೆಯಲ್ಲಿ ಊರ ಯುವಕರನ್ನು ಸಜ್ಜುಗೊಳಿಸುವ ಆಶಯವನ್ನು ಹೊತ್ತಿದೆ. ಈ ಸಂದರ್ಭದಲ್ಲಿ ಹಾಡಲಾಗುವ ಪದಗಳನ್ನು ರಂಗದ ಪದಗಳೆಂದು ಕರೆಯುತ್ತಾರೆ. ಇದು ಸಾಮಾನ್ಯ ಆಯಾ ಊರುಗಳ ನಿಯಮದಂತೆ ಹನ್ನೊಂದರಿಂದ ಇಪ್ಪತ್ತೊಂದು ದಿನಗಳವರೆಗೆ ನಡೆಯುವ ಸರಣಿ ಕುಣಿತವಾಗಿರುತ್ತದೆ.

೧೭. ವೀರ ಮಕ್ಕಳ ಕುಣಿತ:

ವೀರ ಬಳೆ ಎಂಬ ಚರ್ಮವಾದ್ಯ ನುಡಿಸುವುದು ಮತ್ತು ಅದರ ಲಯಕ್ಕೆ ತಕ್ಕ ಹಾಗೆ ಕುಣಿಯುವ ವೀರ ಮಕ್ಕಳ ಕುಣಿತ ಜನಪದ ಕಲೆಗಳಲ್ಲಿ ಒಂದು ಪ್ರಕಾರವಾಗಿದೆ. ಈ ಕಲೆ ಆಚರಣೆ ಪ್ರದಾನವಾದುದು. ಚಾಮರಾಜನಗರ ಮೈಸೂರು, ಮಂಡ್ಯ ಮೊದಲಾದ ಜಿಲ್ಲೆಗಳ ಕಡೆ ಈ ಕಲೆ ಇಂದಿಗೂ ಇದೆ. ಈ ಪ್ರದೇಶಗಳ ದಲಿತರು, ಉಪ್ಪಾರರು, ಪರಿವಾರ ನಾಯಕರು ಮೊದಲಾದ ಹಿಂದುಳಿದ ವರ್ಗಗಳು ಒಂದು ಕಾಲದಲ್ಲಿ ಮೈಸೂರು ಅರಸರ ಸೈನ್ಯದಲ್ಲಿ ಸೈನಿಕ ಸೇವೆಯಲ್ಲಿದ್ದವರು. ಇಂದಿಗೂ ತಮ್ಮನ್ನು ವೀರಮಕ್ಕಳು ಎಂದು ಕರೆದುಕೊಳ್ಳುತ್ತಾರೆ. ಇವರೆ ಇಂದು ಈ ಕಲೆಯನ್ನು

ಪ್ರಸ್ತುತಪಡಿಸುವವರಿದ್ದಾರೆ. ಈ ವೀರ ಬಳೆವಾದನ ಮತ್ತು ವೀರಮಕ್ಕಳ ಕುಣಿತ ಯುದ್ಧ ಸಂಬಂಧಿ ಹಾಗೂ ಯುದ್ಧದ ವಿಜಯೋತ್ಸವ ಸಂಬಂಧಿಯಾದ ಒಂದು ಆಚರಣೆ. ಈ ವೀರಮಕ್ಕಳು ಎನಿಸಿದವರು ತಮ್ಮ ತಮ್ಮ ಗ್ರಾಮದೇವತೆಗಳು, ಕುಲ-ದೇವತೆಗಳ ಹಬ್ಬ, ಜಾತ್ರೆ, ಉತ್ಸವ, ಮಾಡುವಾಗ ಈ ಕಲೆಯನ್ನು ಪ್ರದರ್ಶಿಸುವುದು ವಾಡಿಕೆ. ಕೊಳ್ಳೇಗಾಲ ತಾಲ್ಲೂಕಿನ ಕುಂತೂರು, ಸೀಳ್‌ಕಲ್‌ಪುರ, ಪಾಳ್ಯ ಮತ್ತು ಚಾಮರಾಜನಗರ ಜಿಲ್ಲೆಯ ಹಲವು ಊರುಗಳಲ್ಲಿ ದಲಿತರು ಮತ್ತು ಹಿಂದುಳಿದ ಸಮುದಾಯಗಳಲ್ಲಿ ಈ ಕಲೆ ಇದೆ. ವೀರಬಳೆ ಪ್ರಾಚೀನ ಕಾಲದಿಂದಲೂ ಇದೆ. ಇದನ್ನು ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿದೆ. ರಾಜರು ಇದನ್ನು ಯುದ್ಧ ಘೋಷಣೆ, ವಿಜಯೋತ್ಸವ, ದೇವತ ಉತ್ಸವ, ಮೆರವಣಿಗೆಗಳ ಸಂದರ್ಭಗಳಲ್ಲಿ ಬಾರಿಸುವ ಪದ್ಧತಿ ಮಾಡಿದ್ದರು. ಅನೇಕ ಕುಟುಂಬಗಳು ನೇಮಕವಾಗಿದ್ದವು. ಕ್ರಮೇಣ ಈ ವೀರಬಳೆ ಪ್ರತಿಭಟನೆಗೆ ಅನ್ಯಾಯದ ವಿರುದ್ಧ ಜನಸಂಘಟನೆಗೆ, ಎಚ್ಚರಿಕೆ ಸಂಕೇತವಾಗಿ, ದಂಗೆ, ಕ್ರಾಂತಿ ಸಂಕೇತವಾಗಿ ಬಳಕೆಯಾಗುತ್ತಾ ಬಂದಿದೆ. ಆದ್ದರಿಂದಲೇ ಸ್ವತಂತ್ರಪೂರ್ವದಲ್ಲಿ ಈ ಬಳೆ ಬಾರಿಸಿದರೆ ಬ್ರಿಟಿಷರು ಆಕ್ಷೇಪಿಸುತ್ತ ಬಂದು ಈ ಬಳಕೆಯನ್ನು ಮಾರಿಹಬ್ಬಗಳು, ಗ್ರಾಮದೇವತೆ, ಹಬ್ಬಗಳು, ಮಹದೇಶ್ವರ ಜಾತ್ರೆ, ಯುಗಾದಿಹಬ್ಬ ಮೊದಲಾದ ದೇವತಾ ಕಾರ್ಯಗಳಲ್ಲಿ ನುಡಿಸುತ್ತಾರೆ. ಕೊಂಡೋತ್ಸವ, ಕಂಡಾಯ ಮೆರವಣಿಗೆ, ಸರ್ಕಾರಿ ಕಾರ್ಯಕ್ರಮಗಳಲ್ಲಿ ರಾಷ್ಟ್ರೀಯ ಹಬ್ಬಗಳು ಮೊದಲಾದ ಸಂದರ್ಭಗಳಲ್ಲಿ ನುಡಿಸುತ್ತಾರೆ. ಈ ವೀರಬಳೆ ತಾಳಕ್ಕೆ ವೀರ ಮಕ್ಕಳ ಕುಣಿತ ಕುಣಿಯುತ್ತಾರೆ. ಸುಮಾರು ೨೫-೩೦ ಜನರು ತಂಡವಾಗಿ ಪಾಲಾಗಿ ವೃತ್ತಾಕಾರದಲ್ಲಿ ಕುಣಿಯುತ್ತಾರೆ. ಕುಣಿತಕ್ಕೆ ಇಂತಿಷ್ಟೆ ಜನರು ಎಂದು ನಿರ್ಬಂಧವಿಲ್ಲ. ಕುಣಿಯಲು ಬರುವ ಗ್ರಾಮದ ಎಲ್ಲರೂ ಸೇರಿ ಕುಣಿಯ-ಬಹುದು. ಬಳೆ ನುಡಿಸುವಾಗ ವೀರಮಕ್ಕಳಲ್ಲಿ ಯಾರಾದರೂ ಒಬ್ಬರು ಮಾರಮ್ಮನನ್ನು ಗ್ರಾಮದೇವತೆಗಳನ್ನು ಕುರಿತು ಹಾಡುತ್ತಾರೆ. ಕೆಲವರು ಒಗಟುಗಳನ್ನು ಹೇಳುತ್ತಾರೆ. ಉಳಿದವರು ಅದಕ್ಕೆ ಧ್ವನಿ ಸೇರಿಸಿ ಆಲುತ್ತಾ ಕೂಗುತ್ತಾ ಉಘೆ ಹಾಕುತ್ತಾರೆ.

ಈ ಬಳೆ ನುಡಿಸುವುದರಲ್ಲಿ ಮತ್ತು ಕುಣಿತದಲ್ಲಿ ಸುಮಾರು ೧೮ ಮಟ್ಟುಗಳು ಅಥವಾ ವರಸೆಗಳಿವೆಯಂತೆ. ಇದೊಂದು ವೃತ್ತಿಯಾಗಿರುವ ಕಲೆಯಲ್ಲಿ ಹಬ್ಬ ಹರಿದಿನ, ಜಾತ್ರೆ, ಉತ್ಸವ ಮೆರವಣಿಗೆ, ಕುಣಿತಗಳ ಸಂದರ್ಭದಲ್ಲಿ ಮಾತ್ರ ನುಡಿಸುವುದು ಇದನ್ನು ಕಲಿತವರು ಇದು ಸಾಂಸ್ಕೃತಿಕ ಹೊಣೆಗಾರಿಕೆ ಎಂದು ನುಡಿಸುತ್ತಾರೆ. ಇದು ದೇವರ ಸೇವೆ ಎಂದು ಭಾವಿಸುತ್ತಾರೆ.

ವೀರಮಕ್ಕಳ ಕುಣಿತಕ್ಕೆ ಚಕ್ರಾದಿ ಬಳೆಯೆಂಬ ವಾದ್ಯವನ್ನು ಬಳಸಿಕೊಂಡು ಕಲೆಯನ್ನು ಪ್ರಸರಣಾವಾಗಿದೆ. ಕುಣಿತವಾಗಿಯೇ ಬಳಸುವ ಚಕ್ರಾದಿಬಳೆ ಎಂಬ ವಾದ್ಯ ಹಾಗೂ ಅದಕ್ಕೆ ಪೂರಕವಾದ ಕುಣಿತದಾಗಿತ್ತು. ಬಾನಿಯ ಆಕಾರದಲ್ಲಿ ಮಾಡಿದ ಮಣ್ಣಿನ ಮಡಿಕೆಯ ಬಾಯಿಗೆ ಮೇಕೆ ಚರ್ಮವನ್ನು ಬಿಗಿದು ಈ ವಾದ್ಯವನ್ನು ಸಿದ್ದಗೊಳಿಸಲಾಗುತ್ತದೆ. ಚೆನ್ನಾಗಿ ಹದ ಮಾಡಿದ ಜೇಡಿಮಣ್ಣಿನಿಂದ ದಪ್ಪನಾಗಿ ಮತ್ತು ಗಟ್ಟಿಯಾಗಿ ಮಾಡಿದ ಬಾನಿಗೇ ಬಲಿತ ಮೇಕೆಯ ಹದಮಾಡಿದ ಚರ್ಮವನ್ನು ಅಂಟಿಸಲಾಗಿರುತ್ತದೆ. ಬಾನಿಯ ಎರಡೂ ಬದಿಗೆ ಚಿಲಕವನ್ನು ಮಾಡಿ ಅದಕ್ಕೆ ಹಗ್ಗ ಕಟ್ಟಿ ಕತ್ತಿಗೆ ನೇತು ಹಾಕಿಕೊಳ್ಳುವಂತೆ ಮಾಡಲಾಗುತ್ತದೆ. ಇತ್ತೀಚೆಗೆ ಕೆಲವು ಕಡೆ ಮಣ್ಣಿನ ಬದಲು ಕಂಚಿನಿಂದ ಮಾಡಿದ ಚಕ್ರಾದಿ ಬಳೆಯೂ ಕಾಣಸಿಗುತ್ತದೆ. ಚರ್ಮವನ್ನು ಅಂಟಿಸಲು ಒಂದು ರೀತಿಯ ಸೊಪ್ಪಿನ ರಸ ಬಳಸಲಾಗುತ್ತದೆ. ಈ ಮಧ್ಯವನ್ನು ತಮಟೆ ನಗಾರಿಗಳಂತೆ ಬೆಂಕಿಯಲ್ಲಿ ಕಾಯಿಸುವಂತಿಲ್ಲ. ಬಿಸಿಲಿನಲ್ಲಿ ಮಾತ್ರ ಕಾಯಿಸಬೇಕು. ಕತ್ತಿಗೆ ನೇತುಹಾಕಿಕೊಂಡ ಈ ಚಕ್ರಾದಿಬಳೆ'ಯನ್ನು ಎರಡು ಕೈಯಿಂದಲೂ ಕಲಾವಿದ ನುಡಿಸುತ್ತಾನೆ. ಈ ರೀತಿಯಲ್ಲಿ ವೀರಮಕ್ಕಳ ಕುಣಿತದಲ್ಲಿ ಪಾಲ್ಗೊಳ್ಳುತ್ತಾರೆ.

೧೮. ಕೋಲಾಟ:

ಯುವಸಮೂಹ ಕೋಲು ಹುಯ್ಯುತ್ತಾ ನರ್ತಿಸುವ ಸಾಹಸಮಯ ನೃತ್ಯ ಕೋಲಾಟ. ಸುಮಾರು ಹತ್ತು ಹನ್ನೆರಡು ಜನರ ಯುವ ಪಡೆ ಕಾಲಿಗೆ ಗೆಜ್ಜೆ ಕಟ್ಟಿ.. ಎರಡು ಕೈಯಲ್ಲಿ ಕೋಲುಗಳನ್ನಿಡಿದು ವೃತ್ತಾಕಾರದಲ್ಲಿ ನಿಂತ ಸಾಹಸ ಪ್ರಧಾನವಾಗಿ ಕೋಲಾಟ ಆಡುತ್ತಾರೆ. ಅವರಿಗೆ ಸಾಥ್ ನೀಡಲು ಹಾಡುತ್ತ ಡೋಲು, ಓಲಗ ತರಸಿ, ತಮಟೆ ನುಡಿಸುವ ಮತ್ತೊಂದು ಗುಂಪಿರುತ್ತದೆ. ಇಳಿದು ಬರುವ ಬೆವರನ್ನು ಲೆಕ್ಕಿಸದೆ ಕೋಲಾಟದಲ್ಲಿ ನಿರವಾಗುವ ಕಲಾವಿದರು, ಏಕಾತನತೆ, ತಾದಾತ್ಮ್ಯತೆ ಇಲ್ಲದಿದ್ದರೆ ಕೋಲಿನ ಹೊಡೆತಗಳಿಂದ ರಕ್ತಸಿಕ್ತವಾಗುವುದು ಖಚಿತ.

ಸುಗ್ಗಿ, ಹಬ್ಬಹರಿದಿನಗಳಲ್ಲಿ ಕೋಲಾಟ ಆಡುವ ಗ್ರಾಮೀಣರು ಬಹಳ ಹಿಂದಿನಿಂದಲೂ ಉಳಿಸಿ, ಕಾಪಾಡಿಕೊಂಡು ಬಂದ ಕಲೆ ಕೋಲಾಟ. ನಾಡಿನಾದ್ಯಂತ ಅನೇಕ ಗ್ರಾಮಗಳಲ್ಲಿ ಹಬ್ಬದ ಮೊದಲು ಕೋಲು ತರುವ ಮತ್ತು ಹಬ್ಬದ ನಂತರ ಕೋಲು ಬಿಡುವ ಆಚರಣೆಗಳಿವೆ.

ಒಬ್ಬನ ಕೋಲಿಗೆ ಮತ್ತೊಬ್ಬನ ಕೋಲನ್ನು ತಾಕಿಸುವ ಮೂಲಕ ಆರಂಭ-ವಾಗುವ ಕೋಲಾಟ ಒಬ್ಬನಿಗೆ ಮತ್ತೊಬ್ಬ ಸುತ್ತು ಹೊಡೆಯುತ್ತಾ ಆಡುವುದು.

ಗುಂಪಿನಲ್ಲಿಯೇ ಚದುರಿದಂತೆ ನಿಂತು ಹೊರಗಿನವರು ಒಳಗೂ, ಒಳಗಿನವನು ಹೊರಗೂ ಕೋಲನ್ನು ಕೊಡುವುದು. ಹೀಗೆ ಆಡುತ್ತಾ ಕುಕ್ಕುರುಗಾಲಲ್ಲಿ ಕುಳಿತು ಕಪ್ಪೆಗಳಂತೆ ಕುಪ್ಪಳಿಸುತ್ತಾ ಒಬ್ಬೊರಿಗೊಬ್ಬರು ಕೋಲು ಕೊಡುವುದು. ಅವರಲ್ಲೇ ಎರಡು ಗುಂಪಾಗಿ ಎದುರುಬದರು ನಿಂತು ಕೋಲು ಕೊಡುವುದು. ಎರಡು ವೃತ್ತಗಳನ್ನು ರಚಿಸಿ ಒಳವೃತ್ತದವರು ಹೊರಗೂ ಹೊರವೃತ್ತದವರು ಒಳಗೂ ನುಗ್ಗಾಡುತ್ತಾ ಎಲ್ಲಿಯೂ ಆಯತಪ್ಪದಂತೆ, ಹೆಜ್ಜೆ ತಪ್ಪದಂತೆ ಕೋಲು ಕೊಡುವುದು, ಒಬ್ಬರ ಹಿಂದೆ ಒಬ್ಬರು ನಿಂತು ಕತ್ತು ಬಗ್ಗಿಸಿ ಸುತ್ತು ಹಾಕುತ್ತಾ ಬೆನ್ನ ಹಿಂದಿನಿಂದ ಕೋಲು ಕೊಡುವುದು ಇತ್ಯಾದಿಯಾಗಿ ನಾನಾ ವಿಧವಾದ ಗತಿಗಳಲ್ಲಿ ಮತ್ತು ವಿನ್ಯಾಸಗಳಲ್ಲಿ ಕೋಲಾಟ ನಡೆಯುತ್ತದೆ. ಇವುಗಳಲ್ಲಿ ತುಂಬ ಮುಖ್ಯವಾದ ಕೆಲವು ಬಗೆಗಳು ಕೂಡಿ ಇಡೀ ಕೋಲಾಟವು ಕಲೆಯು ವಲಯದಿಂದ ಹೊರತಂದುದೇನೂ ಅಲ್ಲ. ಕೋಲಾಟ ಎನ್ನುವಷ್ಟರಿಂದಲೇ ಅದು ಕಲೆಯ ವಲಯದಿಂದ ದೂರಾದುದು ಎನ್ನುವ ಹಾಗಿಲ್ಲ. ಕೋಲಾಟವನ್ನು 'ಕಲಾಮೇಳ' ಎಂಬ ಹೆಸರಿನಲ್ಲಿಯೂ ಕರೆಯುವುದುಂಟು. ಇಂತಹ ಒಂದು ಕಲೆ ಎಲ್ಲೆಡೆಯೂ ಸಾರ್ವತ್ರಿಕವಾಗಿ ಕಂಡು-ಬರುವಂತಹುದೇ ಆದರೂ ಹೆಚ್ಚು ವೈವಿಧ್ಯದೊಡನೆ ಹಾಗೂ ವೈಶಿಷ್ಟ್ಯದೊಡನೆ ಕೂಡಿ ಚಾಮರಾಜನಗರಜಿಲ್ಲೆಯಲ್ಲಿ ಕಂಗೊಳಿಸುವುದುನ್ನು ಕಾಣಬಹುದು. "ಕೋಲಾಟ ಸರ್ವಾಕರ್ಷಕವಾದ ಒಂದು ಸುಂದರ ಕಲೆ. ಬಯಲಾಟದಂತೆಯೇ ಎಷ್ಟೊ ಹೊತ್ತಿನವರೆಗೂ ಬೆಳೆಸಿಕೊಂಡು ಹೋಗಬಹುದಾದಂತಹ ನೋಡಿ ತಣಿದು ಸಂತೋಷಿಸಬಹುದಾದಂತಹ ಒಂದು ವಿಶಿಷ್ಟ ಕಲಾ ಪ್ರಕಾರ. ಈ ದೃಷ್ಟಿಯಿಂದ ಕೋಲಾಟ, ಬಯಲಾಟಗಳು ನಮ್ಮ ಗ್ರಾಮಶಾಲೆಯ ಎರಡು ಕಣ್ಣುಗಳು ಎನ್ನಬಹುದು".[೧]

೧೯. ಲಂಬಾಣಿ ನೃತ್ಯ:

ಲಂಬಾಣಿ ಸಮುದಾಯ ಭಾರತದಾದ್ಯಂತ ಕಂಡುಬರುವ ಒಂದು ಅಲೆಮಾರಿ ಜನವರ್ಗ. ಇವರನ್ನು ಕರ್ನಾಟಕ ಸರ್ಕಾರ ಪರಿಶಿಷ್ಟಜಾತಿಯಲ್ಲಿ ಗುರ್ತಿಸಿದ್ದರೂ ಸಹ ಇವರು ಮೂಲತಃ ಬುಡಕಟ್ಟು ಜನಾಂಗಕ್ಕೆ ಸೇರಿದವರು. ಇವರನ್ನು ಲಂಬಾಣಿ, ಲಮಾಣಿ, ಲಂಬಾಡಾ, ಬಂಜಾರ, ಬಣಜಾರ, ಸುಬಾಲಿ, ಸಲುಗಾಲಿ ಇತ್ಯಾದಿ ಹೆಸರುಗಳಿಂದ ಗುರ್ತಿಸುತ್ತಾರೆ. ಲಂಬಾಣಿ ಎಂಬುದು ಯಾವುದೇ ಜಾತಿ ಸಂಬಂಧಿ ಪದವಾಗಿರದೆ ಅದು ಅವರ ಕುಲವೃತ್ತಿಯನ್ನು ಸೂಚಿಸುವ ಪದವಾಗಿದೆ. ಇವರು

---

೧. ಡಾ. ಜೀ.ಶಂ.ಪರಮಶಿವಯ್ಯ, ಜನಪದ ಸಾಹಿತ್ಯ ಸಮೀಕ್ಷೆ, ಪುಟ. ೨೫.

ಮೂಲತಃ ವ್ಯಾಪಾರಿಗಳು. ಹಾಗಾಗಿಯೇ ಇವರು ಅಲೆಮಾರಿಗಳೂ ಹೌದು. ವ್ಯಾಪಾರಕ್ಕಾಗಿ ಗುಂಪು ಗುಂಪಾಗಿ ವಲಸೆ ಹೋಗುತ್ತಿದ್ದರು. ಆಗ ತಾತ್ಕಾಲಿಕವಾಗಿ ಉಳಿದುಕೊಳ್ಳಲು ಇವರು ತಾಂಡಗಳನ್ನು ಕಟ್ಟಿಕೊಳ್ಳುತ್ತಿದ್ದರು. ನಾಗರಿಕತೆ ಬೆಳೆದಂತೆ ಈ ಜನಾಂಗ ತಮ್ಮ ವೃತ್ತಿಗಳನ್ನು ಬದಲಿಸಿ ಬೇರೆ ಬೇರೆ ಕಸುಬುಗಳಿಗೆ ಬದಲಾದರು. ಆದರೆ ತಮ್ಮ ಸಮುದಾಯದ ಆಚಾರ-ವಿಚಾರ, ಸಂಪ್ರದಾಯ ವೇಷಭೂಷಣ, ಹಾಡುಕುಣಿತ ಮುಂತಾದ ಅಂಶಗಳನ್ನು ಇಂದಿಗೂ ಮುಂದುವರೆಸಿಕೊಂಡು ಬಂದಿರುವುದು ಅವರ ಸಂಸ್ಕೃತ ಮೇಲಿನ ಗೌರವಕ್ಕೆ ಸಾಕ್ಷಿಯಾಗಿದೆ.

ಲಂಬಾಣಿಗರಲ್ಲಿ ಧಾರ್ಮಿಕ ಕಥನ, ಹಾಡುಗಳಿಂದ ಮನರಂಜಿಸುವವರನ್ನು, ಢಾಡಿಯರೆಂದು ಕರೆಯುತ್ತಾರೆ. ಇವರುಗಳಲ್ಲದೆ ಯಾವ ಧಾರ್ಮಿಕ ಕಾರ್ಯವು ಜರುಗು-ವುದಿಲ್ಲ. ಜೊತೆಗೆ ಇವರು ತಮ್ಮ ಹಾಡು ಕಥನಗಳಿಂದ ಇಡೀ ಸಮುದಾಯವನ್ನು ತಿದ್ದುವ, ಎಚ್ಚರಿಸುವ ಕಾರ್ಯವನ್ನು ನಿರ್ವಹಿಸುತ್ತಾರೆ. ಹಾಗೆಯೇ ಇವರು ಒಂದು ತಾಂಡದ ಸುಖದುಃಖಗಳನ್ನು ಮತ್ತೊಂದು ತಾಂಡಕ್ಕೆ ತಲುಪಿಸುವ ಕಾರ್ಯಗಳನ್ನು ಮಾಡುತ್ತಿದ್ದರು. ಆದುದರಿಂದ ಇವರಿಗೆ ಹೆಣ್ಣುಗಂಡಿನ ಸಂಬಂಧಗಳನ್ನು ಬೆಸೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು.

ಲಂಬಾಣಿಗರ ಉಡುಗೆ-ತೊಡುಗೆಗಳು ಬೇರೆ ಸಮುದಾಯದವರನ್ನು ಹೆಚ್ಚು ಆಕರ್ಷಿಸುತ್ತದೆ. ಇವರು ಉಡುಗೆಯಲ್ಲಿ ಕೆಂಪು ಬಣ್ಣಕ್ಕೆ ಆದ್ಯತೆಯನ್ನು ನೀಡುತ್ತಾರೆ. ಉತ್ತರಭಾರತದಲ್ಲಿ ಕೆಂಪು ಬಣ್ಣ ಶುಭಸೂಚಕವಾಗಿರುವುದು ಕಾರಣವಾಗಿರಬಹುದು.

ಲಂಬಾಣಿ ಮಹಿಳೆಯರು ಧರಿಸುವ ಬಟ್ಟೆಯನ್ನು ಮೂರು ಭಾಗಗಳಾಗಿ ವರ್ಗೀಕರಿಸಬಹುದು. ಮೊದಲನೆಯದು 'ಛಾಂಟಿಯಾ' ಇದು ತಲೆಯ ಮೇಲೆ ಧರಿಸುವ ದೊಡ್ಡದಾದ ವಸ್ತ್ರ. ಎರಡನೆಯದು 'ಕಾಂಚಾಳಿ' ಇದು ಕುತ್ತಿಗೆಯಿಂದ ಸೊಂಟದವರಿಗೆ ಮುಂಭಾಗವನ್ನು ಆವರಿಸಿರುವ ಕುಪ್ಪಸ. ಮೂರನೆಯದು 'ಫೇಟಿಯಾ' ಇದು ಸೊಂಟದಿಂದ ಕಾಲಿನವರೆಗಿನ ಭಾಗಗಳನ್ನು ಮುಚ್ಚುವ ಲಿಂಗ. ಈ ಮೂರು ಭಾಗಗಳನ್ನು ಹೊಲೆಯುವಾಗ ಕವಡೆ, ಕಾಸು, ಗೆಜ್ಜೆ, ಗೋಡೆ, ಗಾಡಿನಬಿಲ್ಲೆಗಳನ್ನು ಸೇರಿಸಿ ಹೊಲೆಯುತ್ತಾರೆ. ಲಂಬಾಣಿ ಮಹಿಳೆಯರು ಹೆಚ್ಚು ಅಲಂಕಾರಪ್ರಿಯರು. ಒಡವೆಗಳಿಂದ ತಮ್ಮನ್ನು ಅಲಂಕರಿಸಿಕೊಂಡಂತೆ. ತಮ್ಮ ದೇಹದ ಅಂಗಾಂಗಗಳನ್ನು ಹೆಜ್ಜೆ ಹಾಕಿಸಿಕೊಳ್ಳುವುದರಿಂದ ಅಲಂಕರಿಸಿಕೊಳ್ಳುತ್ತಾರೆ. ಮೈನೆರೆಯುವ ಮೊದಲು ಹಾಕಿಸಿಕೊಳ್ಳುವ ಹಚ್ಚೆಯನ್ನು 'ಧಮುಮುದ್ರೆ'ನಿಂತಲೂ ಮೈನೆರೆದ ನಂತರ ಹಾಕಿಸಿಕೊಂಡ ಹೆಜ್ಜೆಯನ್ನು 'ಪಾಪಮುದ್ರೆ' ಎಂದು ನಂಬುತ್ತಾರೆ. ಶಿವಮೊಗ್ಗ

ಜಿಲ್ಲೆಯಲ್ಲಿ ವಾಸಿಸುವ ಲಂಬಾಣಿ ಮಹಿಳೆಯರು ವಿಶೇಷವಾಗಿ, ತಮ್ಮ ಪಾಲೀನ ಮೀನ ಖಂಡದ ಮೇಲೆ 'ಜೋಗಿ ಜಡೆ ಕಮಲದ ಹೂವಿನ ಚಿತ್ರ ಹಾಕಿಸಿಕೊಳ್ಳುತ್ತಾರೆ.

ಲಂಬಾಣಿ ಸಮುದಾಯ ಗಂಟೆಗಟ್ಟಲೆ ಗೀತೆಯನ್ನು ಹಾಡುವ ಮುಖಾಂತರ ಮೂಲತಃ ಲಂಬಾಣಿ ಭಾಷೆಯಲ್ಲಿರುವ ಕಾವ್ಯ ಜನಪದ ಸಂಸ್ಕೃತಿಯ ಉದಾತ್ತತೆಯನ್ನು ಅಭಿವ್ಯಕ್ತಿಸುತ್ತದೆ.

"ಜಗದಾಂಬ ರೂಪ ಬದಲಾದ
ಚಲ ಜಾರಿಚ ಭಾಯಾನ ಧೂಂಡೇನ!
ಭೀ ಮಾರೇ ಅಂಗಣೀಮ ಜಾನ
ಹೋಬರಗಿ ಜಗದಾಂಬ ಆನ!"[೧]

ಹಾಡುವುದು ಲಂಬಾಣಿ ವರ್ಗದ ಒಂದು ಜನಪದ ಪ್ರಕಾರವಾದರೆ ಮತ್ತೊಂದು ಪ್ರಕಾರ ಜನಪದ ನೃತ್ಯ. ಲಂಬಾಣಿ ನೃತ್ಯದಲ್ಲಿನ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ್ದು. ಮುಂಗೈ ಮತ್ತು ಕಾಲುಗಳಿಗೆ ದಪ್ಪನೆಯ ಬೆಳ್ಳಿಯ ಕಡಗ, ಕಿವಿಗಳಲ್ಲಿ ಜೋತುಬೀಳುವಷ್ಟು ಆಭರಣ, ರಕ್ತ ಕೆಂಪಿನ ಬನಾತು, ತುಂಬಿದ ನೆರಿಗೆಗಳಿಂದ ಕೂಡಿದ ತುಂಡುಲಂಗ ಒನಾತು ಮತ್ತು ಲಂಗದ ಮೇಲೆ ಅಂಗೈಯಗಲ ಕನ್ನಡಿಗಳು ಹಾಗೂ ಅಡವಿಯಿಂದ ಸಂಗ್ರಹಿಸಿದ ಮಣಿಗಳ ಚಿತ್ತಾರ, ಕುತ್ತಿಗೆ ಇಳಿಬಿಟ್ಟು ಆರೇಳು ಮಣಿಸರಗಳು, ತೋಳುಬಂದಿ, ಬೆರಳುಗಳಲ್ಲಿ ತಾಮ್ರ ಹಾಗೂ ಹಿತ್ತಾಳೆ ಒಡವೆ ಧರಿಸಿದ ಲಂಬಾಣಿ ಸ್ತ್ರೀಯರು ಆರ್ಭಟ, ಭಾವಾವೇಶಗಳಿಲ್ಲದೆ ನರ್ತಿಸುತ್ತಾರೆ. ಸಮೂಹ ಗಾಯನದಲ್ಲಿ ನಡುನಡುವೆ ಚಪ್ಪಾಳೆ ಹಾಕಿಕೊಳ್ಳುತ್ತ ಲಯಭರಿತವಾಗಿ ಗಂಟೆಗಟ್ಟಲೆ ಕುಣಿವ ಜನಪದರು ತಮ್ಮ ಸಾಂಸ್ಕೃತಿಕ ನಾಯಕ ಸೇವಾಲಾಲನನ್ನು ನೆನೆದು ಹಾಡುವ ಕಥನ ಕಾವ್ಯವಾಗಿದೆ.

ಚಾಮರಾಜನಗರಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ದಿನ್ನಳ್ಳಿ, ಮಾಟಗಳ್ಳಿ, ಚಾಮರಾಜನಗರ ತಾಲ್ಲೂಕಿನ ಬೂದಿಪಡಗ, ಕೋಳಿಪಾಳ್ಯ, ಮೂಕನಪಾಳ್ಯ, ಗೊಲ್ಲರ ದಿಂಬ, ವೀರಯ್ಯಪುರ ಇತ್ಯಾದಿ ಊರುಗಳಲ್ಲಿ ಲಂಬಾಣಿ ಜನರು ತಳವೂರಿದ್ದಾರೆ. ಪ್ರಸ್ತುತ ಮೇಗ್ಯಾ ನಾಯ್ಕ ನೇತೃತ್ವದ ಸೇವಾ ಬಂಜಾರ ಕಲಾ ಸಂಘ ಜಾನಪದ ನೃತ್ಯಕ್ಕೆ ತಮ್ಮನ್ನು ತೆರೆದುಕೊಂಡ ಕಲಾತಂಡಗಳಾಗಿವೆ. ಲಕ್ಷ್ಮೀಬಾಯಿ, ರತ್ನಬಾಯಿ, ಮಾದೇವಿ-ಬಾಯಿ, ರಮಾಬಾಯಿ, ತುಳಸಿಬಾಯಿ, ಲಂಬಾಣಿ ನೃತ್ಯದ ಪ್ರಮುಖ ಕಲಾವಿದರು.

---

೧. ಸೋಮಶೇಖರ ಬಿಸಲ್ವಾಡಿ, ಹೊನ್ನುಹೊಳೆ, ಪು. ೧೧೪.

ಹೀಗೆ ತನ್ನದೇ ಆದಂತಹ ವೈಶಿಷ್ಟ್ಯತೆಯನ್ನು ಲಂಬಾಣಿ ನೃತ್ಯವು ಚಾಮರಾಜನಗರ ಜಿಲ್ಲೆಯ ಜನಪದ ಕಲೆಗಳಿಗೆ ತನ್ನ ಮೆರಗುನ್ನು ನೀಡಿದೆ.

೨೦. ಪಿನಾಸಿ ನೃತ್ಯ:

ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಬುಡಕಟ್ಟುಗಳ ವರ್ಗದಲ್ಲಿ ಕಂಡು-ಬರುವಂತಹ ಪ್ರಮುಖರು ಸೋಲಿಗರು. ಭಾರತದ ಬುಡಕಟ್ಟು ಜನಾಂಗದಲ್ಲಿ ಪ್ರಮುಖವಾಗಿ ಕಂಡುಬರುವಂತಹ ಕಂಪಣಬೇಡರು ಮತ್ತು ಲಂಬಾಣಿ ಸಮುದಾಯ-ವನ್ನು ನಾವು ಒಂದೊಂದು ಜಾತಿ ಸಮುದಾಯದಲ್ಲಿ ಗುರ್ತಿಸಿಕೊಂಡಿದ್ದರೂ ಸಹ ಮೂಲತಃ ಅವರುಗಳೂ ಬುಡಕಟ್ಟು ಜನಾಂಗಕ್ಕೆ ಸೇರಿದವರಾಗಿರುವುದರಿಂದ ಅವರುಗಳನ್ನೂ ಸಹ ಇಲ್ಲಿ ಅಧ್ಯಯನಕ್ಕೆ ಅಳವಡಿಸಿಕೊಂಡಿದೆ.

ತಲಾತಲಾಂತರಗಳಿಂದಲೂ ಕಾಡಿನ ಒಳಗಿದ್ದು ನಾಡಿನ ಸಂಪರ್ಕವನ್ನೇ ಕಾಣದ ನಿಸರ್ಗದ ಜೊತೆ ಅವಿನಾಭಾವ ಸಂಬಂಧ ಹೊಂದಿದ ಜನವರ್ಗ ಸೋಲಿಗರು. ಗುಂಗುರು ಕೂದಲು, ಕುರುಚಲುಗಡ್ಡ, ಕುಳ್ಳನೆಯ ದೇಹ, ದಪ್ಪ ತುಟಿ, ಅಗಲ ಮೂಗು ಹೊಂದಿರುವ ಸೋಲಿಗರು ಕಾಡುಪ್ರಾಣಿಗಳನ್ನು ಭೇಟಿಮಾಡಿ ಆಹಾರ ಉತ್ಪಾದಿಸಿಕೊಳ್ಳುವುದಲ್ಲದೆ ಗೆಡ್ಡೆಗೆಣಸು ತಿಂದು ಜೀವಿಸುತ್ತ ಅಲೆಮಾರಿಗಳಾಗಿದ್ದವರು. ಅವರ ಬದುಕಿನ ಸಂಸ್ಕೃತಿ ನಾಡಿನ ಜನರಿಗಿಂತ ತೀರ ವೈರುಧ್ಯ. ಮಗುದಿನ ಜನನದ ನಂತರ ಬಳಕೆ ತೆಗೆಯುವಿಕೆ, ಋತುಮತಿಯಾದಾಗ, ಮದುವೆಯಾಗುವಾಗ, ಶವಸಂಸ್ಕಾರ ಸಂದರ್ಭದಲ್ಲಿ ಸೋಲಿಗರು ಸಂಪ್ರದಾಯ ಮರೆಯುತ್ತಾರೆ. ಪಶ್ಚಿಮಘಟ್ಟವು ಕೊನೆಗೊಳ್ಳುವ ಬಿಳಿಗಿರಿರಂಗನಬೆಟ್ಟ, ಮಹದೇಶ್ವರಬೆಟ್ಟದ ಸಂಮೋಹಕ ದಟ್ಟಡವಿಯ ನಡುವೆ ಚದುರಿಕೊಂಡಿದ್ದ ಈ ಬುಡಕಟ್ಟು ಜನರು ಕಾಲ ಸರಿದಂತೆ ನಾಡಿನ ಸಂಪರ್ಕಕ್ಕೆ ಬಂದವರು. ಜೇನು ಹಳಿದು ತಂದು ಕಾಡಂಚಿನ ಗ್ರಾಮಗಳಿಗೆ ಮಾರಾಟ ಮಾಡುತ್ತ ನಾಡಿನ ಜನರ ಸಂಪರ್ಕ ಏರ್ಪಡಿಸಿಕೊಂಡವರು.

ಬಿಳಿಗಿರಿರಂಗನಬೆಟ್ಟದ ಗಿರಿಜನರ ಸುಧಾರಣೆಗೆ ಮೊದಲ ಹೆಜ್ಜೆ ಇಟ್ಟವರು ಸಾಮಾಜಿಕ ಕಾರ್ಯಕರ್ತ, ರೈಟ್‌ಲೈಲಿ ಹುಡ್ ಪ್ರಶಸ್ತಿ ಪುರಸ್ಕೃತ ಡಾ. ಸುದರ್ಶನ್‌ರವರು ಸೋಲಿಗರ ಸಂಸ್ಕೃತಿಯನ್ನು ಪೋಷಣೆಗೆ ಮುಂದಾದರೂ. ಸೋಲಿಗರ ಆರಾಧ್ಯದೈವ ಜಡೇಸ್ವಾಮಿ, ರಂಗಸ್ವಾಮಿ, ಮಾದೇಶ್ವರ ಇತ್ಯಾದಿ ಜಾತ್ರೆಗಳಲ್ಲಿ ತೊಟ್ಟ ಹಬ್ಬದ ಸಂದರ್ಭದಲ್ಲಿ ಗಂಡಸರು, ಹೆಂಗಸರು ಎನದೆ ದೊಡ್ಡ ಸಂಪಿಗೆಯ ದಟ್ಟ ಅರಣ್ಯದಲ್ಲಿ ರಾತ್ರೋರಾತ್ರಿ ಪಿನಾಸಿಯ ನಾದಕ್ಕೆ ಡೋಲಾಕಿನ ತನಕ್ಕೆ ಕುಣಿದು ಕುಪ್ಪಳಿಸುವ ಸೋಲಿಗರು ಎಂತಹವರನ್ನು ಬೆರಗಾಗಿಸುತ್ತಾರೆ. ಪೂರ್ವದ ದಿನಗಳಲ್ಲಿ ಮರದ ಎಲೆ

ಹಾಗೂ ಹೂಗಳಿಂದ ಸಿಂಗರಿಸಿಕೊಂಡು ಗಿರಿಕಾನನ ತಣಿಸುವಂತೆ ನೃತ್ಯ ಮಾಡುತ್ತಿದ್ದ ಸೋಲಿಗ ಸಮುದಾಯ ಕಾಲದೊಂದಿಗೆ ನಡೆದು ಸಾಗಿದ್ದಾರೆ. ಆಧುನಿಕತೆಯ ಬಿಸಿಗಾಳಿ ಅವರ ಮೈಮನಗಳನ್ನು ತಾಕಿದೆ. ಪ್ರಸ್ತುತ ಹೆಂಡ, ಸಾರಾಯಿಯಂತಹ ಕಳ್ಳು ಕುಡಿದು ಅಹೋರಾತ್ರಿ ಹೆಜ್ಜೆ ಇಡುವ ಸೋಲಿಗ ಬುಡಕಟ್ಟು ಜನವರ್ಗ ನೃತ್ಯದ ನಡುನಡುವೆ ಜಡೆಸ್ವಾಮಿ, ರಂಗಭಾವ, ಮಾದೇಶ್ವರ... ಹೀಗೆ ಉದ್ಧಾರಗಳನ್ನು ತೂಗುತ್ತಾರೆ. ವಾದ್ಯ ನುಡಿಸುವವರಿಗೆ ವಿರಾಮಕೊಟ್ಟು, 'ಗೊರು ಗೋರುಕ ಗೊರಾಕಿನ... ಗೊರು ಗೊರುಪ ಗೊರಾಕನ....' ಎಂದು ಹಾಡಿಕೊಳ್ಳುತ್ತಾ ವೃತ್ತಾಕಾರದಲ್ಲಿ ನಿಂತು ಚಲಿಸುತ್ತ ಕುಣಿಯುತ್ತಾರೆ. ಅಪ್ಪಟ ಜನಪದ ಹೆಜ್ಜೆಗಳಾಕುತ್ತಾ ಇಳಿದು ಬರುವ ಬೆವರನ್ನು ಲೆಕ್ಕಿಸದೆ ಕೈಯಲ್ಲಿಡಿದ ಸೊಪ್ಪಿನ ಕೊನೆಯೊಂದಿಗೆ ಆಟಕ್ಕಿಳಿದ ಆದಿವಾಸಿ ಜನವರ್ಗ ನೋಡುತ್ತ ನೋಡುಗರನ್ನು ರೋಚಕಗೊಳಿಸುತ್ತಾರೆ.

ಜಿಲ್ಲೆಯಲ್ಲಿ ಸೋಲಿಗರು, ಬಡಗರು, ಬೆಟ್ಟಗುಡ್ಡಗಳ ಆಸುಪಾಸಿನಲ್ಲಿ ನೆಲೆಸಿರುವ ಆದಿವಾಸಿ ಜನಾಂಗವಾಗಿದ್ದು, ಹಬ್ಬಹರಿದಿನಗಳಲ್ಲಿ ಅವರು ನೃತ್ಯಮಾಡುವ ಪರಿ ಪರಂಪರೆಯ ಮೂಲದೆಡೆಗೆ ಕರೆದೊಯ್ಯುತ್ತದೆ. ಕೊಂಬು ಡಿಕೆ, ಆನೆಸಡ್ಡು, ಗೂರೆ–ಮಡು, ಕಾಥೇಗಲ್ಲು, ಯತ್ತೇಗೌಡನ ದೊಡ್ಡಿ, ಮುರಟಿ ಪಾಳ್ಯ, ಕೆರೆದಿಂಬ, ಕನ್ನೇರಿ ಕಾಲೋನಿ, ಪುರಣಿಪೋಡು, ಬಂಗ್ಲೇಪೋಡು, ನೆಲ್ಲಿಕದಾರು, ಉದ್ದತ್ತಿ, ಹಿರಿಯಂಬಲ, ಸೀಗೆಬೆಟ್ಟು, ಮಂಜಿಗುಡಿ, ಗೊಂಬೆಗಲ್ಲು ಇತ್ಯಾದಿ ಪೋಡುಗಳಲ್ಲಿ ತಳವೂರಿರುವ ಸೋಲಿಗರು ಅವರ ಸಂಸ್ಕೃತಿ ಕಲೆಯ ರಾಯಭಾರಿಯಾಗಿದ್ದಾರೆ.

೨೧. ಟಿಬೇಟಿಯನ್ ನೃತ್ಯ:

ಟಿಬೇಟನ್ನು ಚೀನಾ ಆಕ್ರಮಣ ಮಾಡಿಕೊಂಡಾಗ ವಲಸೆ ಬಂದ ಟಿಬೇಟಿಯನ್ನರು. ಭಾರತ ಸರ್ಕಾರದ ನಿರ್ದೇಶನದನ್ವಯ ಬೇರೆ ಬೇರೆ ಭಾಗಗಳಲ್ಲಿ ನೆಲೆಸಿದ್ದಾರೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಒಡೆಯರ ಪಾಳ್ಯದಲ್ಲಿ ತಳವೂರಿರುವ ನೂರು ಕುಟುಂಬಗಳ ಒಂದು ಗುಂಪು ಅವರ ಜನಪದೀಯ ನೃತ್ಯವನ್ನು ಸಾಂಪ್ರದಾಯಿಕ ಉಡುಪು ಧರಿಸಿ, ವಾದ್ಯಪರಿಕರಗಳ ಸಾಥಿಗೆ ತಕ್ಕಂತೆ ನೋಡುಗನ ಮೈನವಿರೇಳುವಂತೆ ನರ್ತಿಸುತ್ತಾರೆ. ಜಿಲ್ಲೆಗೆ ಇದೊಂದು ವಿಶಿಷ್ಟವೂ, ಅಮೂಲ್ಯವೂ ಆದ ನೃತ್ಯ ಪ್ರಕಾರ, ನಮ್ಮ ನೆಲದ ಜಾನಪದ ಪ್ರಕಾರವಲ್ಲದಿದ್ದರೂ ನೃತ್ಯಭಂಗಿ, ವಿನ್ಯಾಸ ಸಂಸ್ಕೃತಿಯನ್ನು ಬಂಧಿಸುವಿಕೆ, ಸೌಜನ್ಯದ ಸಂಕೇತ, ಡೋಂಡೆಲಿಂಗ್ ಕಲಾ ತಂಡ ಜಿಲ್ಲೆಯಲ್ಲಿ ಟಿಬೇಟಿಯನ್ ನೃತ್ಯ ಸಾದರಪಡಿಸುವ ಏಕೈಕ ತಂಡವಾಗಿದೆ.

೨೨. ಗಾರುಡಿಗೊಂಬೆ ಕುಣಿತ:

'ಗಾರುಡಿಗೊಂಬೆ ಕುಣಿತ' ಒಂದು ನಿರ್ದಿಷ್ಟ ಸಮುದಾಯಕ್ಕೆ ಮೀಸಲಾದುದಲ್ಲ. ಹಾಗೆಯೇ ಇದು ಯಾವುದೇ ಧಾರ್ಮಿಕ, ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದುದಲ್ಲ. ಜನಪದದ ಒಂದು ವಿಶಿಷ್ಟವೂ, ಅದ್ಭುತವೂ ಆದ ಕಲ್ಪನೆಯ ಮೂರ್ತರೂಪ. ಮನುಷ್ಯ ತನ್ನನ್ನು ತಾನು ಮುಂದುವರೆದು ಪೌರಾಣಿಕ ಧಾರ್ಮಿಕ ವ್ಯಕ್ತಿತ್ವವನ್ನು ವೈಭವೀಕರಿಸಿ ನೋಡುವ ಹಾಗೂ ಅಪಹಾಸ್ಯ ಮಾಡಿಕೊಳ್ಳುವ ಆಶಯಗಳು ಈ ಕಲೆಯಲ್ಲಿ ಹಾಸುಹೊಕ್ಕಾಗಿವೆ. ಹಾಗಾಗಿ ಗಾರುಡಿಗೊಂಬೆ ಕುಣಿತವನ್ನು ಎಲ್ಲಾ ವರ್ಗದ ಆಸಕ್ತ ರಂಗಪ್ರೇಮಿಗಳು ಅಭಿನಯಿಸುವ ಕಲೆ ಮತ್ತು ಕುಣಿತವಾಗಿದೆ.

ಜನಪದರು ತಮ್ಮ ಶ್ರಮಿಕ ಯಾಂತ್ರಿಕ ಬದುಕಿನ ನಡುವೆ ವಿವಿಧ ಕಲೆಗಳ ಅಭಿವ್ಯಕ್ತಿಯ ಮೂಲಕ ತಮಗೆ ತಾವು ಹಗುರಾಗುತ್ತಿದ್ದರು. ಅದಕ್ಕಾಗಿ ಹಲವು ವಿನೋದದ ಕಲೆಗಳನ್ನು ರೂಢಿಸಿಕೊಂಡಿದ್ದರು. ತಾವು ಖುಷಿಪಡುತ್ತಾ ಗ್ರಾಮದ ಜನತೆಯನ್ನು ಖುಷಿಪಡಿಸುತ್ತಿದ್ದರು. ಅಂತಹ ಜನಪದ ಕಲೆಗಳಲ್ಲಿ ಈ ಗಾರುಡಿ ಗೊಂಬೆ ಕುಣಿತವು ಒಂದು ರಾಜ್ಯದ ಹಲವು ಕಡೆಗಳಲ್ಲಿರುವಂತೆ ಮೈಸೂರು ಸೀಮೆಯ ಚಾಮರಾಜನಗರ ಜಿಲ್ಲೆಯಲ್ಲಿ ಈ ಕಲೆ ಇನ್ನೂ ಇದೆ. ಗಾರುಡಿಗೊಂಬೆಗಳನ್ನು ಗಾಡಿಗೊಂಬೆಗಳು ಎಂದೂ ಕರೆಯುವುದಿದೆ. ಈ ಗೊಂಬೆಗಳ ಒನಪು-ವಯ್ಯಾರ, ನಯವಿನಯ, ಶೃಂಗಾರ ಭಾವಗಳು ಜನಪದದಲ್ಲಿ ಎಷ್ಟು ಹಾಸುಹೊಕ್ಕಾಗಿ ಬೆರೆತಿವೆಯೆಂದರೆ ಯಾರೇ ಹುಡುಗ, ಹುಡುಗಿ, ಹೆಂಗಸರು, ಸ್ವಭಾವ ಪ್ರದರ್ಶಿಸಿದರೆ, ನಡತೆ ಮೂಲಕ ಮತ್ತೊಬ್ಬರನ್ನು ಆಕರ್ಷಿಸತೊಡಗಿದರೆ ಅಂತಹವರನ್ನು 'ಗಾರುಡಿಗರು' ಗೊಂಬೆ ಗಾಣಿಕಿಯರು ಎನ್ನುತ್ತಾರೆ ಜನಪದರು.

ಗಾರುಡಿ ಗೊಂಬೆಗಳಲ್ಲಿ ಎರಡು ಗೊಂಬೆಗಳು ಮುಖ್ಯ. ಒಂದು ಗಂಡು ಗೊಂಬೆ, ಒಂದು ಹೆಣ್ಣು ಗೊಂಬೆ. ಸುಮಾರು ಎಂಟು. ಹತ್ತು ಅಡಿಗಳಿಂದ ಹದಿನೈದು ಅಡಿಗಳಷ್ಟು ಎತ್ತರದ ಗೊಂಬೆಗಳನ್ನು ಮಾಡುತ್ತಾರೆ. ಬಿದಿರಿನ ತೆಳುವಾದ ಅಚ್ಚೆಗಳಲ್ಲಿ ಮನುಷ್ಯ ಶರೀರ, ಕೈಗಳನ್ನು ನೇಯ್ದು ಒಳಗೆ ಟೊಳ್ಳಾಗಿ ವ್ಯಕ್ತಿಯೊಬ್ಬ ಒಳಗಿನಿಂದ ಹೊತ್ತು ನಿಂತು ಕುಣಿಯಲು ಅನುಕೂಲ ಮಾಡಿರುತ್ತಾರೆ. ಈ ಬಿದಿರಿನ ತೆಳುವಾದ ಅಚ್ಚೆಗಳಲ್ಲಿ ಮನುಷ್ಯ ಶರೀರ, ಕೈಗಳನ್ನು ನೇಯ್ದು ಒಳಗೆ ಟೊಳ್ಳಾಗಿ ವ್ಯಕ್ತಿಯೊಬ್ಬ ಒಳಗಿನಿಂದ ಹೊತ್ತು ನಿಂತು ಕುಣಿಯಲು ಅನುಕೂಲ ಮಾಡಿರುತ್ತಾರೆ. ಈ ಬಿದಿರಿನ ಮನುಷ್ಯಾಕೃತಿಯ ತಡಕೆಗಳಿಗೆ ಕಾಗದದ ಹಿಟ್ಟು, ಹಗುರವಾದ ಬೆಂಡು, ಮೇಣ, ಜೇಡಿಮಣ್ಣಿನಿಂದ ಮಾಡಿದ ಮುಖಗಳನ್ನು ಕೈಗಳನ್ನು ಮಾಡಿ ಅಳವಡಿಸುತ್ತಾರೆ.

ಗಂಡು ಗೊಂಬೆ ಕೆಲವು ಸಲ ಬಾಯಿಯಲ್ಲಿ ಪುಂಗಿ ನುಡಿಸುವಂತೆ ಹೆಣ್ಣು ಗೊಂಬೆ ಆರತಿ ಎತ್ತುವಂತೆ ಇಲ್ಲವೇ ಎರಡೂ ನಡುವಿನ ಮೇಲೆ ಕೈಯಿಟ್ಟು ಕುಣಿಯುವಂತೆ ನಿರ್ಮಿಸುತ್ತಾರೆ. ಇವುಗಳಲ್ಲದೆ ಈಶ್ವರ, ಪಾರ್ವತಿ, ಹನುಮಂತ ಮತ್ತು ಹುಲಿಗಳ ಹಾಗೂ ಗಂಡು, ಹೆಣ್ಣಿನ ಬರೆ ರುಂಡುಗಳನ್ನು ಮಾತ್ರ ಅಂದರೆ ತಲೆಭಾಗಗಳನ್ನು ಮಾತ್ರ ತಯಾರಿಸುವುದು ಇದೆ. ಈ ಒಂದೊಂದು ಆಕೃತಿಗೆ ತಕ್ಕಂತೆ ಉಡುಪನ್ನು ವೇಷಗಳನ್ನು ಧರಿಸಿ ವ್ಯಕ್ತಿಗಳೇ ಈಶ್ವರ, ಪಾರ್ವತಿ, ಹನುಮ, ಹುಲಿಗಳಾಗಿ ಅಭಿನಯಿಸುವುದು ಇದೆ. ಐದು ಜನರನ್ನೊಳಗೊಂಡ ಇಂತಹ ಒಂದು ತಂಡವೇ ಇರುತ್ತದೆ. ಇದನ್ನು ಗೊಂಬೆ ಕುಣಿತ 'ಮಾರುವೇಷ' ಎಂದು ಕರೆಯುತ್ತಾರೆ. ಹೀಗೆ ತಂಡಗಳು ನಡುವೆ ಕುಣಿಯಲು ಹಿಮ್ಮೇಳವಾಗಿ ತಮಟೆ ಮತ್ತು ವಾದ್ಯ ಡೋಲುಗಳ ತಂಡವು ಇರುತ್ತದೆ. ತಮಟೆ, ಡೋಲುಗಳ ಗತ್ತಿಗೆ ವಾದ್ಯದ ನಾದಕ್ಕೆ ಗೊಂಬೆಗಳು ಕುಣಿಯುವುದೇ ಗಾರುಡಿಗೊಂಬೆ ಕುಣಿತ ಎನ್ನುವುದು ಪ್ರಚಲಿತವಾಗಿ ವಿಕಾಸಹೊಂದುತ್ತಿದೆ.

ಅಧ್ಯಾಯ –೪

ಚಾಮರಾಜನಗರ ಜಿಲ್ಲೆಯ ಜನಪದ ಕಲಾವಿದರ ಪರಿಚಯ:

ಗೊರವರ ಕುಣಿತ:

೧. ಪುಟ್ಟಮಲ್ಲೇಗೌಡ

'ಗೊರವರ ಕುಣಿತ'ವು ಕರ್ನಾಟಕದ ಜನಪದ ಕಲೆಗಳಲ್ಲಿ ಒಂದು ವಿಶಿಷ್ಟವಾದ ಕಲೆಯಾಗಿದ್ದು ಚಾಮರಾಜನಗರ, ಹಳೆ ಮೈಸೂರು ಸೀಮೆಯಲ್ಲಿ 'ಕಡಬಡಯ್ಯ' ಎಂದು ಕರೆಯುವಂತಹ ವಾಡಿಕೆ. ಈವೊಂದು ಜಾನಪದ ಕಲೆಗಳನ್ನು ಗೊರವ ಪುಟ್ಟಮಲ್ಲೇ–ಗೌಡರು ಮೈಲಾರಲಿಂಗ ಮುಡುಕುತೊರೆ ಮಲಯ್ಯನ ದೀಕ್ಷೆ ಆದವರು. ಹಳೇ ಮೈಸೂರು ಪ್ರಾಂತ್ಯದ ಗೊರವ ಕುಣಿತದ ಕಲಾವಿದರಲ್ಲಿ ಇವರ ಹೆಸರು ಪ್ರಸಿದ್ಧ.

ಗೊರವರ ಕುಣಿತ ಎಂದರೆ ಚಾಮರಾಜನಗರದ ಪುಟ್ಟಮಲ್ಲೇಗೌಡ ಎನ್ನುವಷ್ಟು ಪ್ರಸಿದ್ಧಿ ಪಡೆದಿದ್ದಾರೆ. ಇವರು ಅಕ್ಷರಶಃ ಭಾರತದಲ್ಲೆಡೆ ಈ ಕಲೆಯ ಪ್ರದರ್ಶನವನ್ನು ಮಾಡಿ ಹೆಸರುವಾಸಿಯಾಗಿದ್ದಾರೆ. ಇವರ ಬಗ್ಗೆ ಮಾಹಿತಿ ಸಂಗ್ರಹಣೆಗೆ ಹೋದ ಸಂದರ್ಭದಲ್ಲಿ ಇವರ ಕಲೆಯ ಪ್ರದರ್ಶನ, ಪ್ರಶಸ್ತಿ ಗೌರವ ಸನ್ಮಾನಗಳು ಮಹಾಪೂರವು ಕಂಡುಬಂದಿತು. ಇವರ ಹೆಸರು ಗೊರವರ ಪುಟ್ಟಮಲ್ಲೇಗೌಡರು ಎಂದರೆ ಗೊರವ ಕುಣಿತದ ದೊಡ್ಡ ಪರ್ವತ ಎನಿಸಿತು. ಬಹುಶಃ ಇಷ್ಟೊಂದು ಪ್ರಶಸ್ತಿ ಸನ್ಮಾನ, ಗೌರವ ಪಡೆದವರಲ್ಲಿ ಇವರ ಹೆಸರು ಅನನ್ಯವಾಗಿದೆ.

ಇವರು ಚಾಮರಾಜನಗರ ತಾಲ್ಲೂಕಿನ ರಾಮಸಮುದ್ರದ ಕುರುಬ ಸಮುದಾಯಕ್ಕೆ ಸೇರಿದವರು. ಇವರ ತಂದೆ ಗಿರಿಯಗೌಡ, ಕಾರ್ಯ ಅಕ್ಕಂಬಮ್ಮ, ಗೊರವರ ಕುಣಿತದ ಶಾಲೆ ಇವರಿಗೆ ತಂದೆ ತಾತ ಮುತ್ತಾತರಿಂದ ವಂಶಪಾರಂಪರ್ಯವಾಗಿ ಬಂದದ್ದು. ಇವರು ೧೨ನೆಯ ವಯಸ್ಸಿನಲ್ಲಿ ಕುಣಿತ ಆರಂಭಿಸಿದ ಇವರು ಕುಣಿಯುವ ಕಲೆಯನ್ನು ನಿಲ್ಲಿಸಿಲ್ಲ. ಇಡೀ ಅವರ ಕುಟುಂಬ ಮತ್ತು ಅಣ್ಣ ತಮ್ಮಂದಿರ ಮಕ್ಕಳು ಮೊಮ್ಮಕ್ಕಳೆಲ್ಲಾ ಈ ಕಲಾಪರಂಪರೆಯನ್ನು ಪ್ರಚಾರ ಮಾಡುತ್ತಿದ್ದಾರೆ.

ಬಾಲ್ಯದಲ್ಲಿ ತಮ್ಮ ಐದನೇ ವಯಸ್ಸಿಗೆ, ಒಂದು ವರ್ಷಕ್ಕೆ ಹತ್ತು ಕೊಳಗ ರಾಗಿಗೆ ತಾಳವಾಡಿ ಜಮೀನುದಾರರ ಮನೆಯಲ್ಲಿ ಏಳು ವರ್ಷಗಳ ಕಾಲ ಜೀತಮಾಡಿದ್ದಾರೆ. ಅಣ್ಣ–ತಮ್ಮ ಇಬ್ಬರು ಉಪದಾನ ಮಾಡಿ ತಂಗಿಯ ಮದುವೆ ಮಾಡಿದ್ದಾರೆ. ಹೀಗೆ

ಕೃಷಿ ಕೂಲಿ ಕೆಲಸ, ಜೀತ ಕಂಬಳ ಕೂಲಿ ಮಾಡುತ್ತಾ ಈ ಕಲೆಯನ್ನು ಕುಲದ ಸಂಸ್ಕೃತಿ ಎಂಬ ಕಾರಣಕ್ಕೆ ಬಿಡದೆ ಮುನ್ನಡೆಸಿದರು. ಭಿಕ್ಷೆಯ ಜೊತೆಗೆ ಕುಣಿತವನ್ನು ಕಲಿತರು. ಅಗತ್ಯ ಇದ್ದ ಕಡೆ ಸಮುದಾಯದ ನಡುವೆ ಪ್ರದರ್ಶಿಸುತ್ತಾ ನಡೆದರು.

೨. ಮಾದೇಗೌಡ

ಹಳೇ ಮೈಸೂರು ಚಾಮರಾಜನಗರ ಜಿಲ್ಲೆ ಕಡೆಯ ಗೊರವರ ಕುಣಿತ ಕಲಾವಿದರಲ್ಲಿ ಮಾದೇಗೌಡರು ಹಳೆ ತಲಮಾರಿನ ಪೈಕಿ ಒಬ್ಬರಾಗುವರು. ಇವರು ಕೂಡ ಚಾಮರಾಜನಗರ ಟೌನಿನ ರಾಮಸಮುದ್ರದಲ್ಲಿ ವಾಸವಾಗಿದ್ದು, ತಂದೆ ಗಿರಿಗೌಡ ತಾಯಿ ಅಕ್ಕಯಮ್ಮನವರಾಗಿದ್ದಾರೆ. ಮನೆಯಲ್ಲಿನ ವಾತಾವರಣ ಗೊರವ ಕುಣಿತದ ತವರಾಗಿದ್ದರಿಂದ ಮಾದೇಗೌಡರು ನೋಡುನೋಡುತ್ತಾ ಹಾಡುಹಾಡುತ್ತಾ ಈ ಕುಣಿತ ಕಲೆಯನ್ನು ಜೀರ್ಣಮಾಡಿಕೊಂಡರು. ಅಣ್ಣ ಪುಟ್ಟಮಲ್ಲೇಗೌಡರ ಸ್ಫೂರ್ತಿಯ ಕಾರಣ. ಈ ಮಾದೇಗೌಡರಿಗೆ ಅಣ್ಣನ ಸ್ಫೂರ್ತಿ ಕಾರಣವೆಂದು ತಿಳಿಯಬಹುದು. ಇದು ವಂಶಪರಂಪರೆಯಾಗಿ ಕಲಿತು ಆಚರಣೆಗೆ ಬಂದಿದ್ದನ್ನು ನೆನಪಿಸಿಕೊಳ್ಳುತ್ತಾರೆ.

ಮಾದೇಗೌಡರಿಗೆ ಜಮೀನಿಲ್ಲ. ಆಸ್ತಿಪಾಸ್ತಿ ಇಲ್ಲ. ಸಣ್ಣಪುಟ್ಟವಾಗಿ ಕಂಬಳ ಕೂಲಿ ಮಾಡುತ್ತಿದ್ದರು. ವಯಸ್ಸಾದಂತೆ ಉಪದಾನ ಮಾಡುತ್ತಾ ಕಾಲ ಕಳೆಯುತ್ತಿದ್ದಾರೆ. ಗೊರವರಲ್ಲಿ ತಂಡವಾಗಿ, ಒಂಟಿಯಾಗಿ ಉಪದಾನ ಮಾಡುವ ವಾಡಿಕೆ ಇದೆ. ಅದರಂತೆ ಮಾದೇಗೌಡರು ಹಲವು ವರ್ಷಗಳ ಕಾಲ ಅಣ್ಣ ತಮ್ಮ ಸಹಕಲಾವಿದರು ಕೂಡಿ ಭಿಕ್ಷೆ ಮಾಡಿ, ಕ್ರಮೇಣ ಒಂಟಿಯಾಗಿ ಉಪದಾನ ಮಾಡಲಾರಂಭಿಸಿದರು. ಈ ಕಲೆಯ ಪ್ರದರ್ಶನದಲ್ಲೂ ಹೀಗೆ. ಮಾದೇಗೌಡರು ತಮ್ಮ ಅಣ್ಣ ಹಿರಿಯ ಕಲಾವಿದ ಪುಟ್ಟಮಲ್ಲೇಗೌಡರ ತಂಡದ ಸದಸ್ಯನಾಗಿ ಕಲಾಪ್ರದರ್ಶನ ಮಾಡಿದ್ದಾರೆ. ಅನೇಕ ಕಡೆಗಳಲ್ಲಿ ಒಂಟಿಯಾಗಿ ತಮ್ಮದೇ ನಾಯಕತ್ವದಲ್ಲಿ ಪ್ರದರ್ಶನವನ್ನು ನೀಡಿದ್ದಾರೆ. ಭಿಕ್ಷೆಗೆ ಹೋಗಲಿ, ಪ್ರದರ್ಶನಕ್ಕೆ ಹೋಗಲಿ ತಂಡದ ಪ್ರತಿಯೊಬ್ಬರಿಗೂ ಸಿಗುವಂತೆ ಮಾದೇಗೌಡರಿಗಾಗಿ ಸಮಪಾಲು.

ಮೈಲಾರಲಿಂಗನ ಸಾಂಸ್ಕೃತಿಕ ಕೇಂದ್ರಗಳಾದ ಮುಡುಕುತೊರೆ, ಕೊಂಗಳ್ಳಿಬೆಟ್ಟ, ಮಲೆಮದೇಶ್ವರ ಬೆಟ್ಟ, ಗ್ರಾಮಗಳ ಹಬ್ಬಗಳು ಉತ್ಸವಗಳು, ಒಕ್ಕಲಿನವರ ಮನೆ ಕಾರ್ಯಗಳಲ್ಲಿ ಮಾದೇಗೌಡರು ಈ ಕಲೆಯ ಪ್ರದರ್ಶನ ಮಾಡುತ್ತಾ ಬಂದಿದ್ದಾರೆ. ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳನ್ನೊಳಗೊಂಡು ರಾಜ್ಯ, ದೇಶ-ವಿದೇಶಗಳಾದ್ಯಂತ ಮಾದೇಗೌಡರು ಅಣ್ಣನ ಜೊತೆಯಲ್ಲಿ ಸಂಚರಿಸಿ ಪ್ರದರ್ಶನ

ನೀಡಿದ್ದಾರೆ. ಮಾದೇಗೌಡರು ಹೇಳುವಂತೆ ಪುಟ್ಟಮಲ್ಲೇಗೌಡರು ಭಾಗವಹಿಸಿ ನೀಡಿರುವ ಎಲ್ಲಾ ಪ್ರದರ್ಶನಗಳಲ್ಲೂ ಇವರು ತಂಡದ ಸದಸ್ಯನಾಗಿ ಭಾಗವಹಿಸಿದ್ದಾರೆ.

ಮಾದೇಗೌಡರು ಅಣ್ಣನಷ್ಟೇ ಸಮರ್ಥ, ಹಿರಿಯ ಕಲಾವಿದರು ಇವರ ಹೆಸರಿನಲ್ಲಿ ಸಹ ಹಲವು ಪ್ರಶಸ್ತಿ ಪತ್ರಗಳಿವೆ. ಇವರು ೧೯೮೯ ಮತ್ತು ೨೦೦೬ರಲ್ಲಿ ನವದೆಹಲಿಯಲ್ಲಿ ನಡೆದ "ನ್ಯಾಷನಲ್ ಕಲ್ಚರಲ್ ಫೆಸ್ಟಿವಲ್"ಗಳಲ್ಲಿ ಭಾಗವಹಿಸಿದ್ದಾರೆ. ಮೈಲಾರಲಿಂಗನ ಕುಣಿತಕ್ಕಾಗಿ ಪ್ರಶಸ್ತಿ ಪತ್ರ ಪಡೆದಿದ್ದಾರೆ. ಮಾದೇಗೌಡರು ಅಣ್ಣನ ಹಾದಿಯಲ್ಲಿ ನಡೆದು ಅಣ್ಣನಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ದೊಡ್ಡ ಗೌರವ, ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಮಾದೇಗೌಡರಿಗೆ ಕರ್ನಾಟಕ ಸರ್ಕಾರ ೨೦೦೭ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯಾಗಿ ಚಿನ್ನದ ಪದಕ ನೀಡಿ ಗೌರವ ನೀಡಿದೆ. ಇವರು ಜಾನಪದ ಮತ್ತು ಯಕ್ಷಗಾನ ಕಲೆಗಳಲ್ಲಿ ಸೇವೆ, ಸಾಧನೆ ಅಪಾರವಾಗಿದೆ.

೩. ಶ್ರೀಯುತ ಕೊಮ್ಮೇಗೌಡ

ಕೊಮ್ಮೇಗೌಡರು ಕೊಳ್ಳೇಗಾಲ ತಾಲ್ಲೂಕು ಸಿದ್ದಯ್ಯನಪುರದ ಗ್ರಾಮದ ಹಾಲುಮತದ ಕುರುಬ ಸಮುದಾಯಕ್ಕೆ ಸೇರಿದವರು. ಇವರು ಮಿಣಕಗೌಡ, ಮಾದಮ್ಮ ದಂಪತಿಗಳ ಒಬ್ಬನೇ ಮಗನಾಗಿದ್ದರು. ಇವರು ೧೬ನೇ ವಯಸ್ಸಿಗೆ ಗೊರವ ದೀಕ್ಷೆ ಕೊಡಿಸಲಾಯಿತು. ಕೊಮ್ಮೇಗೌಡರ ಮನೆಯಲ್ಲಿ ಇದು ವಂಶಪಾರಂಪರ್ಯ-ವಾಗಿ ನಡೆದುಬಂದಿದ್ದು ಬಹುತೇಕ ಮೈಸೂರು ಸೀಮೆಯ ಕುರುಬ ಸಮುದಾಯ ಮೈಲಾರಲಿಂಗ ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ, ಪಾರ್ವತಿ ಒಕ್ಕಲಿನವ-ರಾಗಿರುತ್ತಾರೆ. ಈ ಒಕ್ಕಲಿನ ಕುರುಬ ಸಮುದಾಯದ ಪ್ರತಿ ಕುಟುಂಬದಲ್ಲಿ ಒಬ್ಬರನ್ನು ಹೀಗೆ ಗೊರವಯ್ಯನ ಮಾಡುವ, ದೀಕ್ಷೆ ಕೊಡುವ ಪದ್ಧತಿ ಇದೆ. ಹೀಗೆ ದೀಕ್ಷೆ ಪಡೆದವರು ಗೌರವ ಸಂಪ್ರದಾಯಗಳು, ಆಚರಣೆಗಳು, ಗೊರವರ ಕುಣಿತ ಮುಂತಾದವುಗಳನ್ನು ನಿರ್ವಹಿಸುವ ಪ್ರಮುಖರಾಗಿದ್ದವರು. ಇವರು ಈ ಭಾಗದ 'ಗಣಾಚಾರಿ ಮತ್ತು 'ಪುರುಷಕಾರಿ' ಆಗಿದ್ದವರು. ಅಂದರೆ ಇಡೀ ಪಂಚ ಪರಂಪರೆಯ ಗುರು ಮತ್ತು ಮುಖ್ಯಸ್ಥರು ಎಂದರ್ಥ.

ಕೊಮ್ಮೇಗೌಡರು ಈ ಪಂಚ ಪರಂಪರೆಯ ಹಬ್ಬ ಆಚರಣೆ, ಗೌರವದೀಕ್ಷೆ ಕೊಡುವುದು ಗೌರವ ಕುಣಿತ ಮೊದಲಾದವುಗಳನ್ನು ನಡೆಸಿಕೊಡುತ್ತಿದ್ದರು. ಇವರು ತಮ್ಮ ೨೦-೨೨ನೇ ವಯಸ್ಸಿನಿಂದ ಈ ಆಚರಣೆಗಳನ್ನು ಗೊರವ ಕುಣಿತ ಮಾಡುವುದನ್ನು ಆರಂಭಿಸಿ ತಮ್ಮ ಎಂಬತ್ತೈದನೆ ವರ್ಷದವರೆಗೂ ಮುಂದುವರೆಸಿದರು.

ಕೊಮ್ಮೇಗೌಡರು ಮುಡುಕುತೊರೆ ಜಾತ್ರೆಯಲ್ಲಿ ಅದೇ ಜಾತ್ರೆಯ ಗಂಗಾಪರುದಿನ, ಪರಸ್ಥಳದ ದಿನ, ಶ್ರೀಶೈಲ ಜಾತ್ರೆಯಿಂದ ಬಂದಾಗ, ಯುಗಾದಿದಿನ, ಬಟ್ಟಲು ಪೂಜೆದಿನ, ಗೃಹಪ್ರವೇಶ, ಮದುವೆ ಕಾರ್ಯ, ಗೊರವರ ದೀಕ್ಷೆ ಕೊಡುವುದು ಮೊದಲಾದ ಸಂದರ್ಭಗಳಲ್ಲಿ ಈ ವೇಷ ಹಾಕುತ್ತಿದ್ದರು. ಕುಣಿತ ಪ್ರದರ್ಶಿಸುತ್ತಿದ್ದರು. 'ಭಿಕ್ಷಾಟನೆ' ಗೊರವರ ಮುಖ್ಯ ಆಚರಣೆಯಾಗಿದ್ದು ಕಡ್ಡಾಯವಾಗಿ ನೆರವೇರಿಸಬೇಕಾಗಿದ್ದು, ಕೊಮ್ಮೇಗೌಡರು ವೇಷಹಾಕಿ ಭಿಕ್ಷೆ ಮಾಡುತ್ತಿದ್ದರು. ಇವರ ಸೇವೆ ಮತ್ತು ಸಾಧನ ಕಲೆ ಪ್ರದರ್ಶನ. ಕುಣಿತಕ್ಕಿಂತ ಆಚರಣಾ ಲೋಕದ ಸೇವೆ ಮತ್ತು ಸಾಧನೆಯೇ ದೊಡ್ಡದು.

ಎಡದ ಕೈಯಲ್ಲಿ ಕೊಳಲು ಬಲದ ಕೈಯಲ್ಲಿ ಡಮರುಗ, ತಲೆಯ ಮೇಲೆ ಕರಡಿಗಂಟಿನ ಪೇಟ, ಕಣ್ಣಿನ ಸುತ್ತ ವಿಭೂತಿ, ಕುಂಕುಮ, ಕಪ್ಪು ಮಸಿ ಬಳಿದು ಎದೆಯ ಮೇಲೆ ಕುಂಕುಮದ ಚೀಲ, ಎಡಬಲ ಭುಜ, ತೋಳುಗಳ ಕೆಳಗೆ ಹಾದುಹೋಗುವ ಕವಡೆಗಳಿಂದ ಅಲಂಕಾರಗೊಂಡ ಅಡ್ಡಪಟ್ಟಿಗಳು, ಕೊರಳಿಗೆ ರುದ್ರಾಕ್ಷಿ ಮತ್ತು ಕವಡೆ ಸರಗಳು ಬಣ್ಣದ ಅಂಗಿ. ಬಿಳಿ ಪಂಚೆ ಧರಿಸಿ, ಮೈಲಾರ ಲಿಂಗವನ್ನು ಸ್ತುತಿಸುತ್ತ ಬರುವ ಗೊರವ ವೇಷದಲ್ಲಿ ಕೊಮ್ಮೇಗೌಡರು ಜನಪ್ರಿಯರು. ಗೊರವರು ಧರಿಸುವ ಈ ವೇಷ ಸಾಕ್ಷಾತ್ ಶಿವ ಕೆಲವು ಉದ್ದೇಶ ಮತ್ತು ಕಾರಣಗಳಿಗಾಗಿ ಹಾಕಿದ್ದ ವೇಷವೆಂಬುದು ಗೊರವರ ನಂಬಿಕೆಯಾಗಿತ್ತು. ಈ ರೀತಿಯಲ್ಲಿ ತಮ್ಮದೇ ಆದಂತಹ ಜನಪ್ರಿಯವಾದ ಗೊರವರ ಕುಣಿತದಲ್ಲಿ ಹೆಸರುವಾಸಿಯಾಗಿದ್ದಾರೆ.

ತಂಬೂರಿಪದ ಹಾಡುಗಾರಿಕೆ:

೧. ಶ್ರೀಯುತ ಹಾಲಗೂಡಯ್ಯ:

ಚಾಮರಾಜನಗರ ತಾಲ್ಲೂಕಿನ ಹೊಂಗನೂರು ಗ್ರಾಮದ ಆದಿಕರ್ನಾಟಕ ಸಮುದಾಯದವರು. ಹಾಲಗೂಡಯ್ಯರ ತಂದೆ ಚೆಲವಿ ಮನಿಯ, ತಾಯಿ ನಿಂಗಮ್ಮನವರು.

ಹಾಲಗೂಡಯ್ಯರಿಗೆ ಈಗ ೭೦ ವರ್ಷ ವಯಸ್ಸು. ಹಳೆ ತಲೆಮಾರಿನ ತಂಬೂರಿಪದ ಕಲಾವಿದರಲ್ಲಿ ಒಬ್ಬಿಬ್ಬರಲ್ಲಿ ಇವರೊಬ್ಬರು. ಇವರು ಮಾದೇಶ್ವರ ಕಂಸಾಳೆ ದೇವರ ಗುಡ್ಡರಾದರೂ ನೀಲಗಾರ ಪರಂಪರೆಯ ಸಂಕೇತವಾದ ತಂಬೂರಿಗೆ ಒಲಿದವರು. ಇವರಿಗೆ ಮಲೆಮಾದೇಶ್ವರ ಬೆಟ್ಟದಲ್ಲಿನ ಸಾಲೂರು ಮಠದ ಗುರುಗಳಾಗಿದ್ದ ಶ್ರೀ ಮಹದೇವಸ್ವಾಮಿ ಎಂಬವರಿಂದ ದೀಕ್ಷೆಯಾಗಿದೆ. ಆಗ ಹಾಲಗೂಡಯ್ಯರಿಗೆ ಹದಿನೆಂಟೋ ಇಪ್ಪತ್ತೋ ವರ್ಷ ವಯಸ್ಸು. ಆಗಾಗಿ ಬೆಟ್ಟದ ಜಾತ್ರೆಗೆ ಮಠಕ್ಕೆ

ಹೋಗುವುದು ಅಭ್ಯಾಸವಾಗುತ್ತದೆ. ಇದು ಹಾಲಗೂಡಯ್ಯರನ್ನು ಕಥೆ, ಕಾವ್ಯ ಕಲೆಯಲು ಪ್ರೇರೇಪಿಸುತ್ತದೆ. ಆಗಿನ ಸಾಲೂರು ಮಠದ ಗುರುಗಳು ಮಠಕ್ಕೆ ಹೋದ ಭಕ್ತರಿಗೆ ಮಾದೇಶ್ವರನ ಕಥಾ ಪ್ರಸಂಗಗಳನ್ನು ಪ್ರವಚನ ರೂಪದಲ್ಲಿ ಹೇಳುವ ಪದ್ಧತಿ ಮಾಡಿಕೊಂಡಿದ್ದರು. ಹಾಲಗೂಡಯ್ಯ ಹೀಗೆ ಸಾಲೂರು ಮಠದ ಗುರುಗಳು ಹೇಳುವ ಕಥಾ ಪ್ರಸಂಗವನ್ನು ಮೊದಲು ಕಲಿತರು. ಕ್ರಮೇಣ ಹೊಂಗನೂರಲ್ಲೇ ಇದ್ದ ಗಾಯಕ ಕಲಾವಿದರುಗಳಾದ ದಾಸ, ನಂಜಯ್ಯರಿಂದ ಇವರು ಕಥೆ ಕಲಿತರು. ಮಿಷಿನ್ ಬಸವಯ್ಯ ಎನ್ನುವವರು ಇವರಿಗೆ ಕಥೆ ಕಲಿಸಿದ ಇನ್ನೊಬ್ಬ ಕಲಾವಿದರು. ಈ ರೀತಿಯಲ್ಲಿ ತಾವು ಕಲಿತ ಮಾರ್ಗವನ್ನು ಹೇಳುತ್ತ ಹಾಗೇ ಪದ ಹಾಡುತ್ತಿದ್ದ ಬಗೆಯನ್ನು ತಿಳಿಸಿದ್ದಾರೆ. ಹಾಗಾಗಿ ಹಾಲಗೂಡಯ್ಯರು ಸಾಲೂರು ಮಠದ ಮಹದೇವಸ್ವಾಮಿಗಳು, ಹೊಂಗನೂರು ದಾಸನಂಜಯ್ಯ ಮಿಷಿನ್ ಬಸವಯ್ಯನವರು ನನಗೆ ವಿದ್ಯೆ ಕಲಿಸಿದ ಗುರುಗಳು ಎಂದು ನೆನೆಯುತ್ತಾರೆ.

ಹಾಲಗೂಡಯ್ಯ ಕಥೆ ಕಾವ್ಯ, ಕಲಿತು ಸ್ವತಂತ್ರಗಾಯಕರಾಗಿ ಹಾಡತೊಡಗುತ್ತಾರೆ. ಆವಾಗ ಇವರ ಕತೆಗೆ ಭಿಕ್ಷಕ್ಕೆ ಹೋಗಲು, ಅವರಿವರಿಂದ ತಂಬೂರಿ ಪಡೆಯ-ಬೇಕಾಗಿರುತ್ತದೆ. ಈ ಬಗ್ಗೆ ಇವರಿಗೆ ಅಷ್ಟು ಸಮಾಧಾನ ಇರಲಿಲ್ಲ. ಹೇಗಾದರೂ ಮಾಡಿ ಸ್ವಂತಕ್ಕೆ ಹೊಸದೊಂದು ಒಳ್ಳೆಯ ತಂಬೂರಿ ತಂದುಕೊಳ್ಳಬೇಕೆಂದು ಮನಸ್ಸಿನಲ್ಲೇ ಕೊರೆಯುತ್ತಿರುತ್ತದೆ. ಹಾಲಗೂಡಯ್ಯ ವೃತ್ತಿ ಗಾಯಕರು, ತಂಬೂರಿಪದ ಹಾಡುವುದನ್ನು ಜೀವನ ನಿರ್ವಹಣೆಗೆ ವೃತ್ತಿ ಮಾಡಿಕೊಂಡರು. ಅದು ಬದುಕು ಕಟ್ಟಿಕೊಳ್ಳಲು ಆಧಾರ ಆಗಲೇ ಇಲ್ಲ. ಆದರೂ ಹಾಡುವುದ ಬಿಡಲಿಲ್ಲ. ಮನೆ ನಿರ್ವಹಣೆ, ಮಕ್ಕಳ ಮದುವೆಗೆ ಇದ್ದ ಇಪ್ಪತ್ತೆರಡು ಕುಂಟೆ ಗದ್ದೆಯನ್ನು ಅಡಮಾನ ಮಾಡಿದ್ದನ್ನು ಮನವರಿಕೆ ಮಾಡಿಕೊಳ್ಳುತ್ತಾರೆ.

ಸಾಮಾನ್ಯವಾಗಿ ಮಂಗಳವಾರ, ಭಾನುವಾರಗಳನ್ನು ಬಿಟ್ಟು ವಾರದ ಉಳಿದ ದಿನಗಳೆಲ್ಲ ಇವರು ಉಪದಾನಕ್ಕೆ ಹೋಗುತ್ತಾರೆ. ಒಂದು ದಿನ ಭಿಕ್ಷೆಗೆ ಹೋದರೆ ದವಸಧಾನ್ಯ, ಕಾಸು ಎಲ್ಲಾ ಸೇರಿ ೪೦ ರೂಪಾಯಿ ಆದಾಯ ಸಂಪಾದಿಸುತ್ತಿರಂತೆ. ಈ ರೀತಿಯಲ್ಲಿ ಜೀವನವನ್ನು ನಡೆಸುತ್ತಿದ್ದರು.

೨. ಕೆಬ್ಬೇಪುರದ ರಾಚಯ್ಯನವರು:

ಮಂಟೇಸ್ವಾಮಿ ಕಾವ್ಯ ಮತ್ತು ಪರಂಪರೆಗಳನ್ನು ಕಟ್ಟಿ ಬೆಳೆಸಿದ ಬಹುಮುಖ್ಯವಾದ ತಂಬೂರಿ ಪದದ ನೀಲಗಾರರುಗಳಲ್ಲಿ ಕೆಬ್ಬೇಪುರ ರಾಚಯ್ಯರು ಒಬ್ಬ ಪ್ರಮುಖರು. ರಾಚಯ್ಯನವರ ತಂದೆ ಲಿಂಗಯ್ಯ, ತಾಯಿ ಸಿದ್ದಮ್ಮ. ಇವರು

ದಲಿತರಲ್ಲಿನ ಎಡಗೈ ಪಂಗಡದ ಆದಿಜಾಂಬವ ಜನಾಂಗದವರು. ಇವರಿಗೆ ಹನ್ನೆರಡನೇ ವಯಸ್ಸಿಗೆ ನೀಲಗಾರ ದೀಕ್ಷೆಯಾಗಿದೆ. ನೀಲಗಾರರು ತಾವು ಮಂಟೇಸ್ವಾಮಿ. ಸಿದ್ದಪ್ಪಾಜಿ ಗುಡ್ಡರು ಎಂದು ಹೇಳಿಕೊಳ್ಳುತ್ತಾರೆ. ರಾಚಯ್ಯರು ಹಾಗೆ. ಬೊಪ್ಪೇಗೌಡನಪುರದ ಮಠಮನೆ ಮಂಟೇಸ್ವಾಮಿ ಗದ್ದಿಗೆಯಲ್ಲೇ ದೀಕ್ಷೆ ಆಗಿತ್ತು. ಇವರಿಗೆ ಅನೇಕರು ಅಲ್ಲೇ ಹೋಗಿ ಗುಡ್ಡನ ಬಿಡಿಸಿದರೆ ಅಂತವರಿಗೆ ಯೋಗ ಎಂದು ತಿಳಿಯುತ್ತಾರೆ. ಹಾಗಾಗಿ ರಾಚಯ್ಯರಿಗೆ ಅಲ್ಲೇ ಮಣಿಧಾರಣೆ ಮಾಡಿಸಲಾಯಿತು. ಅದರಂತೆ ಅವರು ಕಲಾವಿದನಾಗಿ ಯೋಗಪುರುಷರೆ ಆದರು ಎಂಬುದು ಮಗ ಸಿದ್ದರಾಜು ಅಭಿಪ್ರಾಯ. ಸಿಗುವ ಮಾಹಿತಿ ನೋಡಿದರೆ ತಂಬೂರಿಪದ ಗಾಯನ ರಾಚಯ್ಯರಿಗೆ ತಲಾತಲಾಂತರದಿಂದ ಬಂದಿರುವ ಕಲೆಯಾಗಿದೆ. ಇವರ ಕುಟುಂಬ ಜಾನಪದ ಮಹಾಕಾವ್ಯಗಳನ್ನು ಹಾಗೂ ಜಾನಪದ ಸಂಸ್ಕೃತಿ ಪರಂಪರೆಗಳನ್ನು ತಲೆಮಾರಿಂದ ತಲೆಮಾರಿಗೆ ಉಳಿಸುತ್ತಾ ಬೆಳೆಸುತ್ತಾ ಬಂದಿದ್ದಾರೆ. ರಾಚಯ್ಯನವರ ತಾತರಿಂದ ಹಿಡಿದು ಅವರ ಮಗನವರೆಗೆ ನಾಲ್ಕು ತಲೆಮಾರು ಇವರು ತಂಬೂರಿ ಪದ ಹಾಡುತ್ತಾ ಬಂದಿದ್ದಾರೆ. ರಾಚಯ್ಯರ ಮಗ ಸಿದ್ದರಾಜು ಹೇಳುವಂತೆ ಇವರ ಮುತ್ತಾತ. ಅಂದರೆ ರಾಚಯ್ಯರ ತಾತನೂ ತಂಬೂರಿ ಪದ ಹಾಡುತ್ತಿದ್ದು, ಅವರ ನಂತರ ಅದು ಅವರ ಮಗ ರಾಚಯ್ಯರ ತಂದೆ ಲಿಂಗಯ್ಯರಿಗೆ ಬಂದಿದೆ. ಲಿಂಗಯ್ಯ ಕೂಡ ತಂಬೂರಿ ಹಾಡುಗಾರ. ಅವರಿಂದ ರಾಚಯ್ಯರಿಗೆ ಬಂದಿದೆ. ಈಗ ರಾಚಯ್ಯರಿಂದ ಅವರ ಮಗ ಸಿದ್ದರಾಜುಗೆ ಬಂದಿದೆ. ಕೆಬ್ಬೇಪುರ ಸಿದ್ದರಾಜು ಈಗ ತಂದೆ. ರಾಚಯ್ಯರಂತೆ ಜನಪದ ಕಾವ್ಯ ಹಾಡುಗಾರಿಕೆಯಲ್ಲಿ ಜನಪ್ರಿಯರಾಗಿದ್ದಾರೆ.

ರಾಚಯ್ಯನವರು ಹೀಗೆ ತಂದೆ ಲಿಂಗಯ್ಯರಿಂದ ಹಾಗೂ ಕೆಬ್ಬೇಪುರದ ಅವರ ಸಮುದಾಯದವರೇ ಆದ ಚನ್ನಬಸವಯ್ಯರಿಂದ ಕತೆ ಕಲಿತಿದ್ದಾರೆ. ಅಂತಿಮವಾಗಿ ಮತ್ತು ಸುದೀರ್ಘ ಕಾಲ ಮುಖ್ಯವಾಗಿ ಇವರು ತಂಬೂರಿ ಪದ ಅಭ್ಯಾಸ ಮಾಡಿದ್ದು ಕಾರಾಪುರ ಪುಟ್ಟಮಾದಯ್ಯರ ಬಳಿ ಎನ್ನುತ್ತಾರೆ. ಸಿದ್ದರಾಜು, "ರಾಚಯ್ಯರಿಗೆ ಈ ಕಲೆ ದಕ್ಕಿಸಿಕೊಳ್ಳಲು ಎಷ್ಟು ಕಳಕಳಿ ಇತ್ತು, ದಾಹ ಇತ್ತು ಎಂದರೆ ಆಗ ಅವರ ತಂದೆ ಲಿಂಗಯ್ಯ ತೀರಿಕೊಂಡಿದ್ದರು. ಸಂಸಾರದ ಜವಾಬ್ದಾರಿ ರಾಚಯ್ಯರ ಮೇಲೆ ಬಿದ್ದಿತ್ತು. ಆಗ ಅವರ ಹೆಂಡತಿ ಬಾಣಂತಿಯಂತೆ. ಆಗ ಮಗನಾದ ಸಿದ್ದರಾಜು ಹುಟ್ಟಿದರಂತೆ. ಆ ಸಮಯ ಬಾಣಂತಿ ಹೆಂಡತಿ, ಹಸುಗೂಸು ಬಿಟ್ಟು ರಾಚಯ್ಯರು ಮೂಡಲಸೀಮೆ ಕಡೆಗೆ ಭತ್ತದ ಕುಯಿಲು ಹೊರಹೋಗುತ್ತಿದ್ದರಂತೆ. ಆ ಕಡೆ ಸಾಯಂಕಾಲದವರೆಗೆ ಕುಯಿಲು ಕುಯದು, ಸಂಜೆ ಮೇಲೆ ಪುಟ್ಟಮಾದಯ್ಯರ ಬಳಿ ಕಥೆ ಕಲಿತರಂತೆ. ಹಾಗೇ ಮಾಡಿ ಒಳ್ಳೆ ಕಥೆಗಾರರಾದರು ಎಂದು ಮಗ ನೆನಪಿಸಿಕೊಂಡರು.

ರಾಚಯ್ಯರು ಕಥೆ ಕಲಿತು, ವೃತ್ತಿಗಾಯಕರಾಗಿ ಭಿಕ್ಷೆ ಮಾಡುವ ಮೊದಲು ತುಂಬಾ ಕಷ್ಟ ಇತ್ತು. ಆಗೆಲ್ಲಾ ಒಂದು ದಿನ ಕೂಲಿ ಮಾಡಿದರೆ ಒಂದು ರೂಪಾಯಿ ಸಿಕ್ಕದು. ರಾಚಯ್ಯರು ಕೆಲಬಾರಿ ಸೌದೆ ಮಾರುವರು. ಒಂದು, ಒಂದೂವರೆ ರೂಪಾಯಿ ಸಿಗದು. ಕೆಲಬಾರಿ ಕಟ್ಟಡ ಕೆಲಸಕ್ಕೆ ದಿಂಡು ಹೊರಲು ಹೋಗುವರು. ಎಷ್ಟೋ ಸಲ ಊಟಕ್ಕೆ ತೊಂದರೆ ಆಗದು ಅಂತ ದಿನಗಳಲ್ಲಿ ಹೊಲಮಾಳದ ಸೊಪ್ಪು ಕೂದು ತಂದು ಬೇಯಿಸಿತಿಂದು, ಟೀ ಕುಡಿದು ಮಲಗುವರು, ಒಕ್ಕಲಿಗೇರಿಯವರು ದನಗಳಿಗೆ ಉಳ್ಳಿಸೆತ್ತೆ ಹಾಕುತ್ತಿದ್ದರು.

ರಾಚಯ್ಯರು ಚಾಮರಾಜನಗರ ಜಿಲ್ಲೆಯ ಮೈಸೂರುಜಿಲ್ಲೆ, ಮಂಡ್ಯಜಿಲ್ಲೆ, ಮಾದೇಶ್ವರಬೆಟ್ಟ, ಕಪ್ಪಡಿ, ಚಿಕ್ಕಲ್ಲೂರು ಕುರುಬನ ಕಟ್ಟೆ, ಕೊಳ್ಳೇಗಾಲ ತಮಿಳುನಾಡು, ಊಟಿ, ನಡುಬೆಟ್ಟದವರೆಗೂ, ಕಾರ್ಯಕ್ರಮಗಳಿಗೆ ರಾಜ್ಯದ ಬೇರೆ ಬೇರೆ ಸ್ಥಳಗಳಿಗೂ ಹೋಗಿ ಹಾಡಿದ್ದಾರೆ. ಭಿಕ್ಷುಮಾಡಿದ್ದಾರೆ. ಇವರು ಮಂಟೇಸ್ವಾಮಿ ಕಾವ್ಯ ಹಾಡು–ವುದರಲ್ಲಿ ಪರಿಣಿತರು. ಜೊತೆಗೆ ಬಸವೇಶ್ವರ, ಬಿಳಿಗಿರಿರಂಗ, ನಂಜುಂಡೇಶ್ವರ, ಮಾದೇಶ್ವರ ಮೈರಾಳರಾಮ, ನಿಂಗರಾಜಮ್ಮ, ಬಾಲನಾಗಮ್ಮ ಮೊದಲಾದ ಕಥೆಗಳನ್ನು ಹಾಡುತ್ತಿದ್ದರು. ಗುಂಡ್ಲುಪೇಟೆ ಬಸ್‌ನಿಲ್ದಾಣದಲ್ಲಿ ಇವರು ಕಡ್ಡಾಯವಾಗಿ ಹಾಡುತ್ತಿದ್ದರು. ಆ ಕಾಲಕ್ಕೆ ಇಡೀ ದಿನ ಹಾಡಿದರೆ ನಲವತ್ತು, ಐವತ್ತು ರೂಪಾಯಿ ಸಿಗುತ್ತಿತ್ತು. ಒಂದು ರಾತ್ರಿ ಕತೆಗೆ ಆವಾಗ ರಾಚಯ್ಯನವರು ಐವತ್ತಿನಿಂದ ನೂರು, ಐನೂರು, ಸಾವಿರ, ಸಾವಿರದ ಐನೂರರವರೆಗೆ ಸಂಭಾವನೆ ಪಡೆದಿದ್ದಾರೆ. ಮಗ ಸಿದ್ದರಾಜು ಹೇಳುವಂತೆ ಹೆಚ್.ಎಲ್.ನಾಗೇಗೌಡರು ಒಮ್ಮೆ ಮೂರು ರಾತ್ರಿ ಕತೆ ಮಾಡಿಸಿದರು. ಆವಾಗ ಐದು ಸಾವಿರ ರೂಪಾಯಿಕೊಟ್ಟಿದ್ದರು. ರಾಚಯ್ಯನವರು ಒಂದೇ ಸಲ ಅಷ್ಟೊಂದು ದೊಡ್ಡ ಮೊತ್ತದ ಸಂಭಾವನೆ ಹಣ ನೋಡಿದ್ದು ಅದೇ ಮೊದಲು ಅದೇ ಕೊನೆ ಅಂತ. ಹೀಗೆ ಅವರು ಚಾಮರಾಜನಗರ ಜಿಲ್ಲೆಯ ಜನಪದ ಕಲಾವಿದರಲ್ಲಿ ತಮ್ಮದೇ ಸ್ಥಾನವನ್ನು ಪಡೆದಿದ್ದಾರೆ.

೩. ಶ್ರೀ ಕಾಳವಾರ ಸಿದ್ದಶೆಟ್ಟಿ:

ಕಾಳವಾರ ಸಿದ್ದಶೆಟ್ಟಿಯವರು ಮೈಸೂರು ಸೀಮೆಯ ಹಳೆತಲೆಮಾರಿಗೆ ಸೇರಿದ ತಂಬೂರಿ ಪದ ಕಲಾವಿದರಲ್ಲಿ ಇವರು ಒಬ್ಬರು. ತಲೆಗೆ ರುಮಾಲು, ಹಣೆಗೆ ವಿಭೂತಿಮಟ್ಟಿಕಪ್ಪು, ಕೋಟುಕಚ್ಚೇ, ಪಂಚೆ ಧರಿಸಿ ಹೆಗಲಿಗೆ ತಂಬೂರಿ, ಕೈಗೆ ಗಗ್ಗರ ಹಾಕಿಕೊಂಡು ಊರೂರು ತಿರುಗುತ್ತಾ ಧರೆಗೆ ದೊಡ್ಡವರ ವಚನ ಹಾಡುತ್ತಲೇ ಬದುಕಿ

ಬಾಳಿದ ಸಿದ್ದಶೆಟ್ಟರು. ಚಿಕ್ಕಂದಿನಿಂದಲೇ ಪದ ಹಾಡುವುದನ್ನು ಕಲಿತ ಇವರು ಕಥೆ ಮಾಡುವುದನ್ನೇ ಜೀವನಕ್ಕೆ ಆಧಾರ ಮಾಡಿಕೊಂಡ ವೃತ್ತಿಗಾಯಕರು.

ಇವರು ಯಳಂದೂರು ತಾಲ್ಲೂಕಿನ ಕೃಷ್ಣಾಪುರ ಗ್ರಾಮದಲ್ಲಿ ಚಿಕ್ಕಸಿದ್ದಶೆಟ್ಟರು, ಲಕ್ಷ್ಮಮ್ಮ ದಂಪತಿಗಳಿಗೆ ಮಗನಾಗಿ ಜನಿಸಿದರು. ಇವರು ಉಪ್ಪಾರ ಸಮುದಾಯಕ್ಕೆ ಸೇರಿದವರು. ತಾಲ್ಲೂಕಿನ ಹಿರಿಯ ಕಲಾವಿದರು. ಇವರು ಓಲೆಯನ್ನೇ ಹೋಲುವ ಕಿವಿಯ ಎರಡು ರಂಧ್ರಗಳನ್ನು ಬಿಂಬಿಸುವ "ತಳವಾರ" ಎಂಬ ಕವಿಯ ಆಭರಣ ಧರಿಸುತ್ತಿದ್ದುದರಿಂದ ಇವರಿಗೆ ಅದೇ "ಕಳವಾರ" ಎಂಬುದು ಅಡ್ಡ ಹೆಸರಾಗಿ ಬಂದಿದೆ.

ಕಳವಾರ ಸಿದ್ದಶೆಟ್ಟರವರು ಗುರುಗಳು ಚಾಮರಾಜನಗರ ತಾಲ್ಲೂಕಿನ ಕಾಳಿನುಂಡಿಯ ದುಂಡಶೆಟ್ಟರು ಇವರಿಗೆ ಕಥೆ, ಕಾವ್ಯ ಹಾಡುವುದನ್ನು ಗಂಭೀರವಾಗಿ ಕಲಿಸಿದರು. ಜೀವನ ನಿರ್ವಹಣೆಗೆ ಆಸ್ತಿಪಾಸ್ತಿ ಇರಲಿಲ್ಲ. ಮದುವೆಯಾದ ನಂತರ ತಂಬೂರಿ ಕಲೆಯನ್ನೇ ಜೀವನಾಧಾರ ಮಾಡಿಕೊಂಡರು. ಇವರು ಈ ವೃತ್ತಿ ಮಾಡುತ್ತಾ ಬೇರೆ ಕೃಷಿ ಕೂಲಿ ಕೆಲಸಗಳಿಗೆ ಹೋದವರಲ್ಲ. ಈ ಕಥೆ ಹಾಡುವುದರ ಜೊತೆಗೆ ಬೀಸು ಕಂಸಾಳೆ, ಕಂಸಾಳೆ ನೃತ್ಯವನ್ನು ಮಾಡುತ್ತಿದ್ದರು.

ಸಿದ್ದಶೆಟ್ಟರವರು ತಮ್ಮ ತಂಬೂರಿ ಪದದಲ್ಲಿ ಹೆಚ್ಚಾಗಿ ಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಬಿಳಿಗಿರಿರಂಗನ ಸ್ವಾಮಿ ಕಥೆ, ನಂಜುಂಡೇಶ್ವರ ಕಥೆ, ಮಲ್ಲಪ್ಪನ ಕಥೆ, ನಿಂಗರಾಜಮ್ಮನ ಕಥೆ, ಮೈಲಾಳರಾಮನ ಕಥೆ, ಅರ್ಜುನ ಜೋಗಿ ಹಾಡು ಮೊದಲಾದ ಕಥೆಗಳನ್ನು ಹಾಡುತ್ತಿದ್ದರು. ಇವರು ಜನಪದ ಕಥೆಗಳನ್ನು ಬಹುಭಾಷೆಯಲ್ಲಿ ಹಾಡುತ್ತಿದ್ದರು ಎಂಬುದು ದಾಖಲಾರ್ಹ ಸಂಗತಿಯಾಗಿದೆ.

ಸಿದ್ದಶೆಟ್ಟರು ಎಲೆಮರೆಕಾಯಿಯಂತೆ ತಮ್ಮ ಕಲಾಸೇವೆಯನ್ನು ಮಾಡಿದವರು ನಮಗೆ ತಿಳಿದುಬರುತ್ತದೆ. ಇವರ ಶಿಷ್ಯಂದಿರುಗಳು ಉತ್ತೂರು ಒಡೆಯರ ಪಾಳ್ಯದ ಪುಟ್ಟಸ್ವಾಮಿಶೆಟ್ಟಿ, ಚಾಮರಾಜನಗರದ ದೊಡ್ಡದೊಳೆ. ಸರಗೂರು ಮೋಳೆಗಳಲ್ಲಿ ಮತ್ತು ಕೊಳ್ಳೇಗಾಲದ ಕಡೆ ಇದ್ದಾರೆ. ಈ ಸಿದ್ದಶೆಟ್ಟಿಯವರು ತಮ್ಮ ಕಲಾವಂತಿಗೆಯನ್ನು ಚಾಮರಾಜನಗರ ಜಿಲ್ಲೆಗೆ ಅಲ್ಲದೆ ಇಡೀ ಕರ್ನಾಟಕಕ್ಕೆ ಹೆಸರುವಾಸಿಯಾಗಿದ್ದಾರೆ.

೪. ಮೋಳೆರಾಚಯ್ಯ:

ಮೋಳೆರಾಚಯ್ಯನವರು ಕೊಳ್ಳೇಗಾಲದ ಸಮೀಪದ ಕಾವೇರಿ ನದಿ ಬಯಲಿನ ಹತ್ತಿರವಿರುವ ಕೊಳ್ಳೇಗಾಲಮೋಳೆ ಎಂದು ಕರೆಯುವಂತಹ ಉಪ್ಪಾರ ಬೀದಿಯಲ್ಲಿ ಜನಿಸಿದವರು. ತಂದೆ ಮಾರಶೆಟ್ಟಿ ತಾಯಿ ವೆಂಕಟಮ್ಮ ದಂಪತಿಗಳ ಮೂರನೇ ಮಗನಾಗಿ ಜನಿಸಿದರು. ಇವರು ೧೮ನೆಯ ವಯಸ್ಸಿಗೆ ನೀಲಗಾರರ ದೀಕ್ಷೆಯಾಯಿತು.

ಸಿದ್ದಪ್ಪಾಜಿಯವರ ಗುಡಿಯ ಪೂಜಿಸುವಂತಹ ಕಾರ್ಯದೊಂದಿಗೆ ಜನಪದ ಕಾವ್ಯಲೋಕಕ್ಕೆ ಪ್ರವೇಶವನ್ನು ಪಡೆದಿದ್ದಾರೆ. ಇವರು ಮಂಟೇಸ್ವಾಮಿ ಕಾವ್ಯ ಕಲಿತು ಒಬ್ಬ ಸಮರ್ಥ ಜನಪದ ವೃತ್ತಿಗಾಯಕರಾಗಿದ್ದು ಒಂದು ಆಕಸ್ಮಿಕರಾದರೂ ತಮ್ಮ ಗಟ್ಟಿತನದಿಂದ ನೆಲೆನಿಂತರವರು.

ಮೋಳೆ ರಾಚಯ್ಯನವರು ತಂಬೂರಿಯ ತಂತಿಗಳ ಮೀಟುತ್ತಾ ಕಂಚಿನ ಕಂಠದಲ್ಲಿ ಧ್ವನಿ ಎತ್ತಿ ಧರೆಗೆ ದೊಡ್ಡವರ ವಚನವನ್ನು ಹಾಡಲು ಶುರುವಾದರೆ ಮೋಳೆ ತಂಬೂರಿ ರಾಚಯ್ಯರವರು ಎಂಬುದು ಖಾತರಿಯಾಗಿಬಿಡುವಂತೆ ಹಾಡುತ್ತಿದ್ದರು. ಇವರು ಸಿದ್ದಕಳೆಯ ಹುಚ್ಚು ಸಿಗೆಯ ಉರಿಗಣ್ಣು, ನೆರೆತಮೀಸೆ, ಕೊರಳಲ್ಲಿ ಮುಲ್ಲೆ ಹೂ ಸುತ್ತಿದ ಗುರುಮಣಿ, ಎಡಗೈಯಲ್ಲಿ ಗಗ್ಗರ. ಈ ರೀತಿಯಲ್ಲಿ ತಂಬೂರಿ ತಂತಿ ಮೀಟಿದೊಡನೆ ಅವರು ಹಾಡುವ ಸಾಲು ಕೇಳುಗರಿಗೆ ಸುಮಧುರವಾಗಿ ಆಲಿಸು-ವಂತಾಗುತ್ತಿತ್ತು. ಇವರು ಹಾಡುವ ಕಲೆ ಪ್ರಧಾನವಾಗಿ ಮಂಟೇಸ್ವಾಮಿ ಕಾವ್ಯ. ಅದರಲ್ಲೂ ಸಿದ್ದಪ್ಪಾಜಿ ಕಥೆ, ಮೈಲಾರರಾಮನ ಕಥೆ, ನಿಂಗರಾಜಮ್ಮನ ಕಥೆ, ನಂಜುಂಡೇಶ್ವರನ ಕಥೆಗಳನ್ನು ಹಾಡುತ್ತಾರೆ. ಚಾಮರಾಜನಗರಜಿಲ್ಲೆ ಒಳಗೆ "ಮಂಟೇಸ್ವಾಮಿ ಕಾವ್ಯ" ಹಾಡುವ ಗಾಯಕರಲ್ಲಿ ಇವರು ಒಬ್ಬ ಪ್ರಮುಖ ಗಾಯಕ. ಇಂದಿಗೂ ನಮ್ಮ ಜನಪದ ವಿದ್ವಾಂಸವಲಯದಲ್ಲಿ ಇವರು ಹಾಡುವ ಮಂಟೇಸ್ವಾಮಿ ಕಾವ್ಯ ಪಠ್ಯ ವಿಶೇಷ ಸ್ಥಾನ ಪಡೆದಿದೆ. ಬಹಳ ಮುಖ್ಯವಾಗಿ ಇಡೀ ಮಂಟೇಸ್ವಾಮಿ ಪರಂಪರೆಯ ಮುಖ್ಯ ಸ್ಥಳ ಮತ್ತು ಕೇಂದ್ರಗಳ ಹಿನ್ನೆಲೆಯಲ್ಲಿ ಕಾವ್ಯ ಕಟ್ಟುವ ಇವರು ಹಲವು ಸೂಕ್ಷ್ಮ ಸಂಗತಿಗಳನ್ನು ವಿಶೇಷವಾಗಿ ವಿಶಿಷ್ಟವಾಗಿ ವ್ಯಾಖ್ಯಾನಿಸುತ್ತಾರೆ. ಇದು ನಮ್ಮ ನಡುವೆ ಲಿಖಿತ ರೂಪದಲ್ಲಿರುವ "ಮಂಟೇಸ್ವಾಮಿ" ಪಠ್ಯಗಳಲ್ಲಿ ಮಾಳೆರಾಜಶೆಟ್ಟಿಯವರದೂ ಒಂದು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ. ವೆಂಕಟೇಶ ಇಂದ್ವಾಡಿ ಇದೇ ರಾಚಯ್ಯ ಹಾಡಿರುವ ಮಂಟೇಸ್ವಾಮಿ ಕಾವ್ಯವನ್ನು "ಧರೆಗೆ ದೊಡ್ಡವರು ಕಥೆ" ಎಂಬ ಹೆಸರಿನಲ್ಲಿ ಸಂಪಾದಿಸಿ ಪ್ರಕಟಿಸಿದ್ದಾರೆ. ಇದು ಜಾನಪದ ಕ್ಷೇತ್ರಕ್ಕೆ ರಾಚಯ್ಯನವರ ಅಮೌಲ್ಯವಾದ ಬಹುದೊಡ್ಡ ಕೊಡುಗೆ ಮತ್ತು ಮುಖ್ಯ ಸಾಧನೆಯಾಗಿದ್ದು ಹಲವು ಪ್ರಶಸ್ತಿ ಮತ್ತು ಸನ್ಮಾನಗಳಿಗೆ ಭಾಜನರಾಗಿದ್ದಾರೆ.

ಕಂಸಾಳೆ:

ಮಲೆಮಾದೇಶ್ವರ ಕಾವ್ಯ ಮತ್ತು ಪರಂಪರೆಯ ಪ್ರತೀಕ. ಮಾದೇಶ್ವರನ ಒಕ್ಕಲಾಗಿ ಮಣಿಧಾರಣೆ ಮಾಡಿಸಿಕೊಂಡು ದೀಕ್ಷೆ ಪಡೆದವರು ಕಂಸಾಳೆ ನುಡಿಸುತ್ತಾರೆ. ಇವರನ್ನು ಮಾದೇಶ್ವರ ಗುಡ್ಡರು ಎನ್ನುತ್ತಾರೆ.

೧. ಶ್ರೀ ಕೆ.ನಂಜಯ್ಯನವರು

ನಂಜಯ್ಯನವರು ಕೊಳ್ಳೇಗಾಲ ತಾಲ್ಲೂಕಿನ ದೊಡ್ಡ ಇಂದುವಾಡಿ ಗ್ರಾಮದ ಆದಿಜಾಂಬದ ಸಮುದಾಯದವರು. ತಂದೆ ಕಾಳಮ್ಮ, ತಾಯಿ ಮುತ್ತಮ್ಮ. ಇವರು ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಗುಡ್ಡ ಬಿಡಿಸಿ ಮರುಮಣಿ ಕಟ್ಟಿಸಲಾಯಿತು. ಇವರು ಮಲೆಮಹದೇಶ್ವರನ ಒಕ್ಕಲಿನವರು. ಇವರಿಗೆ ಮಾದೇಶ್ವರನ ಬೆಟ್ಟದಲ್ಲಿ ದೇವರ ಸನ್ನಿಧಿಯಲ್ಲಿ ದೀಕ್ಷೆ ಕೊಡಿಸಲಾಯಿತು. ನಂತರದಲ್ಲಿ ತಮ್ಮ ಸತ್ವಕರ್ಮವನ್ನು ನಡೆಸುತ್ತ ೨೫ನೇ ವಯಸ್ಸಿನಲ್ಲಿ ಮದುವೆಯಾದರು.

ಜೀವನ ನಿರ್ವಹಣೆಗೆ ಯಾವುದೇ ಆಸ್ತಿಪಾಸ್ತಿ ಜಮೀನುಯಿಲ್ಲದ ಇವರು ಗುರುದೇವರು ಕೊಟ್ಟಿದ್ದ ಕಂಸಾಳೆ ಜೋಳಿಗೆಗಳು ಹೊಸಮಾರ್ಗವನ್ನು ತೋರಿದವು. ಭಿಕ್ಷಾಟನೆಯ ಮೂಲಕ ಕಂಸಾಳೆ ಕುಟ್ಟುತ್ತ ಅದರ ಜೊತೆಯಲ್ಲಿ ನಾಡುನುಡಿ ಪದ ಹೇಳಿದರೆ ಚೆನ್ನಾಗಿರುತ್ತದೆಂದು ಜನಪದ ರಾತ್ರಿಗಳನ್ನು ಕಲಿತು ಗಾಯಕರಾದರು. ನಂಜಯ್ಯನವರ ಗುರುಗಳಾಗಿ ಉತ್ತೂರು ಬಸವಶೆಟ್ಟಿ, ತಾರಾಪುರದ ಪುಟ್ಟಮಾದಯ್ಯ, ಒರಗಿ ಮಾದಯ್ಯನವರು ಆರಂಭದಲ್ಲಿ ತಂಡದ ಜೊತೆ ಸೊಲ್ಲು ಹೇಳುವ ಸಹ ಗಾಯಕರಾದ ನಂತರದಲ್ಲಿ ಜನಪದ ಲೋಕವನ್ನು ಪ್ರವೇಶಮಾಡಿದರು. ಹಬ್ಬ, ಜಾತ್ರೆ, ಉತ್ಸವ, ಗೃಹಪ್ರವೇಶ ಸಾವು, ತಿಥಿ ಈ ಸಂದರ್ಭದಲ್ಲಿ ಅಲ್ಪಸ್ವಲ್ಪ ಹಣಮಾಡಿ ನಂತರದಲ್ಲಿ ಗುಂಪಿನ ಜೊತೆಗೂಡಿ ರಾತ್ರಿಯಲ್ಲಿ ಕತೆಮಾಡಿದರೆ ಸುಮಾರು ೩೦೦ರಿಂದ ೪೦೦ ರೂಪಾಯಿಗಳವರೆಗೆ ಸಂಪಾದನೆ ಮಾಡುತ್ತಿದ್ದರು.

ನಂಜಯ್ಯ ಕಥೆ ಕಾವ್ಯ ಅಂತ ಕಲಿತು ಹಾಡುವುದಕ್ಕೆ ಶುರುಮಾಡಿದ್ದು ಅವರು ೩೦-೩೫ನೇ ವಯಸ್ಸಿನಲ್ಲಿ ಮದುವೆ ಆದನಂತರ ಅಲ್ಲಿಂದ ಇಲ್ಲಿಯವರೆವಿಗೂ ಕಂಸಾಳೆ ಹಾಡುಗಾರಿಕೆಯನ್ನು ವೃತ್ತಿಮಾಡಿಕೊಂಡು ಬಂದಿದ್ದಾರೆ. ಬೇರೆ ಕಂಬಳ ಕೂಲಿ ಕೆಲಸಗಳಿಗೆ ಹೋಗುವುದಿಲ್ಲ. ನಂಜಯ್ಯನವರು ಭಿಕ್ಷಾಟನೆ ಮಾಡುತ್ತಾ ಕಥೆಗಳನ್ನು ಹಾಡುತ್ತಾ ಭಕ್ತರು ಕರೆದ ಕಡೆಗೆಲ್ಲಾ ಹೋಗುತ್ತಾ ನಾಡಿನಾದ್ಯಂತ ಸಂಚರಿಸಿದ್ದಾರೆ. ಬೆಂಗಳೂರು, ಮೈಸೂರು, ಮಂಡ್ಯ, ಚಾಮರಾಜನಗರಜಿಲ್ಲೆಗಳ ಅನೇಕ ಕಡೆಗಳಲ್ಲಿ ಹಾಡಿದ್ದಾರೆ. ಕಪ್ಪಡಿ, ಚಿಕ್ಕಲ್ಲೂರು, ಕುರುಬನಕಟ್ಟೆ, ಮಾದೇಶ್ವರಬೆಟ್ಟ ಮೊದಲಾದ ಜಾತ್ರೆಗಳಲ್ಲಿ ಇವರು ತಪ್ಪದೆ ಹಾಡುತ್ತಾರೆ. ಭಿಕ್ಷಾಮಾಡುತ್ತಾರೆ. ಇವರು ಅವರು ಮಾಡಲೇಬೇಕಾದ ದೇವರಸೇವೆ ವಾರದಲ್ಲಿ ಕೆಲವು ದಿನಗಳು ಇವರು ಭಿಕ್ಷೆಗೆ ಹೋಗುವುದು ವಾಡಿಕೆ.

ನಂಜಯ್ಯನವರು ಮಾದೇಶ್ವರ, ಮಂಟೇಸ್ವಾಮಿ, ನಂಜುಂಡೇಶ್ವರ, ಮೈಲಾಳ-ರಾಮ ಮೊದಲಾದ ಕಾವ್ಯಗಳನ್ನು ಹಾಡುತ್ತಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಜಾನಪದ ಅಕಾಡೆಮಿ, ಮಂಟೇಸ್ವಾಮಿ ಪ್ರತಿಷ್ಠಾನ ಮೊದಲಾದ ಸಂಸ್ಥೆಗಳು ಆಯೋಜಿಸಿರುವ ಜಾನಪದ ಮೇಳಗಳಲ್ಲಿ ಇವರು ಜನಿಸಿದ್ದಾರೆ.

೨. ಶ್ರೀಯುತ ಮಾದಶೆಟ್ಟರು:

ಮಾದಶೆಟ್ಟಿಯವರು ಬೀಸುಕಂಸಾಳೆ ತಂಬೂರಿಪದ ಈ ಎರಡೂ ಜನಪದ ಕಲೆಗಳಲ್ಲಿ ತನ್ನ ಹೆಸರನ್ನು ಪಡೆದಿರುವಂತಹ ಕಲಾವಿದ. ಇವರು ಯಳಂದೂರು ತಾಲ್ಲೂಕಿನ ಕಂದಳ್ಳಿಯವರು ತಂದೆ ಬಸವಶೆಟ್ಟಿ, ತಾಯಿ ಪುಟ್ಟನಂಜಮ್ಮ, ಮಾದಶೆಟ್ಟರು ಹೇಳುವಂತೆ ಅವರಿಗೆ ೬೦ ವರ್ಷ ವಯಸ್ಸಾಗಿದ್ದರೂ ಈ ಕಲೆಯನ್ನು ವ್ಯಾಯಾಮ-ದಂತೆ ದೇಹಕ್ಕೆ ಅಳವಡಿಸಿಕೊಂಡು ಅಭ್ಯಾಸ ಮಾಡಿರುವಂತಹ ಕಲಾವಿದರು.

ಮಾದಶೆಟ್ಟರು ಮೂಲತಃ ಮಲೆಮಾದೇಶ್ವರನ ಕಂಸಾಳೆಗುಡ್ಡರು. ಬೀಸು-ಕಂಸಾಳೆ ಶಾಲೆಯ ಜೊತೆಗೆ ಮಂಟೇಸ್ವಾಮಿ, ಮಲೆಮಾದೇಶ್ವರನ ಕಾವ್ಯಗಳಂತಹ ಜನಪದ ಕಾವ್ಯಗಳನ್ನು ಹಾಡುವ ತಂಬೂರಿ ಕಲಾವಿದರು ಕೂಡ ಆಗಿದ್ದಾರೆ. ಇವರು ಕಂಸಾಳೆ ಗುಡ್ಡರಾಗಿ ದೀಕ್ಷೆ ಪಡೆಯುವ ಮುಂಚಿನಿಂದಲೂ ತಮ್ಮ ಗುರುಗಳ ಜತೆ ಕಥೆ, ಕಾವ್ಯ ಹಾಡಲು ಹೋಗುತ್ತಿದ್ದರು. ಉಲ್ಲೇಪುರದ ಮಾದಶೆಟ್ಟರು ಇವರ ವಿದ್ಯಾ-ಗುರುಗಳು. ಇವರಿಗೆ ೧೨ ವರ್ಷಕ್ಕೆ ಮಾದೇಶ್ವರನ ಗುಡ್ಡನಾಗಿ ದೀಕ್ಷೆ ಕೊಡಲಾಯಿತು. ಹೀಗೆ ಹಾಡುತ್ತಾ ಬಂದವರು ಮದುವೆ ನಂತರವೂ ಇದನ್ನು ಮುಂದುವರಿಸಿದರು.

ಇವರು ಬೀಸು ಕಂಸಾಳೆ ತಂಡದಲ್ಲಿದ್ದ ಪ್ರಮುಖರು. ಸುಮಾರು ೮ರಿಂದ ೧೨ ಜನ ಕಲಾವಿದರು ತಂಡ ಈ ನೃತ್ಯಪ್ರದರ್ಶನದಲ್ಲಿದ್ದು ಇದೊಂದು ರಂಗಕಲೆ ಕೂಡ ಆಗಿದೆ. ಇದರಲ್ಲಿ ಮಾದಶೆಟ್ಟರು ಸಿದ್ದಹಸ್ತರಾಗಿದ್ದಾರೆ.

ಮಾದಶೆಟ್ಟರೂ ತಂಡದ ಸದಸ್ಯರಾಗಿ ಆಕಾಸವಾಣಿ ಕಲಾವಿದರಾಗಿ ೧೯ ವರ್ಷಕಾಲ ಸಹಕಲಾವಿದರಾಗಿ ಹಾಡಿದ್ದಾರೆ. ಸುಮಾರು ೩೫ ವರ್ಷಗಳಿಂದ ಈ ತಂಬೂರಿ ಹಿಡಿದು ಕಥೆ ಹಾಡುತ್ತಾ ಕೂಡ ಬಂದಿದ್ದಾರೆ. ಮಾದಶೆಟ್ಟರು ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ, ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲಿ ಮಾದೇಶ್ವರ ಬೆಟ್ಟ, ಬಿಳಿರಂಗನಬೆಟ್ಟ, ಕಪ್ಪಡಿ, ಚಿಕ್ಕಲ್ಲೂರು ಜಾತ್ರೆಗಳಲ್ಲಿ ತಿರುಗಾಡುತ್ತಾ ಈ ಕಥೆ ಕಾವ್ಯ ಹಾಡುತ್ತಾ ಕಂಸಾಳೆ ನೃತ್ಯ ಪ್ರದರ್ಶಿಸುತ್ತಾ ಬಂದಿದ್ದಾರೆ. ಇದೇ ರೀತಿ ಈ ಬೀಸುಕಂಸಾಳೆ ಕಲೆಯ ಪ್ರದರ್ಶನವು ತುಂಬಾ

ದುಬಾರಿ ಏಕೆಂದರೆ ತಂಡದಲ್ಲಿ ೧೨ ಜನರಿದ್ದಾರೆ. ಆದ್ದರಿಂದ ಸುಮಾರು ೫೦೦೦ ರಿಂದ ೬,೦೦೦ ರೂಪಾಯಿಗಳಾಗಿರುತ್ತದೆ. ಇಷ್ಟೆಲ್ಲಾ ಸಾಧಿಸಿರುವ ಈ ಕಲಾವಿದ ಇವತ್ತಿಗೂ ಗುಡಿಸಲು ವಾಸಿ. ತನ್ನ ಮೂರುಮಕ್ಕಳಿಗೆ ಕಂಸಾಳೆ ಕುಣಿತ ಮಾಡಿಯೇ ಮದುವೆ ಮಾಡಿದ್ದಾರೆ.

೩. ಹುಚ್ಚುಮಾದಶೆಟ್ಟಿಯವರು:

ಇವರು ಚಾಮರಾಜನಗರಜಿಲ್ಲೆಯ ಮಲೆಯೂರು ಗ್ರಾಮದವರು ತಂಬೂರಿಪದ ಮತ್ತು ಬೀಸುಕಂಸಾಳೆ ಹಿರಿಯ ಕಲಾವಿದರು. ಇವರು ಉಪ್ಪಾರ ಸಮುದಾಯದವರು. ತಂದೆ ಮಾರಶೆಟ್ಟರು, ತಾಯಿ ಮಾರಮ್ಮ. ಇವರಿಗೆ ೮ನೇ ಮಗನಾಗಿ ಹುಚ್ಚು ಮಾದಶೆಟ್ಟರು ಜನಿಸಿದರು. ಮಾದಶೆಟ್ಟರು ಮಾದೇಶ್ವರನ ಕಂಸಾಳೆ ದೇವರು ಗುಡ್ಡರು. ಮಲೆಮಾದೇಶ್ವರ ಬೆಟ್ಟದಲ್ಲಿ ಇವರಿಗೆ ದೀಕ್ಷೆಯಾದಾಗ ಇವರಿಗೆ ೧೬ ವರ್ಷ ವಯಸ್ಸು. ಬೆಟ್ಟದ ಸಾಲೂರು ಮಠದ ಸ್ವಾಮಿಗಳೆ ಇವರಿಗೆ ಗುಡ್ಡನ ಬಿಟ್ಟು ಗುರುಮಣಿ ಕಟ್ಟಿದರಂತೆ. ದೀಕ್ಷೆಯಾದ ನಂತರ ಮಲೆಮಾದೇಶ್ವರನ ಕಾವ್ಯ ಕಲಿಯಲಾರಂಭಿಸಿದರು. ಕಂಸಾಳೆ ಬಡಿಯುತ್ತಾ ಉಪದಾನ ಮಾಡಬೇಕಾದದ್ದು ಗುಡ್ಡಯ್ಯರು ಅನುಸರಿಸಲೇ-ಬೇಕಾದ ಒಂದು ಆಚರಣೆ. ಹಾಗಾಗಿ ಹಿರಿಯ ಗುಡ್ಡಯ್ಯರ ಜೊತೆ ಹೋಗುತ್ತಿದ್ದರು. ಹಿರಿಯ ಗುಡ್ಡಯ್ಯರಲ್ಲಿ ಅನೇಕರು ಈ ಕಥೆ ಕಾವ್ಯ ಹಾಡುವವರಿದ್ದರು. ಅಂತಹ ಗುಡ್ಡರಲ್ಲಿ ಮಲೆಯೂರಿನವರೇ ಆದ 'ಮತ್ತಾರು ಮಾದಶೆಟ್ಟರು ಇವರ ಗುರುಗಳು. ಹುಚ್ಚ ಮಾದಶೆಟ್ಟರು ಕಲಿತು ಪ್ರದರ್ಶಿಸುವ ತಂಬೂರಿಪದ ಮತ್ತು ಬೀಸುಕಂಸಾಳೆಯಂತ ಜಾನಪದ ಕಲೆ ಮತ್ತು ಸಂಸ್ಕೃತಿಗಳ ಪ್ರವರ್ತಕರು. ಮಂಟೇಸ್ವಾಮಿ, ಮಲೆ ಮಾದೇಶ್ವರರು. ಈ ಇಬ್ಬರು ಜಾನಪದ ನಾಯಕರು ಮತ್ತು ಅವರ ಪರಂಪರೆಗಳ ಬಗ್ಗೆ ನಮಗೆ ಮಹತ್ವದ ವಿಷಯವನ್ನು ತಿಳಿಸುವ ಪ್ರಮುಖ ಆಧಾರ ಗ್ರಂಥ ಎಂದರೆ ಮಲೆಯೂರಿನ ದೇಮಚಂದ್ರನ ರಾಜಾವಳಿ ಕಥಾಸಾರ ಎಂಬುವುದು ಗಮನಾರ್ಹ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಹುಚ್ಚು ಮಾದಶೆಟ್ಟರು ಜಿಲ್ಲೆಯ ಹಾಗೂ ತಮ್ಮ ಊರಿನ ಒಂದು ಪರಂಪರೆಯ ಕೊಂಡಾಡಿದ್ದಾರೆ. ಹುಚ್ಚು ಮಾದಶೆಟ್ಟರು ಉಪದಾನ, ಕಂತೆ ಭಿಕ್ಷೆ ಮಾಡುವುದು ಪದ್ಧತಿ. ಹಾಗೇ ವಾರಗಳು, ಹಬ್ಬ, ಜಾತ್ರೆ ಮೊದಲಾದ ಮುಖ್ಯವಾದ ದಿನಗಳಲ್ಲಿ ಭಿಕ್ಷೆ ಮಾಡುತ್ತಾರೆ. ಒಂದು ದಿನ ಭಿಕ್ಷೆಗೆ ಹೋದರೆ ಹೆಚ್ಚು ಏನೂ ಸಿಗುವುದಿಲ್ಲ. ನಾಲ್ಕೈದು ಕೆ.ಜಿ.ದವಸ ಐದಾರು ರೂಪಾಯಿ ಕಾಸು ಸಿಗುತ್ತೆ. ಇಂದಿನ ಕಾಲದಲ್ಲಿ ಭಿಕ್ಷೆಗೆ ಹೋಗುವುದು. ಭಿಕ್ಷೆ ನೀಡುವುದು ಮಹತ್ವ ಕಳೆದುಕೊಂಡಿದೆ ಎನ್ನುತ್ತಾರೆ ಶೆಟ್ಟರು. ಒಂದು ರಾತ್ರಿ ಕಥೆ ಹಾಡಿದರೆ ನಾಲ್ಕಾರು ಜನರ ತಂಡಕ್ಕೆ ಸಾವಿರದಿಂದ ೧೫೦೦ ರೂ. ಒಟ್ಟು ೪೬

ವರ್ಷಗಳ ಕಾಲ ನಿರಂತರವಾಗಿ ಇವರು ಜಾನಪದ ಕ್ಷೇತ್ರದಲ್ಲಿ ದುಡಿದಿದ್ದಾರೆ. ಇದು ಇವರ ಮಹತ್ವದ ಸಾಧನೆ. ಊರೂರು ಜಿಲ್ಲೆ ತಾಲ್ಲೂಕುಗಳ ಮೇಲೆ ಕಥೆ ಮಾಡಲು ಕಂಸಾಳೆ ಪ್ರದರ್ಶಿಸಲು ಸಂಚರಿಸಿದ್ದಾರೆ. ಹೀಗೆ ತಿರುಗಾಡುವ ಮೂಲಕ ಕಲೆಯನ್ನು ಪ್ರಚಾರ ಮಾಡುತ್ತಾ ಉಳಿಸಿ ಬೆಳೆಸುತ್ತಾ ಬಂದಿದ್ದಾರೆ.

ಹುಚ್ಚು ಮಾದಶೆಟ್ಟರು ಆಕಾಶವಾಣಿ ಕಲಾವಿದರಾಗಿ ೪ ವರ್ಷಗಳು ಹಾಡಿದ್ದಾರೆ. ಜಾನಪದ ಕಥೆ ಮತ್ತು ಪ್ರಸಂಗಗಳನ್ನು ಆಧರಿಸಿ ತಯಾರಿಸಿರುವ ಹಲವು ಕ್ಯಾಸೆಟ್‌ಗಳನ್ನು ಪ್ರಕಟಿಸಿದ್ದಾರೆ. ದಡ್ಡಣ್ಣ, ಇಡ್ಲಿ ಮಾದಮ್ಮ ಕುಸುಮಾಲೆ ಜಾನಪದ ಗೀತೆಗಳು ಇವರು ಹೊರಡಿಸಿರುವ ಧ್ವನಿಸುರುಳಿಗಳು. ಇವರಿಗೆ ೨೦೦೫ನೇ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ೨೧ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಸನ್ಮಾನ, ೨೦೦೬-೦೭ನೇ ಶಿವರಾತ್ರೀಶ್ವರ ಜಾತ್ರಾಮಹೋತ್ಸವ ಪ್ರಶಂಸನಾ ಪ್ರಶಸ್ತಿ ಒಂದಿದೆ.

ಸೋಬಾನೆ ಪದಗಳು

೧. ಶ್ರೀಮತಿ ಕರುಗ ನಂಜಮ್ಮ

ಶ್ರೀಮತಿ ಕರುಗ ನಂಜಮ್ಮ ರಾಮಸಮುದ್ರದ ಹನುಮಂತಯ್ಯನವರ ಹೆಂಡತಿ. ಇವರ ತಂದೆ ದೊಡ್ಡರಾಮ ಪೇಟೆಯ ದೊಡ್ಡಯ್ಯ. ತಾಯಿ ಮಾದಮ್ಮ. ಬಡತನ ಹಸಿವು ಸಾಮಾಜಿಕ ಅಸಮಾನತೆಯ ಅಸಹಾಯಕತೆಯ ನಡುವೆ ಎಷ್ಟೋ ಸಮುದಾಯಗಳ ಹೆಂಗಸರು, ನೆಮ್ಮದಿಗೆ, ಅಧ್ಯಾತ್ಮ ಕತೆಯಲ್ಲಿ ತಲ್ಲೀನತೆಗೆ ಜಾನಪದ ಹಿನ್ನಲೆಯ ಈ ಸೋಬಾನೆ ಪದಗಳು ನೆಮ್ಮದಿಯನ್ನು ಒದಗಿಸುವ ಕ್ಷೇತ್ರ. ಅಂತಹದರಲ್ಲಿ ಕೂಲಿಮಾಡುವ ನಂಜಮ್ಮ ಕೂಲಿನಾಲಿ ಮಾಡುವ ಸಂದರ್ಭದಲ್ಲಿ ದಣಿವನ್ನು ಮರೆಯಲು ಹಾಡುತ್ತಾರೆ. ಈ ಜಾನಪದ ಎಂಬುದು ಬೆಳೆದದ್ದು ಹಾಗೆ. ನಂಜಮ್ಮ ಮದುವೆಯಾಗಿ ಕೂಲಿಗೆ ಹೋದ ಕಡೆ ಹಾಡುವವರ ಜೊತೆ ಈ ಪದ, ಪದ್ಯ,ಕತೆ, ಕಾವೇರಿ ಕಲಿತರಂತೆ. ಸಿದ್ದಮ್ಮ ಜವನಮ್ಮ ಎಂಬ ಹಿರಿಯ ಸೋಬಾನೆ ಕಲಾವಿದರು ನಂಜಮ್ಮನ ಪಾಲಿಗೆ ಈ ವಿದ್ಯೆ ಕಲಿಸಿದ ಗುರುಗಳು. ಕ್ರಮೇಣ ಮುತ್ತೈದೆಯರನ್ನು ಶಾಸ್ತ್ರ ಸೂತ್ರಗಳಿಗೆ ಕರೆದ ಕಡೆ ಮದುವೆ ಸೋಬನ ಮುಂತಾದ ಕಾರ್ಯಗಳಿಗೆ ಹೋಗುತ್ತ ಆಯಾ ಸಂದರ್ಭಕ್ಕೆ ತಕ್ಕ ಪದ ಹೇಳುವುದು. ಜೀವಮಾನದಲ್ಲಿ ಇವರು ಸೋಬಾನೆ ಹೇಳಿ ಆಗಿರುವ ಮದುವೆಗಳು ಎಷ್ಟೋ ಎಂದರೆ ಲೆಕ್ಕವಿಲ್ಲ. ತಮ್ಮ ಐವತ್ತು ವರ್ಷಗಳ ಹಾಡುಗಾರಿಕೆಯ ಅನುಭವದಲ್ಲಿ ಸಾವಿರಾರು ಮದುವೆಗಳಿಗೆ ಸೋಬಾನೆ ಹಾಡಿದ್ದಾರೆ. ಮಾದೇಶ್ವರ ಬೆಟ್ಟ ಜಾತ್ರೆ ಕಪ್ಪಡಿ. ಚಿಕ್ಕಲ್ಲೂರು, ಬಿಳಿರಂಗನಬೆಟ್ಟಜಾತ್ರೆ. ಊರಿನ ಶುಭಕಾರ್ಯಗಳು ಮಾರಿಹಬ್ಬ ಹೀಗೆ ಎಲ್ಲಾ ಮುಖ್ಯ

ಸಂದರ್ಭಕ್ಕೆ ಇವರು ಹಾಡುತ್ತಾರೆ. ನಂಜಮ್ಮ ಹಾಡುವುದು ಮುಖ್ಯವಾಗಿ ಸೋಬಾನೆ-ಯಾದರೂ ಮಂಟೇಸ್ವಾಮಿ ಸಿದ್ದಪ್ಪಾಜಿ. ಮಾದೇಶ್ವರ, ನಂಜುಂಡೇಶ್ವರ, ನಿಂಗರಾಜಮ್ಮ ಮಲ್ಲಪ್ಪ ಬಸವಣ್ಣನವರ ಕಥಾ ಪ್ರಸಂಗ. ಬಿಡಿಹಾಡುಗಳನ್ನು ಹಾಡುತ್ತಾರೆ. ಕರುಗ ನಂಜಮ್ಮ ಚಾಮರಾಜನಗರ, ಮೈಸೂರು , ಕೋಳಿಪಾಳ್ಯ ಹೀಗೆ ಸುತ್ತಮುತ್ತಲ ಹಳ್ಳಿಗಳ ಮೇಲೆ ಸಂಚರಿಸಿದ್ದಾರೆ. ಸೋಬಾನೆ ಪದಗಳು ಮತ್ತು ಗಾಯಕರು ಇಲ್ಲವೆಂದರೆ ಗ್ರಾಮೀಣ ಮದುವೆ ಆಚರಣೆಗಳು ನಡೆಯುವುದೇ ಇಲ್ಲ. ಅವುಗಳನ್ನು ಹಾಗೂ ಸೋಬಾನೆ ಎಂಬ ಮಹಾಕಾವ್ಯವನ್ನು ಉಳಿಸುವಲ್ಲಿ ಇಂದಿಗೂ ಸೋಬಾನೆ ಕಲಾವಿದೆಯರ ಪಾತ್ರ ಹಿರಿದಾದುದು.

೨. ಮಲ್ಲಮ್ಮ

ಜಾನಪದ ಹಾಡು, ಕಥೆ, ಕಾವ್ಯ ಆಚರಣೆಯ ಸಂದರ್ಭದಲ್ಲಿ ಸಹಜವಾಗಿ ಆ ಸ್ಥಳದಲ್ಲಿ ಹಾಡುವಂತಹ ಸನ್ನಿವೇಶದಲ್ಲಿ ಬಳಸುವಂತಹ ಕಲೆಯಿದು. ಈ ಸೋಬಾನೆ ಪದ.

ಯಾವುದೇ ಜಾನಪದ ಅಭಿವ್ಯಕ್ತಿಯಾಗಲಿ ಅವು ಸಂಸ್ಕೃತಿ, ಆಚರಣೆಗಳ ಜೊತೆಗೆ ಹುಟ್ಟಿಕೊಂಡವು. ಒಂದು ಆಚರಣೆಯು ನಡೆಯುತ್ತಿರಬೇಕು. ಆಗಲೇ ಅದಕ್ಕೆ ಪೂರಕವಾದ ಹಾಡು ಕಥೆ ಕಾವ್ಯ ಬಿಚ್ಚಿಕೊಳ್ಳುವುದು. ಈ ದಿಸೆಯಲ್ಲಿ ಮಲ್ಲಮ್ಮರವರು ಹೆಸರು ಅಮರವಾದದ್ದು. ಇವರು ಮೂಡ್ನಾಕೂಡು ಊರಿನವರು. ತಂದೆ ಚಿಕ್ಕರಂಗಪ್ಪ, ತಾಯಿ ದೇವಮ್ಮ. ಇವರು ೧೨ನೇ ವಯಸ್ಸಿನಲ್ಲಿದ್ದಾಗಲೇ ಸೋಬಾನೆ ಪದಕ್ಕೆ ಸೊಲ್ಲು ಹೇಳಲಾರಂಭಿಸುತ್ತಾರೆ. ತಾಯಿ ದೇವಮ್ಮರು ಸೋಬಾನೆ ಹಾಡುತ್ತಿದ್ದ ಮಲ್ಲಮ್ಮರವರು ಅವರಿಂದಲೇ ಕಲಿತರು. ಕೂಲಿಮಾಡಿಕೊಂಡು ಕಲಿಯುವಂತಹ ಸಂದರ್ಭ ಬಂದಿರುವುದು ಸಹಜವಾದ್ದರಿಂದ ಅವರಿಗೆ ಸಿಗುತ್ತಿದ್ದ ಆನಂದವೇ ಬೇರೆ. ಮದುವೆ ಶಾಸ್ತ್ರ, ಸೋಬಾನೆಗಳಿಗೆ ಮುತ್ತೈದೆ ಶಾಸ್ತ್ರಗಳಿಗೆ ಹೋದಕಡೆ, ಜಾತ್ರೆಗಳಿಗೆ ಹೋದಾಗಲೆಲ್ಲ ಹೇಳುವವರ ಜತೆ ಸೇರಿ ಕಲಿತಿದ್ದಾರೆ.

ಒಂದು ಕಾಲದಲ್ಲಿ ಮದುವೆಯಂತಹ ಶುಭ ಕಾರ್ಯಗಳಿಗೆ ಸೋಬಾನೆ ಪದ ಮುಖ್ಯವಾಗಿತ್ತು. ಈಗ ಹಾಗಲ್ಲ. ವಾದ್ಯ ಡೋಲುಗಳಿಲ್ಲದೆ ಸೋಬಾನೆ ತಂಡದವ-ರಿಂದಲೇ ಹಿಂದೆ ಮದುವೆಯಾಗುತ್ತಿದ್ದರು. ಮಲ್ಲಮ್ಮ ತನ್ನ ೭ನೇ ವರ್ಷದಿಂದ ಇಲ್ಲಿಯವರೆಗೆ ೫೦ನೇ ವರ್ಷಗಳ ಕಾಲ ಸಾವಿರಾರು ಮದುವೆ ಮಂಗಳ ಕಾರ್ಯಗಳಿಗೆ ಹಾಡಿದ್ದಾರೆ. ಕೆಲಸೂರು ಮತ್ತು ಸುತ್ತಮುತ್ತಲ್ಲ ಪ್ರತಿ ಮದುವೆಯಲ್ಲೂ ಇವರು ಹಾಡಿದ್ದಾರೆ. ಇದು ಒಂದು ಸಾಧನೆಯೇ ಸರಿ.

೩. ಗುರುಮಲ್ಲಮ್ಮನವರು

ಯಳಂದೂರು ತಾಲ್ಲೂಕಿನ ಗುಂಬಳ್ಳಿ ಗ್ರಾಮದವರು. ಸುಮಾರು ೬೫ ವಯಸ್ಸಿನ ಇವರು ಆದಿಕರ್ನಾಟಕ ಸಮುದಾಯದವರು. ಇವರ ಗಂಡ ಮಹದೇವಯ್ಯನವರು. ಗುರುಮಲ್ಲಮ್ಮನವರು ಮದುವೆ ಆದಮೇಲೆ ಸೋಬಾನಾ ಪದವನ್ನು ಕಲಿತವರು.

ಗುರುಮಲ್ಲಮ್ಮನಿಗೆ ಸೋಬಾನೆ ಪದ ಕಲಿಸಿದ ಗುರುಗಳು ಗುಂಬಳ್ಳಿ ನಂಜಮ್ಮ. ಮುತ್ತೈದೆ ಎಂದು ಮದುವೆ ಶಾಸ್ತ್ರಗಳಿಗೆ ಜನ ಕರೆಯುವ ಪದ್ಧತಿ ಇತ್ತು. ಹಾಗೆ ನಂಜಮ್ಮ ಸೋಬಾನೆ ಹೇಳಲು ಬರುತ್ತಿದ್ದರು. ಆ ಸಮಯದಲ್ಲಿ ಕಲಿಯ-ಲಾರಂಭಿಸಿದರು.

ಸೋಬಾನೆ ಪದ ಹಾಡದೆ ಯಾವ ಮದುವೆ ವಸಗೆಯೂ ಆಗುವುದಿಲ್ಲ. ಎಂತಹ ವಾದ್ಯ, ಡೋಲು, ಬಂದರೂ ಸರಿ ಕೆಲವು ಶಾಸ್ತ್ರಗಳಿಗೆ ಸೋಬಾನೆಯವರು ಬರಲೇಬೇಕು, ಹಾಡಬೇಕು. ಸೋಬಾನೆ ಸೊಲ್ಲು ಕೇಳದೆ ಮದುವೆ ಮನೆಗೆ ಕಳೆ ಇರುವುದಿಲ್ಲ. ಮದುವೆಗೆ ಮುಂಚೆ ನಡೆಯುವ ಶಾಸ್ತ್ರಗಳು ಟೀಕಾಕಿಸುವ ಶಾಸ್ತ್ರಗಳಿಗೆ ವಾದ್ಯ ನುಡಿಸುವುದಿಲ್ಲ. ಗ್ರಾಮೀಣ ಪ್ರದೇಶದ ಮದುವೆಗಳಲ್ಲಿ ಸೋಬಾನೆ ಕಲಾವಿದರೆ ಮುಖ್ಯ. ದಲಿತರು ಹಿಂದುಳಿದ ಸಮುದಾಯಗಳ ಮದುವೆಗಳಲ್ಲಿ ಇಂದಿಗೂ ಸೋಬಾನೆ ಹೇಳದೆಯೇ ಶಾಸ್ತ್ರ ಮಾಡುವ ಪದ್ಧತಿ ಇದೆ.

ಗುರುಮಲ್ಲಮ್ಮನವರು ಪಾರ್ವತಿ ಕಲ್ಯಾಣ, ಮುಡುಕುತೋರೆ ಮಲ್ಲಪ್ಪ, ಬಿಳಿರಂಗಸ್ವಾಮಿ, ನಂಜುಂಡೇಶ್ವರ ಬೀಗರಪದರ, ವಸಗೆಪದ, ರಾಗಿಕಲ್ಲುಪದ, ಜೋಗುಳ ಮೊದಲಾದ ಜನಪದ ಪ್ರಕಾರಗಳ ಹಾಡುವ ಇವರು ಮದುವೆ, ಬಸಿರೊಸಗೆ, ಸೋಬನ, ತೊಟ್ಟಿಲು ಕಟ್ಟುವಾಗ ದೇವರ ಉತ್ಸವ ಜಾತ್ರೆ ಹೀಗೆ ಹಾಡುತ್ತಾರೆ.

೪. ಶ್ರೀಮತಿ ಸಣ್ಣದೇವಮ್ಮನವರು

ಇವರು ಬಂಡೀಪುರದ ಕಾರೇಮಾಳ ಗಿರಿಜನ ಕಾಲೋನಿಯ ನಿವಾಸಿಯಾಗಿದ್ದು ತಂದೆ ನಿಂಗಯ್ಯ ತಾಯಿ ಪುಟ್ಟಮ್ಮ ಮಗಳಾಗಿ ಜನಿಸಿದರು. ಸಣ್ಣದೇವಮ್ಮ ಕಾಳಯ್ಯರನ್ನು ಕೈಹಿಡಿದು ಕಾರೇಮಾಳ ಸೇರಿದರು. ಇವರಿಗೆ ಎರಡು ಹೆಣ್ಣು, ಎರಡು ಗಂಡುಮಕ್ಕಳು. ಎಲ್ಲರಿಗೂ ಮದುವೆ ಮಾಡಿದ್ದಾರೆ. ಈ ಭಾಗದ ಸೋಲಿಗ ಸಮುದಾಯದ ಹಿರಿತಲೆ, ಹಿರಿಹೆಂಗಸು ಎನಿಸಿದರು. ವೃತ್ತಿ ಕೂಲಿ ಕಂಬಳ. ಪ್ರವೃತ್ತಿಯಲ್ಲಿ ಸೋಬಾನೆಪದ ಮತ್ತು ನಾಟಿ ವೈದ್ಯಪದ್ಧತಿ ಕಲಿತಿದ್ದಾರೆ. ಬುಡಕಟ್ಟು ಸೋಲಿಗ ಸಮುದಾಯಗಳ ಜಾನಪದ ಕಥೆ, ಕಾವ್ಯ, ಸಂಸ್ಕೃತಿ ತುಂಬಾ

ವಿಭಿನ್ನವಾದದ್ದು. ಅವರದೇ ಆದ ಆಚಾರ-ವಿಚಾರಗಳು, ರೂಢಿಸಂಪ್ರದಾಯಗಳು ಇರುತ್ತದೆ. ಜಾನಪದಕ್ಕೆ ಅವರದು ಒಂದು ವಿಶಿಷ್ಟ ಕೊಡುಗೆ. ಹೀಗೆ ಸಣ್ಣದೇವಮ್ಮ ತಾಯಿಯಿಂದ ಬಂದಿರುವ ಕೊಡುಗೆ ಈ ಸೋಬಾನೆಪದವು ಮದುವೆಯಾದ ನಂತರವು ಹೆಣ್ಣುಮಕ್ಕಳು ಮೈನೆರೆದಾಗ ಮದುವೆ ನಿಶ್ಚಯವಾದಾಗ, ಮದುವೆಯಾದಾಗ, ಗರ್ಭಿಣಿಯಾದಾಗ, ತೊಟ್ಟಿಲು ಕೊಂಡೊಯ್ಯುವಾಗ ಹೀಗೆ ಪ್ರತಿಮನೆಯ ಶುಭಕಾರ್ಯಗಳಿಗೆ, ಶಾಸ್ತ್ರಗಳಿಗೆ ಶಾಸ್ತ್ರಗಳನ್ನು ನಡೆಸಿಕೊಡುವುದು ಇವರೇ. ಹಾಗೆಲ್ಲಾ ಸಂದರ್ಭಗಳಲ್ಲಿ ಪ್ರತಿ ಸಂದರ್ಭಕ್ಕೆ ಸರಿಹೊಂದುವ ಶಾಸ್ತ್ರದ ಪದಗಳನ್ನು ಸೋಬಾನೆ ಪದಗಳನ್ನು ಹಾಡುತ್ತಾರೆ. ಕಂಕಣಧಾರಣೆ, ತಾಳಿಧಾರಣೆ, ಧಾರೆ, ಮುಯ್ಯಿ ಈ ಪ್ರತಿ ಹಂತದಲ್ಲೂ ಬೇರೆ ಬೇರೆ ಸೋಬಾನೆ ಸಾಲುಗಳಿದ್ದು ದೇವಮ್ಮ ಹಾಡುತ್ತಾರೆ. ಇವರಿಗೆ ಹಿಮ್ಮೇಳವಾಗಿ ಮೂರು, ನಾಲ್ಕು ಜನ ಸೊಲ್ಲು ಹೇಳುವವರು ಇರುತ್ತಾರೆ.

ಸೋಬಾನೆ ಪದಗಳಲ್ಲದೆ ಸಣ್ಣ ದೇವಮ್ಮ ತಮ್ಮ ಮನೆದೇವರು ಕುಲದೇವರುಗಳ ಮೇಲೆ ಪದ ಹಾಡಿರುತ್ತಾರೆ. ಚಿಕ್ಕದೇವಮ್ಮ, ಚಿಕ್ಕಮ್ಮ ದೊಡ್ಡಮ್ಮ, ಬಿಳಿಗಿರಿರಂಗಸ್ವಾಮಿ, ಕಂಸುಮಾಲೆ, ಮಲೆಮಾದೇಶ್ವರ, ಸಿದ್ದಪ್ಪಾಜಿ, ನಂಜುಂಡೇಶ್ವರ, ಮಾರಮ್ಮ ಮೊದಲಾದ ದೇವರುಗಳ ಬಿಡಿಪದ ಹಾಡುತ್ತಾರೆ.

೫. ಶ್ರೀಮತಿ ಗುರುಬಸಮ್ಮ:

ಕೊಳ್ಳೇಗಾಲ ಪಟ್ಟಣದ ದಲಿತ ಸಮುದಾಯ ಸಾಂಸ್ಕೃತಿಕವಾಗಿ ಮಹತ್ವದ ನೆಲೆಗಟ್ಟನ್ನು ಹೊಂದಿದೆ. ಇಂತಹ ಪ್ರತಿಭಾವಂತ ಸೋಬಾನೆ ಗಾಯಕಿಯರಲ್ಲಿ ಗುರುಬಸಮ್ಮ ಒಬ್ಬರು. ಕೊಳ್ಳೇಗಾಲ ಪಟ್ಟಣದ ಹೊಸಬೀದಿ ಅಥವಾ ಭೀಮಾನಗರದ ಮಾದಯ್ಯನವರ ಪತ್ನಿ ಗುರುಬಸಮ್ಮ ಅವರು ಅರವತ್ತೈದು ವರ್ಷಗಳನ್ನು ಪೂರೈಸಿದ್ದಾರೆ. ಮನೆ ಮಕ್ಕಳು ಹೊಲಗದ್ದೆ ನಿರ್ವಹಣೆಯನ್ನು ಸಮರ್ಥವಾಗಿ ನಿಭಾಯಿಸಿ ಇಂದಿಗೂ ಆರೋಗ್ಯಪೂರ್ಣವಾಗಿ ಸೊಗಸಾಗಿ ಹಾಡುತ್ತಾರೆ. ಎಲ್ಲಾ ಗಾಯಕರಂತೆ ಇವರು ಸೋಬಾನೆ ಪದದ ಜತೆಗೆ ಇತರೆ ಸ್ತ್ರೀಪುರುಷ ದೇವತೆಗಳ ಬಿಡಿಪದಗಳನ್ನು ಹಾಡುತ್ತಾರೆ.

ಗುರುಬಸಮ್ಮ ತಮ್ಮ ದೊಡ್ಡವ್ವ ಮಾದಮ್ಮರವರಿಂದ ಈ ಸೋಬಾನೆ ಪದ ಕಲಿತರು. ಸ್ವಂತ ದೊಡ್ಡಮ್ಮನೇ ಇವರ ಗುರು. ತುಂಬಾ ಸಣ್ಣವಯಸ್ಸಿಗೆ ಅಂದರೆ ತಮ್ಮ ಒಂಭತ್ತನೇ ವಯಸ್ಸಿಗೆ ಬಸಮ್ಮ ಮದುವೆಯಾದರು. ಗುರುಬಸಮ್ಮ ಸೋಬಾನೆ ಪದ ಹಾಡುವ ಮುಖ್ಯ ಗಾಯಕಿ. ಇವರು ಗಿರಿಜಾ ಕಲ್ಯಾಣ ಅಥವಾ ಪಾರ್ವತಿ

ಕಲ್ಯಾಣ. ನೀರಾಯಿಸುವ ಪದ, ಬೀಗರಪದ, ಬಸರೊಸಗೆ ಪದ, ಸೋಬಾನೆಪದ ಹೀಗೆ ಸಂಬಂಧಿಕರ ಬಿಡಿ ಪದಗಳನ್ನು ಇವರು ಹಾಡುತ್ತಾರೆ.

ಸೋಬಾನೆ ಕಲಾವಿದರು ತಾವು ಕಲಿತ ಸೋಬಾನೆಯನ್ನು ಹಾಡುವುದು ಒಂದು ಸೇವೆಯಾಗಿ ಮಾಡುತ್ತಾರೆ. ಹಾಡುವುದು ಕಲಿತವರ ಧರ್ಮ ಎಂದು ಭಾವಿಸುತ್ತಾರೆ. ಸೋಬಾನೆ ಹಾಡಲು ಕರೆಸಿಕೊಳ್ಳುವುದನ್ನು ಗುರುಬಸಮ್ಮನವರು ಗೌರವ ಎಂದು-ಕೊಂಡಿದ್ದಾರೆ.

ತಮಟೆ ವಾದನ:

೧. ಶ್ರೀಯುತ ಯಬ್ರಯ್ಯನವರು:

ಯಬ್ರಯ್ಯನವರು ಚಾಮರಾಜನಗರ ತಾಲ್ಲೂಕಿನ ಅಮಚವಾಡಿ ಗ್ರಾಮದ ಆದಿಜಾಂಬವ ಜನಾಂಗದವರು. ಇವರ ತಂದೆ ಈರಯ್ಯ. ತಾಯಿ ಪುಟ್ಟಮ್ಮನವರು.

ಯಬ್ರಯ್ಯರ ತಂದೆ ಈ ಕಲೆಯನ್ನು ಕಲಿತಿದ್ದರು. ಗ್ರಾಮದ ಹಬ್ಬಗಳು, ಸುತ್ತಮುತ್ತಲ ಜಾತ್ರೆಗಳು, ಊರುಕೇರಿಯ ವಿಶೇಷ ಕಾರ್ಯಗಳಿಗೆ ತಮಟೆಕಲೆ ಅಗತ್ಯವಾಗಿದ್ದುದರಿಂದ ಇದು ತಂದೆಯಿಂದ ಮಗನಿಗೆ ಮಗನಿಂದ ಮೊಮ್ಮಗನಿಗೆ ಹೀಗೆ ತಲೆಮಾರಿನಿಂದ ತಲೆಮಾರಿಗೆ ಹರಿದುಬಂದಿದೆ. ಯಬ್ರಯ್ಯ ತಾನು ೬ ವರ್ಷದ ಹುಡುಗನಿರುವಾಗಲೇ ತಮಟೆ ವಾದನ ಹುಚ್ಚು ಹತ್ತಿಸಿಕೊಂಡರು. ಅಪ್ಪ ತಮಟೆ ಇಟ್ಟಿದ್ದ ಕಡೆ ಹೋಗಿ ಎತ್ತಿಕೊಂಡು ಬಾರಿಸುತ್ತಾ ಕಲಿತರು. ಬೆಳೆಯುತ್ತ ಅಪ್ಪನಂತೆ ಗ್ರಾಮದ ಹಾಗೂ ಸುತ್ತಮುತ್ತ ಊರುಗಳ ಜಾತ್ರೆ ಉತ್ಸವ ಹಬ್ಬಗಳಿಗೆ ಸ್ವತಂತ್ರವಾಗಿ ತಂಡದ ಜತೆ ಪ್ರಸ್ತುತಪಡಿಸುವುದು ವೃತ್ತಿಯಾಯಿತು.

ತಮಟೆ ಬಾರಿಸುವ ಕಲೆ ಹೆಚ್ಚಾಗಿ ದಲಿತರಲ್ಲಿ ಎಡಗೈ ಪಂಗಡದವರೇ ಮೇಲು. ಪ್ರದಾನವಾಗಿ ಸಮುದಾಯ ಪ್ರದಾನವಾದ ಧಾರ್ಮಿಕ, ಸಾಂಸ್ಕೃತಿಕ ಉತ್ಸವಗಳಲ್ಲಿ ಇದನ್ನು ನುಡಿಸುವ ಸಂಪ್ರದಾಯ ಬೆಳೆದುಬಂದಿದೆ. ತಮಟೆ ಹುಟ್ಟು, ಸಾವು ಎಲ್ಲಾ ಸಮಯದಲ್ಲಿ ತನ್ನ ಪ್ರಾಮುಖ್ಯತೆಯನ್ನು ಪಡೆದಿದೆ. ಯಬ್ರಯ್ಯನವರು ೪ ಜನರ ತಂಡವಿದ್ದು ಎರಡು ತಮಟೆ, ಒಂದು ಕಂಡೋಲು, ಒಂದು ತಾರ್ಸಿ ಇರುತ್ತದೆ. ತಂಡದ ನಾಯಕನಾಗಿ ಇವರೇ ಇರುತ್ತಾರೆ. ದೇವರ ಕಾರ್ಯಗಳು, ಸರ್ಕಾರಿ ಸಮಾರಂಭ, ರಾಷ್ಟ್ರೀಯ ಹಬ್ಬಗಳಲ್ಲಿ ಭಾಗವಹಿಸುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಕೆಲವು ಮುಖ್ಯವಾದ ಸಂಗತಿಗಳನ್ನು ತಮಟೆ ಬಾರಿಸಿಯೇ ಪಾರಾದ ಸಂಪ್ರದಾಯಗಳಿವೆ. ಅವುಗಳಿಗೆ ನಾವು ಬೇಕೆ ಬೇಕು ಎನ್ನುತ್ತಾರೆ ಯಬ್ರಯ್ಯ.

೨. ಮರಿನಿಂಗಯ್ಯನವರು:

ಮರಿನಿಂಗಯ್ಯನವರು ಯಳಂದೂರು ತಾಲ್ಲೂಕಿನ ಗುಂಬಳ್ಳಿಯ ಆದಿಜಾಂಬವ ಬೀದಿಯವರು. ಇವರಿಗೆ ೭೦ ವರ್ಷ ವಯಸ್ಸು. ತಂದೆ ಸಿದ್ದಯ್ಯ ತಾಯಿ ಮಾದಮ್ಮ, ೧೨ನೇ ವಯಸ್ಸಿನಲ್ಲಿ ತಮಟೆ ಬಾರಿಸುವಂತಹ ಕಲೆಯನ್ನು ಅಭ್ಯಾಸ ಮಾಡಿಕೊಂಡರು. ತಂದೆಯೇ ಇವರಿಗೆ ಗುರು. ಗೋಡೆಯಲ್ಲಿ ಸುಮ್ಮನೆ ನೇತು ಹಾಕಿರುತ್ತಿದ್ದ ತಮಟೆಯನ್ನು ಕದ್ದು ಹಿತ್ತಲಿಗೋ ಹೊಲಗದ್ದೆಗೊ ತೆಗೆದುಕೊಂಡು ಹೋಗಿ ನುಡಿಸುತ್ತಾ ಕಲೆಯನ್ನು ದಕ್ಕಿಸಿಕೊಂಡರು.

ಊರಿನಲ್ಲಿ ನಡೆಯುವ ಗ್ರಾಮದ ಹಬ್ಬಗಳು, ಉತ್ಸವ, ಕಂಡಾಯಗಳ ಮೆರವಣಿಗೆ, ಮದುವೆ, ಜಾತ್ರೆಗಲಲ್ಲಿ ಬಾರಿಸುವುದು ವೃತ್ತಿಯಾಯಿತು. ಯುಗಾದಿ, ಶಿವರಾತ್ರಿ, ಮಾರಿಹಬ್ಬಗಳಿಗೆ ಕಡ್ಡಾಯವಾಗಿ ಬಾರಿಸುವುದು ವಾಡಿಕೆಯಾಯಿತು.

ತಮಟೆ ವಾದ್ಯ ಅದರ ಜೊತೆಗೆ ಡೋಲು, ತಾರ್ಸಿ ಎಂಬ ಚರ್ಮವಾದ್ಯ ಇರುತ್ತದೆ. ಸಕಲಕಲಾವಲ್ಲಭರಾಗಿ ಪ್ರಾವೀಣ್ಯತೆ ಪಡೆದವರು. ತಮಟೆ ನುಡಿಸುವುದಷ್ಟೆ ಅಲ್ಲ. ತಮಟೆಯನ್ನು ತಯಾರಿಸುವ ಕಲೆಯನ್ನು ಕೂಡ ಇವರು ಕಲಿತಿದ್ದಾರೆ. ಹಾಗೆ ಈ ತಮಟೆಮೇಳದ ಜೊತೆಗೆ ಹುಲಿವೇಷ ಕುಣಿತ, ವೇಷ ಬರೆಯುವುದು ಇವರಿಗೆ ಕರಗತ. ಮರಿನಿಂಗಯ್ಯನವರಿಗೆ ತಮಟೆ ತಯಾರಿಸುವುದು ಗೊತ್ತಿದೆ. ಒಂದು ಮೊಳ ಎತ್ತರದ ನಾಲ್ಕೈದು ಅಂಗುಲ ಅಗಲದ ಕಬ್ಬಿಣದ ಗುಂಡಾದ ಬಳೆ ಸಿದ್ದಪಡಿಸಿ ಆಡು, ಕುರಿ, ಎಮ್ಮೆ ಚರ್ಮ ತಂದು ಒಣಗಿಸಿ ಅದನ್ನು ಹದವಾಗಿ ಹೊಂದಿಸಿ ಮಾಡುವಂತಹ ಕಲೆಯು ಕೂಡ ಗೊತ್ತು. ಈ ನಿಟ್ಟಿನಲ್ಲಿ ಅವರು ಈ ವಿದ್ಯೆಯನ್ನು ಅವರ ಮಕ್ಕಳಿಗೂ ಕಲಿಸಿದ್ದಾರೆ.

೩. ಶ್ರೀ ಮುತ್ತಯ್ಯನವರು:

ಕೊಳ್ಳೇಗಾಲ ತಾಲ್ಲೂಕಿನಲ್ಲಿ ತಮಟೆ ಪ್ರದರ್ಶನ ಕಲೆಗೆ ಹೆಸರಾದವರು ಶ್ರೀಯುತ ಮುತ್ತಯ್ಯನವರು. ಇವರು ಬೂದುಬಾಳು ಗ್ರಾಮದ ಆದಿಜಾಂಬವ ಸಮುದಾಯಕ್ಕೆ ಸೇರಿದವರು.

ರಂಗಯ್ಯ, ವೆಂಕಟಮ್ಮ ಇವರುಗಳು ಮಗನಾಗಿ ಜನಿಸಿದರು. ಇವರಿಗೆ ತಂದೆಯಾದ ರಂಗಯ್ಯರೇ ಗುರುಗಳು, ತಲತಲಾಂತರದಿಂದ ಬೂದುಬಾಳು ಜಾತ್ರೆಗೆ

ತಮಟೆ ಬಾರಿಸುವುದು ಇವರ ಸಮುದಾಯಕ್ಕೆ ಮೀಸಲಾದ ಸೇವೆಗೆ ಬಂದಿದ್ದು ಊರು ಕೇರಿಯ ಹಬ್ಬ, ಜಾತ್ರೆ ದೇವರ ಉತ್ಸವ ಮೆರವಣಿಗೆ ಮುಂತಾದವುಗಳಿಗೆ ಇವರ ತಂದೆ ಮತ್ತು ಇತರರು ಸೇರಿ ತಮಟೆ ನುಡಿಸುತ್ತಿದ್ದರು. ಇದನ್ನು ಬಾಲ್ಯದಿಂದಲೇ ನೋಡುತ್ತಾ ಅನುಕರಿಸುತ್ತ ಕಲಿತರು ಮತ್ತು ಮುತ್ತಯ್ಯ ಈ ಕಲೆಯನ್ನು ರೂಢಿಸಿಕೊಂಡರು. ಬೂದುಬಾಳು ಕ್ಷೇತ್ರವು ಅಲ್ಲಿನ ಜಾತ್ರೆಯಿಂದಲೂ ಪ್ರಸಿದ್ಧ ಅಲ್ಲಿನ ದೇವರು ವೆಂಕಟ-ರಮಣಸ್ವಾಮಿ ಸನ್ನಿಧಿ ಇದೆ. ಚಿಕ್ಕ ತಿರುಪತಿ ಹೆಸರೂ ಹೊಂದಿದೆ. ಈ ರಥೋತ್ಸವದ ಹೈಲೈಟ್ ಎಂದರೆ ಮುತ್ತಯ್ಯನ ತಂಡದವರು ನಡೆಸಿಕೊಡುವ ಸಾಂಸ್ಕೃತಿಕ ಕಾರ್ಯಕ್ರಮವೇ ಇದಕ್ಕೆ ಸಾಕ್ಷಿ.

ಮುತ್ತಯ್ಯರು ತಮಟೆ ಜತೆಗೆ ಮೇಳದಲ್ಲಿ ಬರುವ ಇತರೆ ಚರ್ಮವಾದ್ಯಗಳಾದ ಡೋಲು, ತಾರ್ಸಿ, ನಗಾರಿ ಇವುಗಳನ್ನು ಬಾರಿಸುವುದರಲ್ಲಿ ಪ್ರವೀಣ ಮುತ್ತಯ್ಯ ತಾಲ್ಲೂಕು ಜಿಲ್ಲೆ ಮತ್ತು ರಾಜ್ಯಮಟ್ಟದ ಹಲವಾರು ತಮಟೆ ಕಲಾಮೇಳದಲ್ಲಿ ಭಾಗವಹಿಸಿ ಮರ್ಯಾದೆಗೆ ಪಾತ್ರರಾಗಿದ್ದಾರೆ. ಇವರು ಪಡೆಯುವ ಸಂಭಾವನೆ ೧೦೦೦ರಿಂದ ೨೦೦೦ ರೂ.ಗಳವರೆಗೆ ತಮಟೆಯನ್ನು ಬಾರಿಸುತ್ತಾ ನೆಲದ ಮೇಲೆ ಹಾಕುವ ನೋಟಗಳನ್ನು, ನಾಣ್ಯವನ್ನೋ ಬಾಯಿಯಿಂದ ಕಚ್ಚಿ ತೆಗೆಯುವುದು ಮುತ್ತಯ್ಯರ ಕುಶಲತೆಗೆ ಸಾಕ್ಷಿಯಾಗಿದೆ.

ನಾದಸ್ವರ ಮತ್ತು ಮುಖವೀಣೆ

೧. ಶ್ರೀಯುತ ಆರ್.ಹನುಮಂತಯ್ಯನವರು

ಹನುಮಂತಯ್ಯನವರು ೯-೧೧-೧೯೪೧ರಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಮಾದಪಟ್ಟಣದಲ್ಲಿ ಜನಿಸಿದರು. ತಂದೆ ರಂಗಯ್ಯ, ತಾಯಿ, ಗೋಪಮ್ಮನವರು ಹಿರಿಯ ಮಗನಾಗಿ ಜನ್ಮ ತಾಳಿದರು. ಇವರು ಆದಿಕರ್ನಾಟಕದ ಬಲಗೈ ಸಮುದಾಯದವರು. ೧೯೬೦ರ ಹೊತ್ತಿಗೆ ನಾದಸ್ವರ ವಾಲಗ ಕಲಿಯಲಾರಂಭಿಸಿದರು. ಹಳ್ಳಿಗಳ ಕಡೆ ಈ ಮೊವಾರಿ ಕಲೆಗೆ ಒಳ್ಳೆ ಬೆಲೆ ಇತ್ತು. ವಾದ್ಯ ಕಲಿಯುವವರಿಗೆ ತುಂಬಾ ಪ್ರೋತ್ಸಾಹ ನೀಡುತ್ತಿದ್ದರು. ಇದನ್ನು ಕಲಿತರೆ ಗೌರವ, ಮರ್ಯಾದೆ ಇದೆ. ಮದುವೆ, ದೇವರ ಕಾರ್ಯಗಳಿಗೆ ಹೋದರೆ ನಾಲ್ಕು ಕಾಸು ಸಂಪಾದನೆನೂ ಇದೆಯೆಂದು ಕಲಿತರು.

ಹನುಮಂತಯ್ಯನವರು ನಾದಸ್ವರದ ಜೊತೆಗೆ ನಾಟಕಗಳ ಜೊತೆಗೆ ಕ್ಲಾರ್‌ನೆಟ್, ಹಾರ್ಮೋನಿಯಂ, ಕೊಳಲು, ತಬಲ, ತತ್ವಪದ ಈ ರೀತಿಯಲ್ಲಿ ಬೇರೆಯವರಿಗೆ ಕಲಿಸುವಂತಹ ಕಲೆಯನ್ನು ಹೊಂದಿದ್ದರು.

ಹನುಮಂತಯ್ಯನವರು ಕಲೆಯನ್ನು ಸಮುದಾಯದ ಸಂಸ್ಕೃತಿಯ ಅಗತ್ಯ ಮತ್ತು ಮುಖ್ಯ ಕರ್ತವ್ಯವೆಂದೂ ತಿಳಿದು ಮುನ್ನಡೆಸುತ್ತಿದ್ದಾರೆ. ಇಂದಿಗೂ ಕೂಡ ಮೊವಾರಿ ಮತ್ತು ಹಾರ್ಮೋನಿಯಂ ಮೇಲೆ ಕೈಯಾಡಿಸುತ್ತ ಕಲೆಗೆ ಜೀವಾಳವಾಗಿ ನೆಲೆನಿಂತಿದ್ದಾರೆ.

೨. ಶ್ರೀಯುತ ಚಿಕ್ಕಕರುಗಯ್ಯನವರು:

ಕೊಳ್ಳೇಗಾಲ ತಾಲ್ಲೂಕಿನ ಮಣಗಳ್ಳಿ ಗ್ರಾಮದ ವಾಸಿಯಾದಂತಹ ಇವರು ಹೆಸರಾಂತ ನಾದಸ್ವರ ಕಲೆಗೆ ಹೆಸರಾಗಿದ್ದ ಮಣಗಳ್ಳಿ ಕೆಂಪಯ್ಯ ಮತ್ತು ಕೆಂಪಮ್ಮರವರ ಹಿರಿಯ ಮಗನಾಗಿ ಜನಿಸಿದರು. ಆದಿಕರ್ನಾಟಕ ಜನಾಂಗದವರು ತಂದೆಯ ಜೊತೆಯಲ್ಲಿ ನಾದಸ್ವರ ಕಲೆಯಲ್ಲಿ ಪರಿಣಿತರು. ಈ ಮೂಲಕ ತಂದೆಯನ್ನು ಮತ್ತು ಸುತ್ತಲಿನ ಕಲಾವಿದರನ್ನು ಮೆರೆಸಿ ಈ ಕಲೆಯಲ್ಲಿ ಪಾರಂಗತರಾದರು. ಇವರು "ಮಣಗಳ್ಳಿ ಕೆಂಪಯ್ಯನ ವಾದ್ಯ" ಹೆಸರಿನಿಂದಲೇ ಜಿಲ್ಲೆಯಾದ್ಯಂತ ಹೆಸರು ಗಳಿಸಿತು. ಚಿಕ್ಕಕರುಗಯ್ಯರು ಒಬ್ಬ ಅನಕ್ಷರಸ್ಥ ಹಳ್ಳಿಗಾಡಿನ ಗ್ರಾಮೀಣ ಸಾಮಾನ್ಯ ವ್ಯಕ್ತಿಯಾಗಿದ್ದರು. ಚಿಕ್ಕಕರುಗಯ್ಯನವರೇ ವಿದ್ಯಾಗುರುಗಳು, ನಾದಸ್ವರದ ಜೊತೆಗೆ ಡೋಲು, ಪಿಟೀಲು, ಹಾರ್ಮೋನಿಯಂ, ಕ್ಲಾರ್ನೆಟ್, ವೈಲಿನ್ ಮೊದಲಾದವುಗಳನ್ನು ನುಡಿಸುತ್ತಿದ್ದರು. ಇವರದು ಸಂಗೀತದ ರಂಗದ ದೈತ್ಯ ಪ್ರತಿಭೆ.

ನಾದಸ್ವರ ವಾಲಗ ಕಲೆಯನ್ನು ಚಿಕ್ಕಕರುಗಯ್ಯರು ಹೆಚ್ಚಾಗಿ ಮದುವೆಯಂತ ಶುಭಕಾರ್ಯಗಳಲ್ಲಿ ಪ್ರಸ್ತುತಪಡುಸುತ್ತಿದ್ದರು. ಇದಲ್ಲದೆ ದೇವರಪೂಜೆ ಉತ್ಸವ, ಮೆರವಣಿಗೆಗಳಲ್ಲಿ ನುಡಿಸುತ್ತಿದ್ದರು. ಇವರು ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ನಾದಸ್ವರ ವಾದ್ಯ ಡೋಲು ಕಲೆಗೆ ತಮ್ಮನ್ನು ಅರ್ಪಿಸಿಕೊಂಡ ಕಲಾವಿದ, ಕನ್ನಡಿಗರು, ತಮಿಳರು ಇಬ್ಬರಿಗೂ ಇವರು ಗುರುಗಳಾಗಿ ವಿದ್ಯೆ ಕಲಿಸಿದ್ದಾರೆ. ಎರಡು ಭಾಗಗಳಲ್ಲೂ ಇಂದಿಗೂ ಅನೇಕ ಶಿಷ್ಯರು ಇದ್ದಾರೆ.

೩. ಶ್ರೀಯುತ ಈರಯ್ಯನವರು:

ಈರಯ್ಯನವರು ಡೋಲು, ವಾದ್ಯ ನುಡಿಸುವ ಕುಟುಂಬ ಪರಿಸರದ ನಡುವೆ ಬೆಳೆದವರು. ಇವರ ತಂದೆ ಡೋಲು ನಿಂಗಯ್ಯ, ತಾಯಿ ಹೊನ್ನಮ್ಮ ಹಾಗಾಗಿ ತಂದೆಯ ಡೋಲು ಕಲೆಯನ್ನು ಹತ್ತಿರದಿಂದ ನೋಡಿದ ಇವರು ಆಯ್ದುಕೊಂಡಿದ್ದು ಡೋಲಿಗೆ ಬದಲು ವಾದ್ಯವನ್ನು ತಂದೆಯವರಿಗೆ ತಿಳಿದವರಾದ ಕುಣಗಳ್ಳಿ ರಾಚಯ್ಯನವರು ಈರಯ್ಯರ ಗುರುಗಳು, ವಾದ್ಯ ಕಲಿಯುವಾಗ ಇವರಿಗೆ ೧೮ರ ವಯಸ್ಸು ಸುಮಾರು ೨೦ನೇ ವಯಸ್ಸಿಗೆ ಸ್ವತಂತ್ರವಾಗಿ ವಾದ್ಯ ನುಡಿಸಲಾರಂಭಿಸಿದರು.

ಇವರು ಆದಿಕರ್ನಾಟಕ ಸಮುದಾಯಕ್ಕೆ ಸೇರಿದವರು. ಇವರ ಊರು ಕೊಳ್ಳೇಗಾಲ ತಾಲ್ಲೂಕಿನ ಕುಂತೂರು. ಈರಯ್ಯನವರ ವಾದ್ಯ ಡೋಲು ಸಟ್ಟು, ಕುಂತೂರು ಕುಣಿಯಾಟದ ಮಾರಿಹಬ್ಬದ ಅವಿಭಾಜ್ಯ ಅಂಗವಾಗಿತ್ತು ಎಂಬುದು ಈ ವಿವರಣೆಯ ಹಿನ್ನೆಲೆ. ವರ್ಷಾನುಗಟ್ಟಲೆ ಇವರು ಈ ಮಾರಿದೇವತೆಯ ಉತ್ಸವದಲ್ಲಿ ತನ್ನ ಸೇವೆಸಲ್ಲಿಸಿದ್ದಾರೆ. ಮಾರಿಹಬ್ಬಕ್ಕೆ ರಂಗಕುಣಿತಕ್ಕೆ ಈರಯ್ಯನ ಸಣ್ಣವಾದ್ಯ ಡೋಲು ಸಟ್ಟು ಇರಲೇಬೇಕು. ಆಗಲೇ ಅದಕ್ಕೊಂದು ಕಳೆ. ಸುತ್ತಮುತ್ತಲಿನ ಹಳ್ಳಿಗಳಲ್ಲಿ ದೇವರ ಉತ್ಸವಗಳು, ಮಾರಿಹಬ್ಬಗಳು ನಡೆದರೆ ಅಲ್ಲಿ ಈರಯ್ಯ ಸದಾ ಹೆಗಲ ಮೇಲೊಂದು ಮಡಿಸಿದ ಶಾಲನ್ನು ಎಡಬಲ ಭುಜದ ಮೇಲೆ ಇಳಿಬಿಟ್ಟು, ಶೃತಿ ಹಿಡಿದು ವಾದ್ಯ ನುಡಿಸಲಾರಂಭಿಸಿದರೆ ಸಾಕು ಸಣ್ಣ ಇಂಪಾದ ಅವರ ರಾಗಕ್ಕೆ ಯಾರಾದರೂ ಕಿವಿ ತೆರೆದು ಮನದ ಕದ ತೆರೆದು ಆಲಿಸಲೇಬೇಕು. ಈರಯ್ಯನವರು ಅಷ್ಟರಮಟ್ಟಿಗೆ ತನ್ಮಯರಾಗಿ ಕೇಳುಗರನ್ನು ತಲುಪುತ್ತಿದ್ದವರು ಮನಮುಟ್ಟುತ್ತಿದ್ದರು.

ವೀರಗಾಸೆ ನೃತ್ಯ – ವೀರಭದ್ರನ ಕುಣಿತ

೧) ಬಿ.ವಿ.ಶಿವರುದ್ರಪ್ಪ

ಚಾಮರಾಜನಗರ ಜಿಲ್ಲೆಯ ಒರಟರ ಗ್ರಾಮದಲ್ಲಿ ಜನಿಸಿದರು. ತಂದೆ ವೀರಪ್ಪ ತಾಯಿ ಬಸಮ್ಮರ ಮಗನಾಗಿ ಜನಿಸಿದರು. ಇವರು ಹೇಳುವಂತೆ ಈ ಕಲೆ ವಂಶಪಾರಂಪರ್ಯವಾಗಿ ಬಂದಿದೆ. ತಾತ, ತಂದೆ, ಅಣ್ಣಂದಿರು ಈ ಕಾಸೆ ಕಟ್ಟುವ ಕಲೆಯನ್ನು ಮಾಡುತ್ತಿದ್ದರು. ರಾಜಪೋಷಾಕಿನಲ್ಲಿ ಕಿರೀಟ ಧರಿಸಿ ಖಡ್ಗ ಹಿಡಿದು ದಪ್ಪಗಿರುವ ಮೀಸೆ ಬಿಟ್ಟು ವೈರಿ ಸಂಹಾರಕ್ಕೆ ಆರ್ಭಟಿಸುತ್ತಾ, ಓಡಾಡುತ್ತ, ದಕ್ಷಬ್ರಹ್ಮ ಸಂಹಾರ ಘಟನೆಗಳನ್ನು ಪಠಿಸುವ ಕಲೆಯೇ ವೀರಗಾಸೆ.

ವೀರಗಾಸೆ ಕುಣಿತ ವೀರಭದ್ರನ ಪ್ರಾತಿನಿಧಿಕ ಕಲೆಯಾಗಿದೆ. ಗೃಹಪ್ರವೇಶ, ದೇವರ ಉತ್ಸವ, ಬಸವ ಜಯಂತಿ, ಯಾವುದೇ ಧಾರ್ಮಿಕ ಕಾರ್ಯಕ್ರಮಗಳಿಗೆ ಇವರು ಬರುವುದು ಕಡ್ಡಾಯ. ಅದರಲ್ಲೂ ವೀರಶೈವರ ಮದುವೆಗೆ ಕಡ್ಡಾಯವೆನಿಸಿದೆ. ಇದು ತಮ್ಮ ಜನಾಂಗಕ್ಕೆ ಪಾರಂಪರಿಕವಾಗಿ ಬಂದ ಕಲೆ. ಇದು ನಮ್ಮ ಸಂಸ್ಕೃತಿ. ಆಗಾಗಿ ಇದನ್ನು ಬಿಡಲಾಗುವುದಿಲ್ಲ. ಜನರು ಕೂಡ ಪ್ರೋತ್ಸಾಹ ನೀಡುತ್ತಿದ್ದಾರೆ. ಹಾಗಾಗಿ ಈ ಕಲೆಯು ಉಳಿದುಬಂದಿದೆಯೆಂದು ಹೇಳುತ್ತಾರೆ. ಶಿವರುದ್ರಪ್ಪನವರು ವೀರಗಾಸೆ–ಯವರು ಬರಬೇಕೆಂದರೆ ಕಾರ್ಯ ಇರುವವರು ಒಂದು ಇಳ್ಯ ಕೊಟ್ಟು ಕರೀತಾರೆ, ಡೇಟು ಕೊಡುತ್ತಾರೆ. ಈ ರೀತಿಯಲ್ಲಿ ಇಂದಿಗೂ ಕೂಡ ತನ್ನ ಕಾರ್ಯನಿರ್ವಹಣೆಯಲ್ಲಿ ವೀರಗಾಸೆಯವರ ನೃತ್ಯವು ತನ್ನದೇ ಆದಂತಹ ಸಾಂಸ್ಕೃತಿಕ ಹಿನ್ನೆಲೆಯನ್ನು ನೀಡಿದೆ.

೨) ಶ್ರೀ ಚಿನ್ನಸ್ವಾಮಿಯವರು

ಇವರು ಕೊಳ್ಳೇಗಾಲದ ಸಮೀಪದ ಮುಡಿಗುಂಡದವರು. ಮೂಲತಃ ಚಾಮರಾಜನಗರ ತಾಲ್ಲೂಕಿನ ಕಸ್ತೂರು ಗ್ರಾಮದವರು. ತಂದೆ ನಂಜುಂಡಸ್ವಾಮಿ, ತಾಯಿ ದೇವಮ್ಮನವರ ಮಗನಾಗಿ ಜನಿಸಿದರು. ಈ ಸಂದರ್ಭದಲ್ಲಿ ೬೨ನೇ ವಯಸ್ಸಿಗೆ ಅವರು ಕಾಲಿಟ್ಟಿದ್ದಾರೆ.

ವೀರಭದ್ರನ ಕುಣಿತವನ್ನು ಕಲಿತದ್ದು. ಇವರು ತಾತ ಮತ್ತು ತಂದೆಯವರಿಂದ ಅವರೇ ಇವರಿಗೆ ಗುರುಗಳು. ಬಾಲ್ಯದಿಂದಲೇ ನೋಡುತ್ತಾ ತಾವು ಆ ಕಲೆಯನ್ನು ಕಲಿತವರು. ಇವರು ೧೨ನೇ ವಯಸ್ಸಿಗೆ ಲಿಂಗಧಾರಣೆ ಮಾಡಿಸಿಕೊಂಡು ಅದರ ಜೊತೆಯಲ್ಲಿ ವೀರಗಾಸೆ ಕುಣಿತದ ಅಭ್ಯಾಸ ಕೂಡ ಆಗುತ್ತದೆ. ಸ್ವತಃ ವೀರಭದ್ರಸ್ವಾಮಿಯ ಒಕ್ಕಲಿನವರಾದ ಚಿನ್ನಸ್ವಾಮಿಗಳು ಈ ದೇವತೆ ಮತ್ತು ಈ ಕುಣಿತದ ಬಗ್ಗೆ ಅಪಾರ ಭಕ್ತಿ ಮತ್ತು ಗೌರವ ಭಾವನೆ ಹೊಂದಿದ್ದಾರೆ.

ವೀರಭದ್ರ – ದತ್ತಬ್ರಹ್ಮನನ್ನು ಸಂಹರಿಸಲು ಹೇಗೆ ವೇಷಧರಿಸಿದ್ದನೊ 'ಕಾಸೆ" ಕಟ್ಟುವ ಕಲಾವಿದ ಸಹ ಅದೇ ರೀತಿ ವೇಷಧರಿಸಿ ಕುಣಿಯುತ್ತಾನೆ. ತಮ್ಮ 'ಕಾಸೆ ಮತ್ತು ವೇಷಧರಿಸುವ ರೀತಿಯ ಬಗ್ಗೆ ಹೀಗೆ ವಿವರಿಸುತ್ತಾರೆ. ಅದೇ ರೀತಿಯಲ್ಲಿ ವೀರಭದ್ರನ ಕುಣಿತ ಮತ್ತು ವೀರಗಾಸೆ ಕಲೆ ಪರೋಕ್ಷವಾಗಿ ಶೈವ ಮತ್ತು ವೀರಶೈವ ಪಂಥದ ಪ್ರಚಾರ ಕಲೆಯೂ ಆಗಿದೆ. ವೀರಶೈವ ಲಿಂಗಾಯಿತರು ಮಾಡುವ ಮದುವೆ ಸಮಾರಂಭಗಳಿಗೆ ಪ್ರಸ್ತುತವೆಂದು ಹೇಳುತ್ತಾರೆ.

ಸೂತ್ರದ ಗೊಂಬೆಯಾಟ ಕಲೆ:

೧) ಶ್ರೀಯುತ ಶಂಕರಪ್ಪ:

ಶಂಕರಪ್ಪನವರು ಚಾಮರಾಜನಗರ ತಾಲ್ಲೂಕಿನ ಯುಡಿಯೂರು ಗ್ರಾಮದವರು. ಇವರು ತಂದೆ ಬಸಪ್ಪ, ತಾಯಿ ಪಾರ್ವತಿ ಮಗನಾಗಿ ಜನಿಸಿದರು. ಇವರು ವೀರಶೈವ ಸಮುದಾಯದವರು. ಮೂಲತಃ ಕೃಷಿ ಕುಟುಂಬದವರಾದ ಇವರು ಬಿಡುವಿನ ದಿನಗಳಲ್ಲಿ ಕಲೆಯನ್ನು ಪ್ರದರ್ಶನ ಮಾಡುವುದನ್ನು ರೂಢಿಸಿಕೊಂಡರು.

ಸುಮಾರು ಸೂತ್ರದ ಗೊಂಬೆಯ ರಂಗಕಲೆಗಳಲ್ಲಿ ಸ್ಥಾನಪಡೆದಿದ್ದು ಸುಮಾರು ೧೨ ಜನ ಕಲಾವಿದರು ಸೇರಿ ಈ ಕಲೆಯನ್ನು ಮಾಡುವುದಾಗಿ ಹೇಳಿದರು. ಗೊಂಬೆಗಳ ಮೂಲಕ ಪೌರಾಣಿಕ ಹಾಗೂ ಐತಿಹಾಸಿಕ ಪ್ರಸಂಗಗಳನ್ನು ಪ್ರದರ್ಶಿಸುತ್ತಾ

ಮನರಂಜನೆಯ ಜತೆಗೆ ನೀತಿಬೋಧನೆಯನ್ನು ಈ ಕಲೆಯ ಮೂಲಕ ನೀಡುತ್ತಿದ್ದರು. ಶಂಕರಪ್ಪ ಇದಕ್ಕಾಗಿ "ಶ್ರೀ ಶಂಕರೇಶ್ವರ ಯಕ್ಷಗಾನ ಕಲಾಸಂಘ" ಮಾಡಿದ್ದರು.

ಕೃಷಿ ಕಂಬಳ ಕೂಲಿಮಾಡಿ ಬೆಳಿಗ್ಗೆಯಿಂದ ಸಂಜೆಯವರೆವಿಗೂ ದುಡಿದು ದಣಿದ ಸಮುದಾಯಗಳಿಗೆ ರಾತ್ರಿ ವೇಳೆ ಮನರಂಜನೆ ಬೇಕಿತ್ತು. ಅಂತಹ ಸಂದರ್ಭದಲ್ಲಿ ಗೊಂಬೆಯಾಟದ ಪ್ರಸ್ತುತಪಡಿಸುತ್ತಿದ್ದರು. ಪರ ಊರಿಗೆ ಎತ್ತಿನ ಗಾಡಿಯಲ್ಲಿ ಹೋಗಿ ಪ್ರದರ್ಶನ ನೀಡುತ್ತಿದ್ದರು. ಶಂಕರಪ್ಪನವರು ಹೇಳುವಂತೆ ಈ ಕಲೆ ಒಂದು ಪುಟ್ಟ ರಂಗ ಪ್ರಪಂಚ. ತರಬೇತಿ ಶಾಲೆಯಂತೆ ತುಂಬಾ ಸಿದ್ದತೆಬೇಕು. ಒಂದು ನಾಟಕ ಕಂಪೆನಿ ನಡೆಸಿದಂತೆ ಎನ್ನುತ್ತಾರೆ. ರಾಮಾಯಣ, ಮಹಾಭಾರತ, ಐರಾವತ, ಹರಿಶ್ಚಂದ್ರ, ಯಕ್ಷಗಾನ ಮೊದಲಾದ ಪ್ರಸಂಗ ಮಾಡುತ್ತಿದ್ದರು. ಚಾಮರಾಜನಗರಜಿಲ್ಲೆಯ ಕಲೆಯ ಹರಿಕಾರವೆನ್ನಬಹುದು.

೨) ಶ್ರೀಯುತ ಬಂಗಾರಚಾರ್‌ರವರು

ಬಂಗಾರ್‌ಚಾರ್‌ರವರು ಗುಂಡ್ಲುಪೇಟೆ ತಾಲ್ಲೂಕಿನ ಕಬ್ಬಳ್ಳಿ ಗ್ರಾಮಕ್ಕೆ ಸೇರಿದವರು. ತಂದೆ ತಿಮ್ಮಾಚಾರಿ ತಾಯಿ ಗೋಪಮ್ಮರವರ ಮಗನಾಗಿ ಜನಿಸಿದರು. ಇವರು ವಿಶ್ವಕರ್ಮ ಸಮುದಾಯದವರು. ಇವರ ಮುಖ್ಯ ವೃತ್ತಿ ಮರಗೆಲಸ. ಅದೇ ಜೀವನದ ಆಧಾರ. ಈ ಕಲೆಯು ವಂಶಪಾರಂಪರ್ಯವಾಗಿ ಬಂದಿದೆ. ಐತಿಹಾಸಿಕವಾಗಿ ಕೂಡ ಗಮನಿಸಿದರೆ ಈ ಕಲೆ ಇಢೀ ವಿಶ್ವಕರ್ಮ ಜನಾಂಗದ ಕುಲಕಸುಬಾಗಿ ಬಂದದ್ದು. ಗೊಂಬೆಯಾಟ ಪ್ರದರ್ಶನ ವರ್ಷಪೂರ್ತಿ ಇರುವುದಿಲ್ಲ. ಹಾಗಾಗಿ ಇದು ಅವರಿಗೆ ಉಪಕಸುಬಾಗಿದೆ.

ಬಂಗಾರಚಾರರು ಜಿಲ್ಲೆಯಲ್ಲಿರುವ ಅಪರೂಪದ ಸೂತ್ರ ಗೊಂಬೆಯಾಟದ ಹಿರಿಯ ಕಲಾವಿದರು. ಅವರು ಇಂದಿಗೂ ಸುಸ್ಥಿತಿಯಲ್ಲಿರುವ ಪ್ರದರ್ಶನಕ್ಕೆ ಸಿದ್ದವಿರುವ ಸೂತ್ರದ ಗೊಂಬೆಯನ್ನು ಇಟ್ಟುಕೊಂಡು ಕಲಾಪ್ರದರ್ಶನ ಮಾಡುತ್ತಿದ್ದಾರೆ.

ಜಾನಪದ ಕಲೆ ಮತ್ತು ಕಲಾವಿದನನ್ನು ಕುರಿತು ಹುಡುಕಾಡುವುದು ಅಧ್ಯಯನ ಮಾಡುವುದು, ನಮ್ಮ ಪರಂಪರೆಯ ಪುನರಾವಲೋಕನ ಮಾಡುವ ಹವ್ಯಾಸ ಕಬ್ಬಳ್ಳಿಯ ಬಂಗಾರಚಾರರದು. ಅವರ ಮನೆ ಗ್ಯಾಲರಿಯನ್ನು ನೋಡಿದರೆ ಬಣ್ಣಬಣ್ಣದ, ರಂಗುರಂಗಿನ ಲೋಕದ ಕಲಾಪರಿಕರಗಳು ನೋಡಸಿಗುತ್ತವೆ. ಇದನ್ನು ಗಮನಿಸಿದಾಗ ಅವರ ಮನೆ ಪುಟ್ಟ ಕಲಾಗ್ಯಾಲರಿಯಂತೆ ಭಾಸವಾಗುತ್ತದೆ.

ತತ್ವಪದಕಾರರು

೧. ನಾರದ ಹಿಂಡಯ್ಯ:

ನಾರದ ಹಿಂಡಯ್ಯನವರು ಯಳಂದೂರು ತಾಲ್ಲೂಕಿನ ಮಾಂಬಳ್ಳಿ ಗ್ರಾಮದಲ್ಲಿ ಜನಿಸಿದರು. ತಂದೆ ನಂಜಯ್ಯ ತಾಯಿ ಬೆಳಗಮ್ಮರ ಮಗನಾಗಿ ತನ್ನದೇ ಆದಂತಹ ವೈಶಿಷ್ಟ್ಯತೆಯ ಮೂಲಕ ಪ್ರಚಾರಕ್ಕೆ ಬಂದವರು. ತಂದೆತಾಯಿ ಇಬ್ಬರಿಗೂ ಗುರುದೀಕ್ಷೆಯಾಗಿದ್ದು ಅವರ ಹಾದಿಯಲ್ಲಿ ನಡೆದಂತಹ ನಾರದ ಹಿಂಡಯ್ಯನವರು ಗುರುಬೋಧನೆ ದೀಕ್ಷೆ ಪಡೆದರು. ಇವರಿಗೆ ಯಳಂದೂರು ತಾಲ್ಲೂಕು ಯರಗಂಬಳ್ಳಿ ಮಠದ ಪೀರ್‌ಸಿಂಗರು ಗುರುಬೋಧನೆ ದೀಕ್ಷೆ ನೀಡಿದರು. ಗುರುಪೀರ್‌ಸಿಂಗ್ ಪೊಲೀಸ್ ಇಲಾಖೆಯಲ್ಲಿ ದಫೆದಾರ್ ಆಗಿದ್ದು ಈ ಪಂಥದ ಪ್ರಭಾವಕ್ಕೆ ಒಳಗಾಗಿ ತತ್ವಗಳಿಗೆ ಮಾರುಹೋದರು. ಬಿಳಿಗಿರಿರಂಗನ ಬೆಟ್ಟದಲ್ಲಿ ಸಿಂಗರು ವೈ.ಕೆ.ಮೋಳೆಯ ಶಿವಪ್ಪಸ್ವಾಮಿ ಗುರುಗಳಿಂದ ದೀಕ್ಷೆ ಪಡೆದು ತಾವೆ ಗುರುಸ್ಥಾನಕ್ಕೆ ಒಂದು ಯರಗಂಬಳ್ಳಿ ಮಠಕ್ಕೆ ಗುರುವಾದರು. ಇವರು ಎಂಥವರೆಂದರೆ ಸರ್ಪದ ಜತೆ ಸರಸ ಆಡುತ್ತಾ ಇದ್ದವರಂತೆ ಈ ರೀತಿಯಲ್ಲಿ ನಾರದ ಹಿಂಡಯ್ಯನವರು ಶಿಷ್ಯರಾದರು.

ತತ್ವಪದಕಾರರಾದ ಹಿಂಡಯ್ಯರನ್ನು ನಾರದ ಹಿಂಡಯ್ಯ ಅಂದ್ರೆನೆ ಗೊತ್ತಾಗದು. ಮಾಂಬಳ್ಳಿ ಊರೊಳಗೆ ತುಂಬ ಜನ ಹಿಂಡಯ್ಯ ಅನ್ನುವ ಹೆಸರಿನವರಿರುವುದರಿಂದ ಹೀಗೆ ಕರೆದರೇನೇ ಇಲ್ಲದಿದ್ದರೆ ಯಾವ ಹಿಂಡಯ್ಯನೋ ಗೊತ್ತಿಲ್ಲ ಅಂತಾರೆ. ತಮ್ಮ ೨೦ನೇ ವಯಸ್ಸಿನಲ್ಲಿ ನಾಟಕರಂಗ ಪ್ರವೇಶಿಸಿ ಮೊದಲ ಸಲ ಬಣ್ಣ ಹಚ್ಚಿ ನಾರದನ ಪಾರ್ಟು ಮಾಡಿದರು. ಒಳ್ಳೆಯ ಧ್ವನಿ, ರಾಗ ಇದ್ದು ಯಾವಾಗ ನಾಟಕ ಮಾಡಿದರೂ ನಾರದನ ಪಾತ್ರ ಕಟ್ಟಿಟ್ಟಬುತ್ತಿ ಇವರಿಗೆ. ತಮ್ಮ ವಯಸ್ಸಿನ ಕಾಲದಲ್ಲಿ ಹದಿನಾರು ಬಾರಿ ಬಣ್ಣ ಹಚ್ಚಿದ್ದಾರೆ. ಹದಿನಾರು ನಾಟಕ ಆಡಿದ್ದಾರೆ. ಹದಿನಾರು ಸಲನೂ ನಾರದನ ಪಾತ್ರವನ್ನೆ ಮಾಡಿದ್ದಾರೆ. ಅವರೇ ಹೇಳುವಂತೆ ನಾರದನ ಪಾತ್ರದಲ್ಲಿ ವಿಜೃಂಭಿಸಿದ್ದಕ್ಕೆ ಅವರಿಗೆ ಈ ಹೆಸರು ಅಂಟಿಕೊಂಡಿದೆ.

ಈ ರೀತಿಯಲ್ಲಿ ನಾಟಕದ ಹಾಡು ಹೇಳುತ್ತಾ ಹೇಳುತ್ತಾ ತತ್ವಪದ ಭಜನೆ ಹಾಡುವುದನ್ನು ಆರಂಭಿಸಿದರು. ಆಗ ದೀಕ್ಷೆ ಆಗಿರಲಿಲ್ಲ. ನಂತರ ದೀಕ್ಷೆ ಪಡೆದು ಇಲ್ಲಿಯತನಕ ಸುಮಾರು ೪೫ ವರ್ಷಗಳ ಕಾಲ ತತ್ವವನ್ನು ಹಾಡುತ್ತಾ ಪ್ರಚಾರ ಮಾಡುತ್ತಾ ಬಂದಿದ್ದಾರೆ. ಹಾರ್ಮೋನಿಯಂ ಅಥವಾ ಏಕನಾದ ನುಡಿಸುತ್ತಾ ಇಂದಿಗೂ ತತ್ವಪದ ಹಾಡುತ್ತಾರೆ ಹಿಂಡಯ್ಯ. ತತ್ವಪದಗಳನ್ನು ತತ್ವಗಳಾಗಿಯೇ ವ್ಯಕ್ತಿ ಅಥವಾ ಸಮಾಜ ಅಳವಡಿಸಿಕೊಳ್ಳಬೇಕು ಎಂಬುದು ಹಿಂಡಯ್ಯನವರ ಅಭಿಮತ. ಹಾಗೆ

ಅಳವಡಿಸಿಕೊಂಡರೆ ಎಷ್ಟು ಒಳ್ಳೆಯದು ಎಂಬುದಕ್ಕೆ ಹಿಂಡಯ್ಯ ತಮ್ಮನ್ನೇ ಉದಾಹರಣೆಯಾಗಿಟ್ಟು ತಮ್ಮ ಬದುಕಿನಲ್ಲಿ ನಡೆದ ಘಟನೆಯನ್ನು ಬಿಚ್ಚಿಡುತ್ತಾರೆ.

ಹಿಂಡಯ್ಯನವರು ತಮ್ಮ ಹೆಂಡತಿಯನ್ನೊಳಗೊಂಡಂತೆ ಐದಾರು ಜನ ತಮಿಳುನಾಡಿನ ಊಟಿ, ಗೂಡ್ಲೂರು, ಹೊನ್ನೂರು, ಕೆಸ್ತೂರು, ಯಳಂದೂರು, ದಡದಳ್ಳಿ, ದಿಡ್ಡಿಪುರ ಹೀಗೆ ಜಿಲ್ಲೆ ತಾಲ್ಲೂಕಿನಾದ್ಯಂತ ತತ್ವ ಹೇಳುತ್ತಾ ತಿರುಗಾಡಿದ್ದಾರೆ. ಸಾವು, ತಿಥಿ, ಶಿವರಾತ್ರಿ ಹೀಗೆ ವಿಶೇಷ ದಿನಗಳಲ್ಲಿ ಭಕ್ತರು ಕರೆಸಿದಾಗ ಹೋಗಿ ಹಾಡುವುದು ಪದ್ಧತಿ. ಇವರು ಸುಮಾರು ಇನ್ನೂರು ತತ್ವವನ್ನು ಹಾಡುತ್ತಾರೆ. ತತ್ವ ಪ್ರಚಾರ ಮಾಡುವುದು ತಮ್ಮ ಕರ್ತವ್ಯ ಅಂತ ಭಾವಿಸಿದ್ದರು.

೨. ಬಿ.ಕೆ.ರಂಗಯ್ಯನವರು

ಬಿ.ಕೆ.ರಂಗಯ್ಯನವರು ತತ್ವಪದಕಾರರಾಗಿ ತಮ್ಮದೇ ಆದಂತಹ ವೈಶಿಷ್ಟ್ಯತೆಯನ್ನು ಚಾಮರಾಜನಗರ ಜಿಲ್ಲೆಗೆ ನೀಡಿದ್ದಾರೆ. ಇವರು ಯಳಂದೂರು ತಾಲ್ಲೂಕಿನ ಹೊನ್ನೂರು ಗ್ರಾಮದ ಆದಿಕರ್ನಾಟಕ ಸಮುದಾಯಕ್ಕೆ ಸೇರಿದವರು. ಕೆಂಚಯ್ಯ, ಪುಟ್ಟಬಸಮ್ಮ ದಂಪತಿಗಳ ನಾಲ್ಕನೆಯ ಮಗನಾಗಿ ಜನಿಸಿದರು.

ರಂಗಯ್ಯರ ಕುಟುಂಬ ತಾತ ಮುತ್ತಾತನ ಕಾಲದಿಂದಲೂ ಗುರು ಬೋಧನೆ ಪಡೆದ ಮನೆತನ. ಇವರ ತಂದೆತಾಯಿಗಳೂ ಇದೇ ಹಾದಿಯಲ್ಲಿ ನಡೆದವರು. ತತ್ವಪದಕಾರರಲ್ಲಿ ಹಲವರು ತಾವು ತಮ್ಮ ತತ್ವಕ್ಕನುಗುಣವಾಗಿ ಬದುಕುತ್ತಾರೆ. ಹನ್ನೆರಡನೆ ಶತಮಾನದ ವಚನ ಚಳುವಳಿಯ ಮುಂದುವರಿಕೆಯಾಗಿ ಕಾಣುವ ಈ ಗುರು ಪಂಥ ಒಂದು ವಿಶಿಷ್ಟ ಸಂಸ್ಕೃತಿಯಾಗಿದೆ.

ರಂಗಯ್ಯನವರು ದೊಡ್ಡ ಮೋಳೆ ಬಸಪ್ಪ ಸ್ವಾಮಿಗಳಿಂದ ತಮ್ಮ ಇಪ್ಪತ್ತೈದು–ಮೂವತ್ತನೆ ವಯಸ್ಸಿಗೆ ದೀಕ್ಷೆ ಪಡೆದರು. ಗುರುಬೋಧನೆ ಪಡೆಯುವ ಮೊದಲೆ ತಮ್ಮ ಇಪ್ಪತ್ತನೇ ವಯಸ್ಸಿನಿಂದಲೇ ರಂಗಯ್ಯ ಸೊಗಸಾಗಿ ತತ್ವ ಹಾಡುತ್ತಿದ್ದರು. ರಂಗಯ್ಯರು ಕಂಬಳ ಕೂಲಿ ಕೆಲಸ ಮಾಡುತ್ತಾರೆ. ಹೆಂಡತಿ ಮಕ್ಕಳು ಅಂತ ಸಂಸಾರ ಸಾಕುವ ಜವಾಬ್ದಾರಿ ಇದೆ. ಅಕ್ಷರ ಸಹ ತೆಂಗಿನ ಗರಿಗಳ ಮಟ್ಟಾಳೆ ಗುಡಿಸಲಲ್ಲಿ ವಾಸಿಸುತ್ತಾರೆ. ಅದೇ ತತ್ವ, ಆಧ್ಯಾತ್ಮದ ರಾಗ ಸುಧೆಗೆ ಕೊರತೆ ಇಲ್ಲ. ಇವರು ತಮ್ಮ ಊರುಕೇರಿ–ಯವರೇ ಆದ ರಂಗರಾಮಯ್ಯ, ಕುಂಡುಮಾದಯ್ಯವೆಂಬ ಸಹಗಾಯಕರನ್ನು ಸೇರಿಸಿ–ಕೊಂಡು ತಮ್ಮದೇ ತಂಡ ಮಾಡಿಕೊಂಡು ವೃತ್ತಿಗಾಯಕರಾಗಿ ಹಾಡಲು ಹೋಗುತ್ತಾರೆ. ತತ್ವ ಹಾಡುವುದು ಇವರ ವೃತ್ತಿಯಲ್ಲಿ ಒಂದು.

ಇವರು ಹರಿಭಕ್ತಸಾರ, ಕನಕದಾಸ, ಪುರಂದರದಾಸ, ಕಬೀರ್, ನಾಗಲಿಂಗ-ಸ್ವಾಮಿ ಮೊದಲಾದವರ ತತ್ವವನ್ನು ಹಾಡುತ್ತಾರೆ. ಕನ್ನಡ ಸಂಸ್ಕೃತಿ ಇಲಾಖೆ ಇವರನ್ನು ಗುರುತಿಸಿ ಕಾರ್ಯಕ್ರಮ ಕೊಡುತ್ತಿದೆ. ಇವರು ಪ್ರತಿತಿಂಗಳು ಸರ್ಕಾರದಿಂದ ಐದುನೂರು ರೂಪಾಯಿ ಮಾಸಾಶನ ಪಡೆಯುತ್ತಿದ್ದಾರೆ. ಅದೇ ಜೀವನಕ್ಕೇ ಆಧಾರ.

ವೀರಶೈವ ಲಿಂಗಾಯಿತ ಶರಣ ಸಂಸ್ಕೃತಿ ಸಂಪ್ರದಾಯವನ್ನು ಅನುಸರಿಸುವ ಗುರುಮಕ್ಕಳು ತತ್ವವನ್ನು ಹಾಡುತ್ತಾ ಸಾತ್ವಿಕ ಜೀವನ ನಡೆಸುತ್ತಾರೆ. ರಂಗಯ್ಯನವರು ಒಬ್ಬ ಸಾಮಾನ್ಯರಾಗಿದ್ದರೂ ಆಚಾರವಂತರು. ಬಡತನ, ಸಾಮಾಜಿಕ, ಅಸಮಾನತೆ ನಡುವೆಯು ತತ್ವಗಳನ್ನು ಹಾಡುತ್ತಾ ಬದುಕನ್ನು ಉನ್ನತಿಯತ್ತ ಸಾಗಿಸುತ್ತಿರುವ ಕಲಾವಿದ.

ಗಾರುಡಿಬೊಂಬೆ ಕುಣಿತ:

ಶ್ರೀಯುತ ನಿಂಗಾಚಾರ್‌ರವರು:

ಪ್ರಸ್ತುತ ನಿಂಗಾಚಾರರು ಗಾರುಡಿಗೊಂಬೆ ತಯಾರಕರು ಮತ್ತು ಕುಣಿತಬಲ್ಲ ಕಲಾವಿದರು. ಗುಂಡ್ಲುಪೇಟೆ ತಾಲ್ಲೂಕಿನ ಬನ್ನಿತಾಳಪುರ ಗ್ರಾಮದ ಇವರು ವಿಶ್ವಕರ್ಮ ಆಚಾರಿ ಸಮುದಾಯಕ್ಕೆ ಸೇರಿದವರು. ಇವರ ತಂದೆ ಸಿಂಗಾಚಾರಿ, ತಾಯಿ ಲಕ್ಷಮ್ಮ, ಹೆಂಡತಿ ಜಾನಕಮ್ಮ ಇವರಿಗೆ ನಾಲ್ಕು ಜನ ಮಕ್ಕಳಿದ್ದಾರೆ.

ನಿಂಗಾಚಾರರು ಆಚಾರಿಗಳಾಗಿದ್ದು ಚಿನ್ನಬೆಳ್ಳಿ ಕೆಲಸವನ್ನು ಮುಖ್ಯ ವ್ಯಕ್ತಿಯಾಗಿ ಮಾಡುತ್ತಾರೆ. ಅಲ್ಪಸ್ವಲ್ಪ ಜಮೀನಿದ್ದು ಕೃಷಿಯಲ್ಲಿ ನಿರತರಾಗಿದ್ದಾರೆ. ಗಾರುಡಿ ಗೊಂಬೆಗಳನ್ನು ತಯಾರಿಸುವುದು ಮತ್ತು ಕುಣಿಯುವುದು ಇವರ ಹವ್ಯಾಸ. ಒಂದು ಕಲೆ ಇರಬೇಕು. ಊರಿಗೂ, ಸಮುದಾಯಕ್ಕೂ ಒಂದು ಗೌರವ ಮರ್ಯಾದೆ ಇರುತ್ತೆ ಎಂದು ಈ ಕಲೆಯನ್ನು ರೂಢಿಸಿಕೊಂಡುದಾಗಿ ನಿಂಗಾಚಾರರು ಹೇಳುತ್ತಾರೆ. ಇವರು ಒಬ್ಬ ನಿರ್ದಿಷ್ಟ ಗುರುಗಳ ಬಳಿ ಇದನ್ನು ಕಲಿತಿಲ್ಲ. ಹೀಗೆ ನೋಡುತ್ತಾ, ಕೇಳುತ್ತಾ, ಸ್ವತಃ ಮಾಡುತ್ತಾ ಕಲೆ ಕರಗತವಾಗಿದೆ. ತಮ್ಮ ಇಪ್ಪತ್ತೈದು ಮೂವತ್ತನೆ ವಯಸ್ಸಿನಲ್ಲಿ ಈ ಗೊಂಬೆಗಳ ನಿರ್ಮಾಣ ಕಲೆಯನ್ನು ಕಲಿತು ಇಂದಿನವರೆಗೂ ಮುಂದುವರೆಸಿದ್ದಾರೆ. ಇದೇ ಮುಖ್ಯ ವೃತ್ತಿ ಏನಲ್ಲ. ಒಂದು ಉಪಕಸುಬು ಮತ್ತು ಕಲೆ.

ಇಬ್ಬರು ಹುಲಿ ವೇಷದವರು. ಒಬ್ಬ ಶಿವ ಒಬ್ಬ ಪಾರ್ವತಿ, ಒಬ್ಬ ಹನುಮಂತ. ಈ ಐವರ ತಂಡ ಒಂದಾದರೆ ಬೃಹತ್ ಒಂದು ಗಂಡು ಒಂದು ಹೆಣ್ಣಿನ ಗಾರುಡಿ ಗೊಂಬೆ ಆಕೃತಿಗಳು ಇನ್ನೊಂದು ತಂಡ ಮಾಡಿ ಗಾರುಡಿಗೊಂಬೆ ಕುಣಿತವನ್ನು ಹಿಮ್ಮೇಳದ ವಾದ್ಯಗಳ ಮೂಲಕ ಕಾರ್ಯಕ್ರಮ ನಡೆಸುತ್ತಾರೆ. ನಿಂಗಾಚಾರರು ಹೀಗೆ

ಗಾರುಡಿಗೊಂಬೆಗಳನ್ನು, ಗೊಂಬೆಗಳ ಮುಖದ ಆಕೃತಿಗಳನ್ನು ತಯಾರಿಸುತ್ತಾರೆ. ಈ ಗೊಂಬೆಗಳನ್ನು ಮನುಷ್ಯ ತಲೆಯ ಆಕೃತಿಗಳನ್ನು ಧರಿಸಿ ಕುಣಿಯುವ ಕಲೆಯನ್ನು ಇತರರಿಗೆ ಕಲಿಸುತ್ತಾರೆ. ಹೀಗೆ ಕಲಿತ ಕಲಾವಿದರು ಈ ಆಕೃತಿಯ ವೇಷಗಳನ್ನು ಧರಿಸಿ ಗ್ರಾಮದ ಹಬ್ಬಗಳು, ಜಾತ್ರೆಗಳು, ಉತ್ಸವ ಮೆರವಣಿಗೆಗಳ ಸಂದರ್ಭದಲ್ಲಿ ಪ್ರದರ್ಶನ ಮಾಡುತ್ತಾರೆ. ಇತ್ತೀಚೆಗೆ ಗೌರಿ-ಗಣೇಶ ಹಬ್ಬ, ಯುಗಾದಿಹಬ್ಬ, ಮಾರಿಹಬ್ಬ, ಬಸವಜಯಂತಿ, ಸಿದ್ದಪ್ಪಾಜಿಕೊಂಡ, ಜಾನಪದ ಜಾತ್ರೆ, ಸಂಸ್ಕೃತಿ ದಿಬ್ಬಣ, ಸರ್ಕಾರಿ ಕಾರ್ಯಕ್ರಮ ಮೊದಲಾದವುಗಳಲ್ಲಿ ಗಾರುಡಿಗೊಂಬೆ ಚಾಲ್ತಿಗೆ ಬಂದಿದೆ. ಬನ್ನಿತಾಳುಪುರದಲ್ಲಿ ಬಹುತೇಕ ನಿಂಗಾಚಾರರು ತಯಾರಿಸುವ ಗೊಂಬೆಗಳನ್ನು ಧರಿಸಿ ಕುಣಿಯುವವರು ಉಪ್ಪಾರ ಸಮುದಾಯದವರಾಗಿದ್ದಾರೆ.

ಬನ್ನಿತಾಳಪುರದ ನಿಂಗಾಚಾರರು ಸ್ವತಃ ಈ ಗೊಂಬೆಗಳನ್ನು ತಯಾರಿಸುತ್ತಾ ತಾವೇ ಅಭಿನಯಿಸುತ್ತಾ ಇತರರಿಗೆ ತರಬೇತಿ ಕೊಡುತ್ತಾ ಈ ಕಲೆಯನ್ನು ಪೋಷಿಸುತ್ತಾ ಬಂದಿದ್ದಾರೆ. ಇಂದು ಈ ಕಲೆಯನ್ನು ಪ್ರಸ್ತುತಪಡಿಸಲು, ಬೆಳೆಸಲು ಸಹಾಯ-ವಾಗುವಂತೆ ಇವರು "ಶ್ರೀ ಮಾದೇಶ್ವರ ಯುವಕ ಕಲಾ ಸಂಘ" ಎಂಬ ಒಂದು ಸಂಘವನ್ನು ರಚಿಸಿದ್ದಾರೆ. ಹೀಗೆ ನಿಂಗಾಚಾರರು ಕೃಷಿ ನಿರತರಾಗಿ ತಮ್ಮ ಕುಲ ಕಸುಬಾಗಿ ಅಕ್ಕಸಾಲಿಗ ವೃತ್ತಿಯನ್ನು ಮಾಡುತ್ತಾ ಈ ಕಲೆಯನ್ನು ಉಳಿಸಿದ್ದಾರೆ. ಜನರನ್ನು ಖುಷಿಪಡಿಸುವ ಉದ್ದೇಶ ಮಾತ್ರವನ್ನು ಇಟ್ಟುಕೊಂಡರೂ ಒಂದು ಜಾನಪದ ಕಲೆಯನ್ನು ಉಳಿಸುವಲ್ಲಿ ಇವರ ಪ್ರಯತ್ನ ಮೆಚ್ಚುವಂತದ್ದು. ಸಮಾಜ ಮತ್ತು ಸರ್ಕಾರ ಇವರನ್ನು ಗುರುತಿಸಿ, ಸನ್ಮಾನ ಮಾಡಿದರೆ ಈ ಕಲೆಯ ವಿಸ್ತಾರವನ್ನು ಹೆಚ್ಚಿಸಬಹುದೆಂದು ನಮ್ಮ ಆಶಯ.

ಅಧ್ಯಾಯ – ೫

ಜನಪದ ಕಲೆಗಳು ಮತ್ತು ಜಾಗತೀಕರಣ

ಜನಪದ ಕಲೆಗಳು ನಮ್ಮ ಸಂಸ್ಕೃತಿಯ ಜೀವಾಳ. ತನ್ನದೇ ಆದಂತಹ ತೋಲಿನ ತೆಕ್ಕೆಯಲ್ಲಿ ಸಾಂಸ್ಕೃತಿಕವಾಗಿ ಪ್ರಪಂಚದಾದ್ಯಂತ ಹರಡಿಕೊಂಡು ತನ್ನ ವಿಸ್ತಾರವಾದ ಲೋಕವನ್ನೇ ಸೃಷ್ಟಿಮಾಡಿಕೊಂಡಿರುವುದು ನಮಗೆ ತಿಳಿಯದ ವಿಷಯವೇನಲ್ಲ.

ಇಂದಿನ ಆಧುನಿಕತೆಯಲ್ಲಿ ತಲ್ಲೀನತೆಯಾಗಿರುವ ಸಮಾಜ ಮತ್ತು ಜನಸಮೂಹವು ಆಧುನಿಕತೆಯ ಮೆರಗಿನಲ್ಲಿ ನಮ್ಮ ಸಂಸ್ಕೃತಿಯ ರೂಪವನ್ನು ಬದಲಾವಣೆ ಮಾಡಿ ಜಾಗತೀಕರಣದ ಸವಿಯನ್ನು ಸವಿಯಲು ಹವಣಿಸುತ್ತಿರುವುದು. ಈಗಿನ ಪರಿಸ್ಥಿತಿಯನ್ನು ನಾವು ಅವಲೋಕನ ಮಾಡಬೇಕಾಗಿದೆ. ಇಂತಹ ಸಂಸ್ಕೃತಿಯ ನೆಲೆನಾಡಿನ ಕರ್ನಾಟಕವು ಜಾನಪದ ಪರಂಪರೆಯಲ್ಲಿ ತನ್ನದೇ ಆದಂತಹ ಮೌಖಿಕ ಕಥನದ ಮೂಲಕ ತನ್ನ ದೃಢವಾದ ಹೆಜ್ಜೆಯನ್ನು ಇಟ್ಟಿದೆ. ಈ ಸಂದರ್ಭದಲ್ಲಿ ನಾವು ವಿದೇಶಿಯರು ದಾಸಕ್ಕೆ ವ್ಯಾಮೋಹಕ್ಕೆ ಆಧುನಿಕತೆಗೆ ಮಾರುಹೋಗಿ ನಮ್ಮ ನೈತಿಕತೆಯನ್ನು ಬಿಟ್ಟುಕೊಡುವುದು ಎಷ್ಟರಮಟ್ಟಿಗೆ ಸಮಂಜಸ. ಈ ನಿಟ್ಟಿನಲ್ಲಿ ಅವಲೋಕಿಸಿದಾಗ ನಮ್ಮ ಸಂಸ್ಕೃತಿ ಯಾವುದೇ ಪರಿಸರದಲ್ಲಿ ನಿರಂತರವಾಗಿ ಚಲನಶೀಲತೆಯನ್ನು ಹೊಂದಿರುವಂಥದ್ದು. ಇದು ಅಭಿವೃದ್ಧಿಯಾಗುವ ದೆಸೆಯಲ್ಲಿ ಮೌಖಿಕ ಪರಂಪರೆಯ 'ಜಾನಪದ ಪಾತ್ರವು ಪ್ರಮುಖವಾಗಿರುತ್ತದೆಂಬುದನ್ನು ಅಲ್ಲಗೆಳೆಯುವಂತಿಲ್ಲ. ಯಾಕೆಂದರೆ ಮಾನವ ಜಗತ್ತಿನಲ್ಲಿ ಅಕ್ಷರ ಸಂಸ್ಕೃತಿಯನ್ನು ಕಾಣದಿದ್ದ ಸಂದರ್ಭದಲ್ಲಿ ಯಾವುದನ್ನು ಸಂಸ್ಕೃತಿಯೆಂದು ಕರೆಯುತ್ತಿದ್ದೆವೋ ಅದೇ ಜಾನಪದವು ಆಗಿತ್ತು ಎಂಬುದನ್ನು ಮರೆಯುವಂತಿಲ್ಲ. ಅನಕ್ಷರತೆ, ಬಡತನ, ಇವೆಲ್ಲವನ್ನೊಳಗೊಂಡ ಗಿರಿಜನರು, ಅರಣ್ಯವಾಸಿಗಳು ಇಂದಿಗೂ ಕೂಡ ತಮ್ಮ ಸಂಸ್ಕೃತಿಯನ್ನು ಅಭಿವ್ಯಕ್ತಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ಈ ನಡುವೆ ಜನಪದ ಕಲೆಗಳು ತನ್ನ ಪಾತ್ರವನ್ನು ಮುಕ್ತವಾಗಿ ಪ್ರಸ್ತುತ ಸಂದರ್ಭದ ಬದುಕಿನ ಚರಿತ್ರೆಯ ಮೂಲಕ ತೆರೆದುಕೊಳ್ಳುವಂತಹ ಸಂದರ್ಭವನ್ನು ನಾವು ಅನಾವರಣ-ಗೊಳಿಸಬೇಕಾಗಿದೆ.

ಕಲೆಯನ್ನು ಕುರಿತಂತೆ ಅನೇಕರು ಅನೇಕ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. "ಕಲಾವಿದ ಮತ್ತು ನೋಡುವವರಿಗೆ ಯಾವುದು ಸಂತಸವನ್ನುಂಟು ಮಾಡುತ್ತದೋ ಅದು ಕಲೆ. ಇದು ಎಲ್ಲಾ ರೀತಿಯ ಕಲೆಗಳಿಗೂ ಅನ್ವಯವಾಗುವ ಮಾತು. ಜನಪದ ಕಲೆಗಳೂ ಇದಕ್ಕೆ ಹೊರತಾಗಿಲ್ಲ. ಮನಸ್ಸಿಗೆ ನೆಮ್ಮದಿಯುಂಟು ಮಾಡುವುದರ ಜೊತೆಗೆ

ಮನುಷ್ಯರಲ್ಲಿ ಸಂಸ್ಕಾರ ಉಂಟಾಗುವುದಕ್ಕೂ ಕಲೆ ಕಾರಣವಾಗುತ್ತದೆ. ಆಧುನಿಕ ಯುಗದಲ್ಲಿ ಕೆಲವು ನಾಗರೀಕವೆನ್ನಬಹುದಾದ ಸಾಧನಗಳು ಮಾಡಲಾಗದ ಕೆಲಸವನ್ನು ಜನಪದ ಕಲೆಗಳು ಮಾಡಿತೋರಿಸುತ್ತದೆ. ಗಾಂಧೀಜಿಯ ಕಾಲದಲ್ಲಿ ಇದ್ದ ಸುಮಾರು ನೂರು ಪತ್ರಿಕೆಗಳು ಆರು ರೇಡಿಯೋ ಕೇಂದ್ರಗಳು ಬ್ರಿಟಿಷರ ವರ್ಚಸ್ಸಿನಲ್ಲಿ ಇದ್ದಂಥವು. ಅಂತಹ ಅತಿ ಬಲಿಷ್ಟ ಆಂಗ್ಲರ ಮೇಲೆ ಬಂಡಾಯ ಹೂಡಲು ಕರ್ನಾಟಕದ ಗೀಗಿ, ಲಾವಣಿ, ತಮಾಷಾ, ಮಹರಿ, ತಮಿಳುನಾಡಿನ ತೆರುಕೂತ್ತು, ಆಂಧ್ರಪ್ರದೇಶದ ಮಿರ‍್ರಕಥಾ, ಕೇರಳದ ತುಳ್ಕಲ್ ಮೊದಲಾದವು. ಅದರಲ್ಲಿಯೂ ಹರಿಕಥೆ ಅಥವಾ ಕಥಾಕೀರ್ತನ ಮತ್ತು ಬೊಂಬೆಯಾಟಗಳು ರಾಷ್ಟ್ರೀಯ ಆಂದೋಲನದ ಪ್ರಸರಣದಲ್ಲಿ ಅತ್ಯಂತ ಪ್ರಭಾವಪೂರ್ಣವಾದ ಪಾತ್ರವನ್ನು ನಿರ್ಮಿಸಿದವು"[೧] ಸಂವಹನ ಕ್ರಿಯೆಯಲ್ಲಿ ಜಾನಪದ ಕಲೆಗಳು ಎಂಬ ತಮ್ಮ ಪ್ರಬಂಧದಲ್ಲಿ ಡಾ. ಎಚ್.ಕೆ.ರಂಗನಾಥ್ ಅವರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯಹೋರಾಟದ ಸಂದರ್ಭದಲ್ಲಿ ಜಾನಪದ ಕಲಾ ಪ್ರಕಾರಗಳನ್ನು ಸಂವಹನ ಮಾಧ್ಯಮವನ್ನಾಗಿ ಬಳಸಿಕೊಳ್ಳಲಾಯಿತು. ನಮ್ಮ ಸಂಸ್ಕೃತಿಯ ಜೀವ-ಕೇಂದ್ರವೇ ಜಾನಪದವಾಗಿರುವಾಗ ಜನಪದ ಪ್ರದರ್ಶಕ ಕಲೆಗಳು ಸಮುದಾಯಗಳ ಜೀವವಿಧಾನವನ್ನು ಅರ್ಥಮಾಡಿಕೊಳ್ಳಲು ನೆರವಾಗುವಂಥವು.

"ಆರಾಧನೆ ಮತ್ತು ಆಚರಣೆಗಳ ಕ್ರಿಯೆಗಳೇ ಕಲೆಗಳು ಜನನ ಹೊಂದಿ ಪೂರ್ಣ ಸ್ವರೂಪದ ಕಲೆಗಳಾದದ್ದು ಒಂದು ಬಗೆಯಾದರೆ ಧರ್ಮ ಅಥವಾ ಪಂಥ ಪ್ರಸಾರಕ್ಕಾಗಿ ಹುಟ್ಟಿದ ಕಲೆಗಳು ನಂತರ ಧರ್ಮಪಂಥದ ಉದ್ದೇಶ ಮೀರಿ ಸಾರ್ವಜನಿಕ ಕಲೆಗಳಾದದ್ದು ಇನ್ನೊಂದು ಬಗೆ. ಕಲೆಯೇ ವೃತ್ತಿಯಾಗಿ ಇರುವ ವ್ಯವಸ್ಥೆಗೆ ಪ್ರತಿಭಟನೆಯಾಗಿ ಹೊಸ ಕಲೆಗಳೇ ಹುಟ್ಟಿಕೊಂಡದ್ದು ಮತ್ತೊಂದು ಬಗೆ. ಹೀಗೆ ಹಲವು ಕುತೂಹಲವನ್ನು ಕೆರಳಿಸುವ ಕರ್ನಾಟಕದ ಕಲೆಗಳು ನಮ್ಮ ಸಂಸ್ಕೃತಿಯ ಅಧ್ಯಯನಕ್ಕೆ ಪ್ರಧಾನ ಆಕರಗಳಾಗಿರುತ್ತವೆ. ಇಂಥ ಕಲೆಗಳ ಶೋಧನೆಯಿಂದ ಬಹುತೇಕ ದುಡಿಯುವ ವರ್ಗದ ಜನರ ಮೌಖಿಕ ಇತಿಹಾಸವನ್ನು ಕೂಡ ಸತ್ಯದ ಒರೆಗಲ್ಲಿಗೆ ಹಚ್ಚಿ ಪುನರೂಪಿಸಬಹುದಾಗಿದೆ".[೨] ನಂಬಿಕೆ ಸಂಪ್ರದಾಯ, ಧರ್ಮನಿಷ್ಠೆ, ಮನರಂಜನೆ, ರಂಗಭೂಮಿ, ನೀತಿ-ಆರಾಧನೆ ಇತ್ಯಾದಿಗಳತ್ತ ಕೈತೋರಿಸುವ ಕಲೆಗಳಿರುವಂತೆ ಇವುಗಳಿಗೆ ಭಿನ್ನವಾದ ಗಿರಿಜನರ ಕಲೆಗಳೂ ಇವೆ. ಜೊತೆಗೆ ಕುಣಿತ, ವಾದ್ಯ ಹಾಗೂ ಹಾಡು ಪ್ರಧಾನವಾದ ಕಲೆಗಳೂ ಇವೆ.

---

೧. ಜಾನಪದ ೯೨, ಪು. ೨೩೮.
೨. ಹಿ.ಚಿ.ಬೋರಲಿಂಗಯ್ಯ (ಸಂ): ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸ್ತಾವನೆ.

ನಮ್ಮ ಸಂಸ್ಕೃತಿಯನ್ನು ಪಸರಿಸುವಂತಹ ಇಂಥಹ ಕಲೆ ಮತ್ತು ಸಂಸ್ಕೃತಿಯು ಇಂದಿನ ದಿನಗಳಲ್ಲಿ ಶ್ರೀಮಂತರ ಬಂಡವಾಳಶಾಹಿಗಳು ಅತಂತ್ರ ರಾಜಕೀಯ ಧುರೀಣರಿಗೆ ಇದರ ಮೌಲ್ಯವು ಗೊತ್ತಾಗುತ್ತಿಲ್ಲ. ಕೇವಲ ಐಷಾರಾಮಿ ಸಂಸ್ಕೃತಿಯ ಆಗಮನದಿಂದ ಇಡೀ ಜಗತ್ತಿನ ಸಂಸ್ಕೃತಿಯು ಅದರಡಿಯಲ್ಲಿನ ಜಾನಪದ ಪರಂಪರೆ, ಆಚಾರವಿಚಾರಗಳು, ನಮ್ಮ ನೆಲೆನಾಡಿನ ಪೂರ್ವಜರ ಸ್ವತ್ತಾದ ನಮ್ಮ ಜನಪದಕಲೆಗಳು, ಕಲಾವಿದರು ಇಂದು ಮೂಲೆಗುಂಪಾಗಿರುವುದು ತುಂಬಾ ಶೋಚನೀಯ, ದುರದೃಷ್ಟಕರ.

ಇದೇ ರೀತಿಯಲ್ಲಿ ನಮ್ಮ ಸಂಸ್ಕೃತಿಯ ಭಾಗವಾಗಿರುವ ವಿವಿಧ ರೀತಿಯ ಸಲಕರಣೆಗಳು, ಮಾದರಿವಸ್ತುಗಳು ದೊರೆಯದಂತಹ ಪರಿಸ್ಥಿತಿಯು ಬಂದಿದೆ. ಇದರಿಂದ ಏಕರೂಪದ ಮತ್ತು ಬಹುರೂಪದ ಸಂಸ್ಕೃತಿಯ ಸಂಘರ್ಷ ನಡೆಯತೊಡಗಿ ಈ ಪರಿಣಾಮವಾಗಿ ಸರಿಯಾದ ರೀತಿಯಲ್ಲಿ ಎದುರಿಸಲಾರದೇ ಮೂಲೆಗುಂಪಾಗು-ವಂತಹ ಪರಿಸ್ಥಿತಿಯು ಬಂದಿದೆ. ಈ ನಿಟ್ಟಿನಲ್ಲಿ ಯೋಚಿಸಿದಾಗ ಮನುಕುಲದವರಲ್ಲಿ ಚೈತನ್ಯದ ಸಿರಿಯು ಬತ್ತಿಹೋಗಿ ತಮ್ಮ ಆಸಕ್ತಿಯನ್ನು ಬೇರೆಡೆ ವರ್ಗಾಯಿಸುವಂತಹ ಪರಿಸ್ಥಿತಿಯು ಒದಗಿದೆ. ಜನಪದ ಕಲೆಗಳು ತಮ್ಮ ಕಲಾಶ್ರೇಷ್ಠತೆಯನ್ನು ಮೆರೆಯಲು ಸಾಧ್ಯವಾಗದೆ ಅವಿತುಕೊಂಡು ತಮ್ಮ ಕಲೆಗಳನ್ನು ಪ್ರದರ್ಶನ ಮಾಡುವ ಸಂದರ್ಭವು ಬಂದಿದೆ.

ಸುಗ್ಗಿಕುಣಿತ, ಕೋಲಾಟ, ಡೊಳ್ಳುಕುಣಿತ, ಕಂಸಾಳೆ, ಗೊರವರ ಕುಣಿತ, ಪೂಜಾ ಕುಣಿತಗಳು ಇತ್ತೀಚಿಗಿನ ದಿನಗಳಲ್ಲಿ ಕೇವಲ ಕೆಲವು ಕಾರ್ಯಕ್ರಮಗಳ ಮೂಲಕ ಅಲ್ಪಮಟ್ಟಿಗೆ ಪ್ರದರ್ಶನವನ್ನು ಸರ್ಕಾರದ ವತಿಯಿಂದ ನಡೆಯುತ್ತದೆ. ಕಲೆಗಳು ವ್ಯಾಪಾರೀಕರಣಗೊಂಡು ಯಾಂತ್ರೀಕರಣವಾಗತೊಡಗಿವೆ. ಇದರಿಂದ ದೊರಕುವ ಅತ್ಯಾಮೂಲ್ಯವಾದ ಜೀವನದ ಬದುಕು. ಚಿಮ್ಮುವ ಚಿಲುಮೆಯಾಗುವ ಬದಲು ಕೇವಲ ವ್ಯಾಪಾರೀಕರಣದಿಂದ ತನ್ನ ತನವನ್ನು ಕಳೆದುಕೊಳ್ಳುತ್ತಿವೆ. ವ್ಯಾಪಾರ ಮತ್ತು ಲಾಭದ ದೃಷ್ಟಿಕೋನದಲ್ಲಿ ಜಾಗತೀಕರಣವು ತನ್ನ ಪ್ರಭಾವವನ್ನು ಜಾನಪದ ಕಲೆಗಳ ಮೇಲೆ ಬೀರಿರುವುದನ್ನು ನಾವು ಕಾಣಬಹುದು. ಜಾನಪದ ಎಂಬುದು ಸಂಸ್ಕೃತಿಯ ಉತ್ಪನ್ನ ಹಾಗೆಯೇ ಸಂಸ್ಕೃತಿಯೆಂಬುದು ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಯಿಂದ ಬಂದ ಉತ್ಪನ್ನ'. ಈ ನಿಟ್ಟಿನಲ್ಲಿ ಒಂದಕ್ಕೊಂದು ಸಂಬಂಧದ ಬೆಸುಗೆಯನ್ನು ಇತ್ತೀಚಿನ ದಿನಗಳಲ್ಲಿ ಮರೆತಂತೆ ತನ್ನ ತನವನ್ನು ಕಳೆದುಕೊಳ್ಳುತ್ತಿದೆ. ಪ್ರಮುಖವಾಗಿ ಜಾತೀವ್ಯವಸ್ಥೆಯು ಕೂಡ ಪ್ರಮುಖವಾಗಿ ಜನಪದ ಕಲೆಗಳ ಮೇಲೆ

ತನ್ನ ಪ್ರಭಾವ ಬೀರಿದೆ. ಮೇಲುಕೀಳೆಂಬ ತಾರತಮ್ಯತೆ ಜನಪದ ಕಲೆಗಳ ನಡುವೆ ಗೋಚರವಾಗುತ್ತಿದೆ.

ಜನಪದ ಕಲೆಗಳು ಹೆಚ್ಚಾಗಿ ಅನಕ್ಷರಸ್ಥರು ಆಚರಣೆ ತರುವ ಮತ್ತು ಮುಂದುವರಿಸಿಕೊಂಡು ಬಂದಂತಹ ಕಲೆಯಾಗಿದ್ದು ಅವರ ವಂಶಪರಂಪರೆಗಳು ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರು, ಅಕ್ಷರಸ್ಥರು, ನಗರೀಕರಣದ ಕಡೆ ಒಲವು ತೋರಿರುವುದರಿಂದ ತಮ್ಮ ಕುಟುಂಬದಲ್ಲಿ ಇದ್ದಂತಹ ಕಲೆಗಳನ್ನು ಮರೆಮಾಚುವಂತೆ ಮಾಡತೊಡಗಿದ್ದಾರೆ. ಶಿಕ್ಷಣದ ಮೂಲಕ ತಮ್ಮ ಕಲೆಗಳನ್ನು ದೂರಮಾಡುವಂತಹ ಸಂದರ್ಭವು ಬಂದಿದೆ.

ಹಳ್ಳಿಯಲ್ಲಿ ವಾಸ ಮಾಡುವಂತಹ ಜನಸಮೂಹವು ಜೀವನ ನಿರ್ವಹಣೆಗೆ ನಗರಗಳ ಕಡೆ ಧಾವಿಸಿ ತಮ್ಮ ಸುಲಭವಾಗಿ ಲಭಿಸುವಂತಹ ಅವಕಾಶಗಳಿಗೆ ಮೊರೆಹೋಗಿ ಊರಿನಲ್ಲಿ ನಡೆಯುವಂತಹ ಅನೇಕ ಧಾರ್ಮಿಕ ಉತ್ಪನ್ನಗಳು ಹಬ್ಬಹರಿದಿನಗಳ ಕಡೆ ತಮ್ಮ ಗಮನವನ್ನು ಕೇಂದ್ರೀಕರಿಸದೆ ಜನಪದಕಲೆಗಳನ್ನು ಮೂಲೆ ಗುಂಪಾಗಿಸಿವೆ.

ವೀರಗಾಸೆ ಮೇಳ, ಮೂಡಲಪಾಯ ಕಲೆಗಳು, ಕರಾವಳಿ ಯಕ್ಷಗಾನ, ನೀಲಗಾರರ ಹಾಡುಗಾರಿಕೆ, ತಂಬೂರಿಗಾರಿಕೆ ಕೆಲವು ಕಲೆಗಳು ಸ್ವಲ್ಪ ಬದಲಾವಣೆ ಹೊಂದಿ ಕೆಲವು ಅಭ್ಯಾಸ ಕೇಂದ್ರಗಳ ಮೂಲಕ ಸ್ವಲ್ಪಮಟ್ಟಿಗೆ ಸುಧಾರಣೆ ಕಂಡವು. ನಾದಸ್ವರ, ವಾಲಗ, ಡೋಲು ಬಾರಿಸುವ ಜಾತೀ ವ್ಯವಸ್ಥೆಯಲ್ಲಿ ಹರಿಜನರು ಬಾರಿಸುವ ಬಗ್ಗೆ ಮುಂದುವರೆದು ಜನಾಂಗವು ಸಕಾರಾತ್ಮಕವಾದ ಭಾವನೆವು ಇಲ್ಲ. ವರ್ಣವ್ಯವಸ್ಥೆಯ ಶಿಥಿಲಿಕರಣ ಮುಂದುವರೆಯುವುದು ಕಂಡುಬರುತ್ತದೆ. ಆಧುನಿಕ ತಂತ್ರಜ್ಞಾನದ ಟಿ.ವಿ. ಸಿನಿಮಾ, ನಾಟಕಗಳ ಕಡೆ ಜನರು ಧಾವಿಸುವುದನ್ನು ನೋಡಬಹುದು.

ಇದರ ಜೊತೆಗೆ ಹಿರಿಯರಿಗೆ ಅವರು ಆಚರಿಸುತ್ತಿದ್ದ ಕುಲಕಸುಬುಗಳು, ಪವಿತ್ರವೆಂದು ಕಂಡರೆ ಮಕ್ಕಳಿಗೆ ಅವಮಾನವಾಗುವಂತೆ ತಮ್ಮ ತಮ್ಮಲ್ಲಿ ಪೀಳಿಗೆಯ ಸಂಘರ್ಷ ಏರ್ಪಡಾಗುತ್ತದೆ. ಜನಪದ ಕಲೆಗಳು ಆಧುನಿಕತೆಯಿಂದ ನರಳುವ ಸ್ಥಿತಿಯು ಬಂದಿದೆ. ಇದರಿಂದ ನಮ್ಮ ವೃತ್ತಿಗಾಯಕ ಪರಂಪರೆಗಳು, ಗೊರವರ ಕಲೆ, ವೀರಗಾಸೆಗಳು ಕೆಲವು ರೀತಿಯಲ್ಲಿ ಮೂಲೆಗುಂಪಾದರೂ ಜಾತಿಯ ಪ್ರಭಾವವು ಬೀರಿ ಜೀವಂತಿಕೆಯನ್ನು ಇನ್ನು ಉಳಿಸಿಕೊಂಡಿದೆ.

ಸಿನಿಮಾ, ದೂರದರ್ಶನ ಮಾಧ್ಯಮಗಳ ಮೂಡಿ ಜನಸಮೂಹವು ಮಾರುಹೋಗಿ ಜನಪದ ಕಲೆಗಳು ಆಕರ್ಷಣೆಯನ್ನು ಕಳೆದು ಹೋಗುವಂತೆ

ಜಾಗತೀಕರಣದ ನೆರಳು ಬೀರತೊಡಗಿವೆ. ಭಜನೆ ಭೂತಾರಾಧನೆ, ಡೊಳ್ಳು ಕುಣಿತ, ನಂದಿಧ್ವಜ ಕುಣಿತ, ಕಲೆಗಳು ಈ ಪರಿಣಾಮವನ್ನು ಎದುರಿಸುವಂತಹ ಸಂಧರ್ಭ ಬಂದಿದೆ. ನಾವು ಹಳ್ಳಿಯಲ್ಲಿ ಹಬ್ಬಹರಿದಿನ ಜಾತ್ರೆ. ಉತ್ಸವದಲ್ಲಿ ಜನಪದ ಕಲೆಗಳು ಉತ್ತಮವಾದ ರಿತಿಯಲ್ಲಿ ತಮ್ಮ ಕಲಾ ಪ್ರದರ್ಶನ ಮಾಡುತ್ತಿದ್ದವು. ಈ ಸಂದರ್ಭಗಳು ಜಾಗತೀಕರಣದಿಂದ ಇಲ್ಲದಂತಾಗಿದೆ.

ಮಾದೇಶ್ವರನ ಜಾತ್ರೆಯಲ್ಲಿ ಭಕ್ತಸಮೂಹ ನಡುವೆ ಕಂಸಾಳೆ ನೃತ್ಯ ಪ್ರದರ್ಶನ ಮಾಡಿ ಅದು ತನ್ನ ಆರಾಧನಾ ಕಲೆಗಳನ್ನು ಪ್ರಸರಿಸುತ್ತದೆ. ಅದು ಸಾರ್ವಜನಿಕವಾಗಿ ಪ್ರದರ್ಶನಗೊಂಡರೆ ಹವ್ಯಾಸಿ ಕಲೆಯಾಗಿ ಕಾಣಿಸುತ್ತದೆ. ಆಧುನಿಕತೆಯ ನಗರೀಕರಣ, ಜಾಗತೀಕರಣಗಳ ಸೀಮಿತ ಅವಧಿಗೆ ಈ ಕಲೆಗಳು ಒಳಪಟ್ಟಿವೆ ಎಂಬ ಮಾತಲ್ಲೇ ನೋವು ಇದೆ. ಜನಪದ ಕಲೆಗಳು ಸಾಂದರ್ಭಿಕ ಬಳಕೆಯ ತಲೆಯಾಗಿ ಉಳಿಯುತ್ತಿಲ್ಲ. ಆರಾಧನಾ ಹಿನ್ನೆಲೆಯಲ್ಲಿ ಉಳಿಯುತ್ತಿಲ್ಲ. ಸಿನಿಮಾ, ಟಿವಿ, ಸಭೆ ಸಮಾರಂಭ ಮೆರವಣಿಗೆಯಲ್ಲಿ ಬಳಕೆಯಾಗುತ್ತಿದೆ. ನಂದೀಧ್ವಜ ಕುಣಿತ, ಕಂಸಾಳೆ ಗೊರವರ ಕುಣಿತ, ಮಳೆಯ ನೃತ್ಯ ಇವೆಲ್ಲಾ ಪರಿಸರದಿಂದ ಬೇರೆಯಾದಾಗ ಅದರ ಘನತೆಯಿಂದ ವಂಚಿತಗೊಳ್ಳುತ್ತದೆ. ಯಾವುದೇ ಕಲೆ ಸಾಂಧರ್ಭಕತೆಯನ್ನು ಕಳೆದುಕೊಂಡು ಒಟ್ಟಾರೆ ಕಲೆಗೆ ಗೌರವವಿಲ್ಲದಂತಾಗುತ್ತದೆ. ಈಗ ಆಗುತ್ತಿರುವುದು ಇದೇ ಆಗಿದೆ. ನಂದೀಧ್ವಜ ಕುಣಿತ, ಡೊಳ್ಳುಕುಣಿತ, ತಂಬೂರಿಮೇಳ ಇವೆಲ್ಲ ಆಚರಣೆ ನಂಬಿಕೆಯ ದೃಷ್ಟಿಯಿಂದ ಮುಖ್ಯವೆನಿಸಿದವು. ಕಲಾ ಪ್ರದರ್ಶನದ ಹಿನ್ನೆಲೆಯಾಗಿದ್ದ ಭಾವನೆ ಮತ್ತು ಭಕ್ತಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮುಖ್ಯವೆನಿಸುವುದಿಲ್ಲ. ಸಿನಿಮಾ ಮಾಧ್ಯಮದಲ್ಲಾದರೂ ಕೊಂಚ ಬೆಲೆ ಇರುತ್ತದೆ. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಇವು ಭಕ್ತರ ಕಲೆಗಳಾಗಿಯೂ ಉಳಿಯುವುದಿಲ್ಲ. ಆರಂಭದಲ್ಲಿ ಭಕ್ತಿಯ ಕಲೆಗಳಾಗಿ ನಂತರ ಕರುಣೆ ಹಂತ ತಲುಪಿ ಹೀಗೆ ಸ್ಥಳೀಯ ಮಹತ್ವವನ್ನು ಕಳೆದುಕೊಂಡು ಮರಣಾವಸ್ಥೆಯ ಕಲೆಗಳಾಗಿವೆ. ಶಿಷ್ಟ ಸಂಗೀತವನ್ನು ಉಳಿಸಿದಂತೆ ಜನಪದ ಕಲೆಗಳನ್ನು ಉಳಿಸ-ಬೇಕಾಗಿದೆ. ಎಲ್ಲದಕ್ಕೂ ಹಣದಿಂದಲೇ ಬೆಲೆ ಇರುವಾಗ ಕಲಿಯುವವನಿಗೆ ಮಾಸಾಶನ ನೀಡಿದರೆ ಅವನ ಬದುಕು ಸುಧಾರಿಸುತ್ತದೆ. ಕಲೆಯೂ ಉಳಿಯುತ್ತದೆ. ಕಲಿಯು-ವವನಿಗೂ ಗೌರವ ಬರುತ್ತದೆ. "ಬದುಕಿನ ಎಲ್ಲ ರಂಗಗಳಲ್ಲೂ ಆರ್ಥಿಕತೆಯೊಂದೇ ಪ್ರಧಾನವಾದಾಗ ಆರ್ಥಿಕ ಸಂಸ್ಕೃತಿಯೊಂದರ ನಿರ್ಮಾಣವಾಗುತ್ತದೆ. ಈ ತೆರನಾದ ಬಂಡವಾಳಶಾಹಿ ಆರ್ಥಿಕ ಸಂಸ್ಕೃತಿ ಕತೆ ಪಶ್ಚಿಮದಿಂದ ಬಂದಿದ್ದು ಮತ್ತು ಒಡೆತನವನ್ನು ಸ್ಥಾಪಿಸಿರುವಾಗಿ ತಾವು ಕಂಡುಕೊಳ್ಳುವ ಆರ್ಥಿಕ ಸಂಸ್ಕೃತಿಯು ಸಹ ಏಕರೂಪದ್ದಾಗಿ ಬಿಡುತ್ತದೆ. ಹಾಗೂ ಅದು ಪಶ್ಚಿಮದ ಬಂಡವಾಳಶಾಹಿ ಸಂಸ್ಕೃತಿಯಷ್ಟೇ

ಆಗರಬೇಕಾಗುತ್ತದೆ. ಇಂತಹ ಸಂಸ್ಕೃತಿ ರೂಪು ತಳೆಯುವಲ್ಲಿ ಪ್ರಧಾನ ಪಾತ್ರ ವಹಿಸುತ್ತಿರುವುದು. ಉದಾಹರಣೆಗೆ ನಮ್ಮ ಸಾಂಪ್ರದಾಯಿಕ ಕಲೆಗಳಲ್ಲೊಂದಾದ ಯಕ್ಷಗಾನವನ್ನು ಇಂಗ್ಲಿಷ್‌ನಲ್ಲಿ ಪ್ರಸ್ತುತ ಪಡಿಸಲಾಗುತ್ತಿರುವುದು. ಅವರ ಉದ್ದೇಶ ನಮ್ಮ ಕಲಾ ಪ್ರಕಾರದಲ್ಲೊಂದನ್ನು ಸಾಗರದಾಚೆಗೇ ಪರಿಚಯಿಸುವುದೇ ಆಗಿದ್ದರೆ ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯ. ಆದರೆ ಸಾಂಪತ್ತಿಕವಾಗಿ ಬಲಾಢ್ಯವಾದ ಪಶ್ಚಿಮವು ಕಲಾಪ್ರಕಾರದ ಮೇಲೂ ಒಡತನ ಸಾಧಿಸಬಹುದು. ಅದನ್ನು ಕೊಂಡುಕೊಳ್ಳಲು-ಬಹುದು. ಇಂಗ್ಲಿಷ್ ಮಾನ್ಯತೆ ಹೆಚ್ಚುತ್ತಾ ಹೋದಂತೆ ಆ ಭಾಷೆಯಲ್ಲಿ ಪ್ರಸ್ತುತಪಡಿಸ-ಲಾಗುವ ಈ ಕಲಾ ಪ್ರಕಾರ ಪ್ರಾಧಾನ್ಯ ತಡೆಯುತ್ತ ಹೋಗಿ ದೇಶಭಾಷೆಯಲ್ಲಿ ಪ್ರಸ್ತುತ ಪಡಿಸದೇ ಇರುವ ದಿನ ಬಂದರೂ ಬರಬಹುದು. ಹೀಗಾದಾಗ ಒಂದು ಕಲಾ ಪ್ರಕಾರ ಯಾವ ಸಾಂಸ್ಕೃತಿಕ ವಾತಾವರಣದಲ್ಲಿ ನೈಜ ಸಂವೇದನೆ ಹೊರಗೆಡಲು ಮನುಷ್ಯನನ್ನು ತಲುಪಬಹುದೋ ಆ ಸಾಧ್ಯತೆಯನ್ನು ಅದು ಕಳೆದುಕೊಳ್ಳಬೇಕಾಗುತ್ತದೆ. ಅಸಹಜ-ವಾಗುತ್ತ ಸಾಗಬೇಕಾಗುತ್ತದೆ."[೧]

ವಿಶ್ವವು ಒಂದು ಮನೆಯಂತೆ ಪ್ರತಿಯೊಂದು ಮಾಹಿತಿಯು ಬಲುಬೇಗ ತಲುಪುವಂತಹ ಅಗತ್ಯತೆ ಇರುವುದರಿಂದ ನಮ್ಮ ಪ್ರದರ್ಶನಕಲೆ, ಜನಪದಕಲೆಗಳನ್ನು ಮಾಹಿತಿ ತಂತ್ರಜ್ಞಾನದ ಜೊತೆಯಲ್ಲಿ ಕೊಂಡೊಯ್ಯುವ ಕೆಲಸ ಆಗಬೇಕಿದೆ. ಹಲವು ಅಕಾಡೆಮಿಗಳು, ಸಂಘಸಂಸ್ಥೆಗಳು, ಕಾಳಜಿ ಇರುವಂತಹ ಸಂದರ್ಭದಲ್ಲಿ ಕಲೆಗಳ ರಕ್ಷಣೆಗೆ ಅವಕಾಶ ನೀಡಬೇಕು. ಸರಕಾರದ ದಾನವನ್ನು, ವಿಶ್ವವಿದ್ಯಾನಿಲಯದ ಅನುದಾನ, ಧನಸಹಾಯ ಆಯೋಗದಿಂದ ನಿರಂತರ ಕಾರ್ಯಪ್ರವೃತ್ತರಾಗಲು ಅವಕಾಶ ನೀಡಬೇಕಾಗಿದೆ.

ಇಂದಿನ ಜಾಗತೀಕರಣವು ಸಂಸ್ಕೃತಿಯ ಒಂದು ಅವಿಭಾಜ್ಯ ಅಂಶವಾಗಿ ಇಡೀ ವಿಶ್ವದೆಲ್ಲೆಡೆ ಪಸರಿಸುವಂತಹ ಅವಕಾಶವನ್ನು ಕಲ್ಪಿಸುತ್ತಿದೆಯೆಂಬ ಮನಸ್ಸಿನಿಂದ ಕಾರ್ಯ ಪ್ರವೃತ್ತರಾಗಬೇಕು. ಇದರಿಂದ ತಮ್ಮ ಜನಪದಕಲೆಗಳ ಸ್ಥಾನಮಾನ, ದೇಶೀಯತೆಯ ಸೊಗಡನ್ನು ಉಳಿಸಬಹುದಾಗಿದೆ. ಆಧುನಿಕ ತಂತ್ರಜ್ಞಾನದಿಂದ ಪ್ರದರ್ಶನಕ್ಷೇತ್ರದಲ್ಲಿ ಜನಪದ ಮಾಧ್ಯಮವನ್ನು ವಿಸ್ತರಿಸುವಂತಹ ದಾರಿಯನ್ನು ನಾವು ಮಾಡಬೇಕಾಗಿದೆ.

---

೧. ಅರವಿಂದ ಚೊಕ್ಕಾಡಿ: ಅನ್ವಯ, ಪುಟ. ೧೪,೧೫.

ಅಧ್ಯಾಯ – ೬

ಉಪಸಂಹಾರ

ಚಾಮರಾಜನಗರ ಜಿಲ್ಲೆಯು ಜಾನಪದ ಸಾಹಿತ್ಯ ಕಲೆ, ಸಂಸ್ಕೃತಿ, ಪರಂಪರೆಗಳ ತವರು. ಕನ್ನಡ ಜಾನಪದ ಸಾಹಿತ್ಯಕ್ಕೆ ತನ್ನದೇ ಆದಂತಹ ಮಹತ್ವದ, ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದು ಹಲವು ರೀತಿಯಲ್ಲಿ ಚಾರಿತ್ರಿಕ ಹಿನ್ನೆಲೆಯುಳ್ಳ ಜಾನಪದ ಕಲೆ ಮತ್ತು ಸಾಹಿತ್ಯದ ಮೂಲಕ ರೂಪವನ್ನು ನೀಡಿರುವುದು ಸ್ಪಷ್ಟ.

ಇಡೀ ಜಿಲ್ಲೆಯಲ್ಲಿ ಅನಕ್ಷರಸ್ಥ ಬಹುಸಂಖ್ಯಾತ ಸಮುದಾಯಗಳ ಮೌಖಿಕ ಇತಿಹಾಸವನ್ನು ನಾಲಿಗೆ ಮತ್ತು ಮೈಮೇಲೆ ನಲಿದಾಡಿಸುತ್ತ ಉಳಿಸಿ ಬೆಳೆಸುವ ಕಲಾವಿದರು ಕಾಲಗರ್ಭದಲ್ಲಿ ಕಳೆದು ಹೋಗದಂತೆ ದಾಖಲಿಸುವುದು ಒಂದು ಸ್ವಾಗತಾರ್ಹ ವಿಷಯ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿನ ವಿಶಿಷ್ಟ ಜಾನಪದ ಕಲೆ ಮತ್ತು ಕಲಾವಿದರ ದಂಡನ್ನು ಹೊಂದಿರುವುದು ಅಭಿಮಾನದ ವಿಷಯವಾಗಿದೆ.

ನೀಲಗಾರರ ತಂಬೂರಿ ಹಾಡುಗಾರಿಕೆ, ಕಂಸಾಳೆ ಹಾಡುಗಾರಿಕೆ, ಬೀಸುಕಂಸಾಳೆ ಕುಣಿತ, ತಮಟೆವಾದನ, ಮುಖವೀಣೆ, ನಾದಸ್ವರ ವಾಲಗ, ತತ್ವಪದಕಾರರು, ಸೋಬಾನೆ ಹಾಡುಗಾರರು, ಕೊಳಲುವಾದಕರು, ಜಾನಪದ ರಂಗಭೂಮಿ ಕಲಾವಿದರು, ಸೂತ್ರ ಗೊಂಬೆಯಾಡಿಸುವವರು, ಗಾರುಡಿಗೊಂಬೆ ಕುಣಿಸುವವರು, ಕೊಂಬುಕಹಳೆವಾದನ ಮಾಡುವವರು ಮತ್ತು ಪೂಜಾಕುಣಿತ, ಮಾರಮ್ಮನ ಕುಣಿತ, ಹೀಗೆ ಹಲವಾರು ಕಲೆ ಮತ್ತು ಕಲಾವಿದರುಗಳಿಂದ ಚಾಮರಾಜನಗರ ಜಿಲ್ಲೆ ಸಮೃದ್ಧವಾದ ಜಾನಪದ ಪರಂಪರೆಗಳನ್ನು ಹೊಂದಿರುವುದು ನಿಜವಾಗಿಯೂ ಸಂತೋಷಕರವಾದ ಜಾನಪದ ಇತಿಹಾಸಕ್ಕೆ ಒಂದು ಮೆರಗು.

ಈ ನಿಟ್ಟಿನಲ್ಲಿ ನಾವು ಅವಲೋಕಿಸಿದಾಗ ಚಾಮರಾಜನಗರ ಜಿಲ್ಲೆಯ ಜಾನಪದ ಪರಂಪರೆಯು ಮಲೆಮಾದೇಶ್ವರ ಕಾವ್ಯ ಮತ್ತು ಮಂಟೇಸ್ವಾಮಿ ಕಾವ್ಯಗಳು ಈ ಮೂಲಕ ಹಲವು ರೀತಿಯಲ್ಲಿ ಮಜಲುಗಳನ್ನು ಪಡೆದುಕೊಂಡಿರುವುದು ಸಹಜವಾಗಿ ಗೋಚರಿಸುತ್ತದೆ. ರಾಜ್ಯದ ಗಡಿನಾಡು ಜಿಲ್ಲೆಯಾದಂತಹ ಚಾಮರಾಜನಗರವು ೧೫–೧೬ನೇ ಶತಮಾನದ ಕಾಲಾವಧಿಯಲ್ಲಿ ಇದ್ದಂತಹ ಮಾದೇಶ್ವರ, ಮಂಟೇಸ್ವಾಮಿರವರು ಚಾರಿತ್ರಿಕ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಜಿಲ್ಲೆಯ ಜನಪದ ಕಲೆಗಳು ಸದೃಢವಾಗುತ್ತ ಬೆಳೆದಿರುವುದು ಸ್ಪಷ್ಟ.

ಈ ರೀತಿಯಲ್ಲಿ ಅನೇಕ ಕ್ಷೇತ್ರಗಳಾದಂತಹ ಕುರುಬನಕಟ್ಟೆಯಲ್ಲಿನ ಲಿಂಗಯ್ಯರ ಗದ್ದಿಗೆ ಮಾದಾರ ಚನ್ನಯ್ಯರ ಬಳಗದವರ ತೂರುಗದ್ದಿಗೆ, ನೀಲಗಾರರ ಪರಂಪರೆಯ

ಕರ್ತೃ ಸಿದ್ದಪ್ಪಾಜಿ ನೆಲೆ ನಿಂತಿದ್ದು ಕೊಳ್ಳೇಗಾಲದ ಚಕ್ಕಲ್ಲೂರು. ಇವು ಮಂಟೇಸ್ವಾಮಿ ಪಂಥದ ಜಾನಪದ ಸಾಹಿತ್ಯಕಲೆ, ಸಂಸ್ಕೃತಿ ಮತ್ತು ತಂಬೂರಿ ಕಲಾವಿದರ ಪ್ರಸಿದ್ಧ ಕ್ಷೇತ್ರವಾಗಿದ್ದು ತನ್ನದೇ ಆದಂತಹ ಜಾನಪದ ಕಲೆಗಳಾಗಿ ನೆಲೆ ಸ್ಥಾನವನ್ನು ಇಂದಿಗೂ ನೀಡುತ್ತಿವೆ. ಇವುಗಳ ಸ್ಥೂಲವಾದಂತಹ ಅಧ್ಯಯನವನ್ನು ನಾನು ಈ ಪ್ರಬಂಧದಲ್ಲಿ ಕೈಗೊಂಡಿರುತ್ತೇನೆ. ಅನಾದಿಕಾಲದಿಂದಲೂ ಸಂಸ್ಕೃತಿಯ ಪ್ರಸಾರಿಕೆಯಲ್ಲಿ ಚಾಮರಾಜ ನಗರ ಜಿಲ್ಲೆಯು ತನ್ನದೇ ಆದಂತಹ ಅನನ್ಯ ಸೇವೆಯನ್ನು ಜಾನಪದ ಕ್ಷೇತ್ರಕ್ಕೆ ನೀಡಿರುವುದು ನಮಗೆ ತಿಳಿದ ವಿಷಯವಾಗಿದ್ದು ಜಿಲ್ಲೆಯಲ್ಲಿನ ಕಲಾವಿದರು ತಲಾತಲಾಂತರದಿಂದ ಬಂದಿರುವ ಪೂರ್ವಜರ ಜನಪದಕಲೆಯನ್ನು ಮುಂದುವರೆಸಿ-ಕೊಂಡು ಬಂದಿರುವುದು ಶ್ಲಾಘನೀಯವಾದ ವಿಷಯ.

ಸಂಪ್ರದಾಯಬದ್ಧ ಆಚರಣೆಗಳಿಂದ ನೀಲಗಾರರ ಕಾರ್ಯವೈಖರಿ, ಕಂಸಾಳೆ ನೃತ್ಯ, ಹಾಡುಗಾರರು, ನಂದೀಧ್ವಜ ಕುಣಿತದ ವೀರರು, ನಂತರದಲ್ಲಿ ಸಂಪ್ರದಾಯ ಮದುವೆ ಆಚರಣೆಯಲ್ಲಿನ ವೀರಗಾಸೆಯ ಸೊಗಡು, ಗ್ರಾಮೀಣತೆಯ ಸಾಹಿತ್ಯ ರೂಪವಾದ ಸೋಬಾನೆ ಪದ ಹಾಡುಗಳನ್ನು ಶುಭ ಕಾರ್ಯಗಳಿಗೆ ಇಂದಿಗೂ ಕೂಡ ಬಳಕೆ-ಯಾಗಿರುವುದು ಸತ್ಯ. ಮತ್ತು ಮನೆ ಮಾತಾಗಿ ಸಾಹಿತ್ಯಿಕವಾಗಿ ಬಿಂಬಿತವಾಗಿರುವುದು ಇಂದಿಗೂ ಸ್ಮರಣೀಯವಾದದ್ದು.

ಚಾಮರಾಜನಗರ ಜಿಲ್ಲೆಯ ಜಾನಪದ ಸಿರಿಯನ್ನು ಮೈತುಂಬಿಸಿಕೊಂಡ ಅಮೃತಲತೆ. ವಸುಂಧರೆಯ ಒಡಲ ರಮ್ಯ ತಾಣದಲಿ ಜನಪದ ಜೀವನದ ದಟ್ಟವಾದ ಅನುಭವ. ಕರ್ನಾಟಕದ ನೆಲದಲ್ಲಿ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಎಲ್ಲಮ್ಮ, ಮೈಲಾರಲಿಂಗ ಇತ್ಯಾದಿ ಜನಪದ ಕಾವ್ಯಗಳು ಹೆಸರಾಂತ ಮಹಾಕಾವ್ಯಗಳು. ಇದೇ ನಿಟ್ಟಿನಲ್ಲಿ ಮೌಲಿಕ ಹಾಗೂ ಅಧಿಕ ಜನಪದೀಯ ಸಂಸ್ಕೃತಿಯನ್ನು ಹುದುಗಿಸಿ-ಕೊಂಡಿರುವ ಶ್ರೀಮಂತ ಜಿಲ್ಲೆ ಚಾಮರಾಜನಗರ. ಈ ದಿಸೆಯಲ್ಲಿ ಮಹದೇಶ್ವರ ಕಾವ್ಯ, ಬೀಸು ಕಂಸಾಳೆ, ಗೊರವರಕುಣಿತ ಮಂಟೇಸ್ವಾಮಿ ಕಾವ್ಯ, ಲಂಬಾಣಿನೃತ್ಯ, ಪಿನಾಸಿ ನೃತ್ಯ, ಕೋಲಾಟ, ಸೋಬಾನೆ ಪದ, ವೀರಮಕ್ಕಳ ಕುಣಿತ, ಸುಗ್ಗಿಕುಣಿತ, ಬೀಸುಕಲ್ಲಿನ ಪದ ಹೀಗೆ ವೈವಿಧ್ಯಮಯ ಜನಪದ ಸಂಸ್ಕೃತಿಯ ತವರು. ಪ್ರತಿಜನರ ಗುಂಪಿನಲ್ಲಿ ಒಬ್ಬರು ರಂಗಭೂಮಿ ಇಬ್ಬರು ಜನಪದ ಇನ್ನಿಬ್ಬರೂ ಎರಡನ್ನು ಬಲ್ಲವರಾಗಿರುತ್ತಾರೆ.

ಚಾಮರಾಜನಗರ ಜಿಲ್ಲೆ ನಾಡಿನಲ್ಲಿ ಜನಪದ ಕಲೆಗಳ ಶ್ರೀಮಂತ ಜಿಲ್ಲೆ. ಇಲ್ಲಿ ಜನಪದರು ಆರ್ಥಿಕವಾಗಿ ಸಬಲರಲ್ಲದಿದ್ದರೂ ರಕ್ತಗತವಾಗಿ ಬಂದಿರುವ ಕಲೆಯನ್ನು ಕಾಪಾಡಿಕೊಂಡು ಬಂದ ಸಾಂಪ್ರದಾಯಿಕ ಶರಣರು ರಂಗುರಂಗಿನ ಆಧುನಿಕತೆಯ

ಆರ್ಭಟದ ನಡುವೆಯೂ ತಮ್ಮ ಕಾಯಕದ ಜೊತೆ ಕಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವ ನಮ್ಮ ಗ್ರಾಮೀಣ ಜನಪದ ಸಂಸ್ಕೃತಿಯ ಪ್ರತೀಕ. ಪ್ರತಿ ಊರುಗಳಲ್ಲಿ ಪ್ರತಿ ಮನೆಗಳಲ್ಲಿ ಯಾವುದಾದರೊಂದು ಪ್ರಕಾರ ಬಲ್ಲವ ಕಲಾವಿದನಿದ್ದರೆ ಕೆಲವರು ವೃತ್ತಿಯಾಗಿಸಿಕೊಂಡು ಮತ್ತೆ ಕೆಲವರು ಹವ್ಯಾಸವಾಗಿಸಿಕೊಂಡು ಸಂಸ್ಕೃತಿಯ ಕೊಂಡಿಗಳಾಗಿದ್ದರೆ ಮತ್ತೆ ಕೆಲವರು ಉತ್ತಮ ಶೋತೃಗಳಾಗಿದ್ದಾರೆ.

ಇಂದಿಗೂ ತಮಟೆ ಮೇಳ, ಪೂಜಾ ಕುಣಿತ, ಮಾರಿಕುಣಿತ ಡೋಲುಕುಣಿತ, ವೀರಮಕ್ಕಳ ಕುಣಿತ, ಯಕ್ಷಗಾನ ಇತ್ಯಾದಿ ಕಲಾ ಪ್ರಕಾರಗಳನ್ನು ಅಭಿವ್ಯಕ್ತಿಸುವ ತಂಡಗಳು ಜಿಲ್ಲೆಯಲ್ಲಿ ಸಂಘಟನೆಗೊಂಡಿದೆ. ಜೋಗಿಪರಂಪರೆಯ ಕೊಂಬಿನ ಹೊನ್ನಯ್ಯ ಮನೆತನದ ಕಹಳೆ ಇಂದಿಗೂ ತಮ್ಮ ಕಾಯಕ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಜಾನಪದ ಸಾಗರದಷ್ಟು ವಿಶಾಲವಾದ ಕ್ಷೇತ್ರ. ಈ ಪುಟ್ಟ ಲೇಖನದಿಂದ ಎಲ್ಲರನ್ನು ಸೆರೆ ಹಿಡಿಯುವುದು. ಸಂದು ಹೋದ ಕಿರಿಯರು, ಎಲೆಮರೆಕಾಯಂತಿರುವ ಅನೇಕರನ್ನು ದಾಖಲಿಸುವುದು ಕಷ್ಟದ ಕೆಲಸ. ಈ ಲೇಖನ ಪ್ರಬಂಧವು ಬಾಯಾರಿಕೆ ಬಂದವನಿಗೆ ಸಾಗರ ನೀರನ್ನು ಬೊಗಸೆಯಲ್ಲಿ ತಂದುಣಿಸಿದಷ್ಟು ಮಾತ್ರ ಎಂದು ನಾನು ಭಾವಿಸುತ್ತೇನೆ.

ಚಾಮರಾಜನಗರ ಜಿಲ್ಲೆ ಎಂದಾಕ್ಷಣ ಜನರ ಹಬ್ಬಿಸಿದಂತೆ ಇದೊಂದು ಸುಪ್ರಸಿದ್ಧ ಭೂಮಿಯಲ್ಲ. ವೈವಿಧ್ಯತೆಯ ತವರು. ಸಾಂಸ್ಕೃತಿಕತೆಗೆ ಸೆಲೆ. ಹೋರಾಟದ ಕರ್ಮಭೂಮಿ. ಜನಪದಗಳಿಗೊಂದು ಅಕ್ಷಯ ಕಣಜ. ಅಂತೆಯೇ ಜಗತ್ತೇ ಬೆರಗಾಗುವ ರೀತಿಯಲ್ಲಿ ಎರಡು ಬೃಹತ್ತಾದ, ಮಹತ್ತಾದ ಜನಪದ ಕಾವ್ಯಗಳನ್ನು ನೀಡಿದೆ. ಈ ನಿಟ್ಟಿನಲ್ಲಿ ತನ್ನ ಸಾಂಸ್ಕೃತಿಕ ತೆಕ್ಕೆಯಲ್ಲಿ ಜಾನಪದ, ಜನಪದರು ನಾಡಿಗಾಗಿ ಇಂದಿಗೂ ಮಿನುಗುತ್ತಿರುವುದು ನಮ್ಮೆಲ್ಲರಿಗೂ ಶ್ರೇಯವಾದ ವಿಚಾರ ಮತ್ತು ನಾವು ಭಾಗ್ಯವಂತರು ಎನ್ನುವುದರಲ್ಲಿ ಎರಡು ಮಾತಿಲ್ಲ.

****

ಪರಾಮರ್ಶನ ಗ್ರಂಥಗಳು

೧. ಮಲೆಯಮಾದೇಶ್ವರ ಒಂದು ಅಧ್ಯಯನ: : ಡಾ.ಬಿ.ಎಸ್.ಸ್ವಾಮಿ, ನವೀನ ಪ್ರಕಾಶ, ಬೆಂಗಳೂರು, ೧೯೯೩

೨. ಜಾನಪದ ವೈಜ್ಞಾನಿಕ ಕ್ಷೇತ್ರ ಕಾರ್ಯ : ಪಿ.ಸಿ.ಎ. ಪೈ.ಎಸ್.ಜೆ ವ್ಯಾಸಂಗ ವಿಸ್ತರಣ-ಪ್ರಕಟಣ ವಿಭಾಗ, ೧೯೭೮

೩. ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು : ಜೀ.ಶಂ. ಪರಮಶಿವಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೯

೪. ಮಲೆಯ ಮಾದೇಶ್ವರ ಒಂದು ಅಧ್ಯಯನ : ಡಾ.ಬಿ.ಎಸ್. ಸ್ವಾಮಿ, ನವೀನ ಪ್ರಕಾಶನ, ಬೆಂಗಳೂರು, ೧೯೯೩

೫. ಜನಪದ ಸಾಹಿತ್ಯದಲ್ಲಿ ಮಾದೇಶ್ವರಸ್ವಾಮಿ : ಪ್ರೇಮಕುಮಾರಿ.ಎಸ್. ಇತಿಹಾಸ ಸಂಶೋಧನಾ ಸಂಸ್ಥೆ, ೧೯೭೯

೬ ದಕ್ಷಿಣ ಕರ್ನಾಟಕ ಗಂಡಸರ ವಾದ್ಯಗಳು : ಜೀ.ಶಂ. ಪರಮಶಿವಯ್ಯ, ೧೯೭೯

೭. ಮಲೆಯ ಮಾದೇಶ್ವರ 'ಜಾನಪದ ಸಾಹಿತ್ಯ ದರ್ಶನ' ಭಾಗ-೬ : ಕಾಳೇಗೌಡನಾಗವಾರ, ಧಾರವಾಡ, ಕರ್ನಾಟಕ ವಿಶ್ವವಿದ್ಯಾನಿಲಯ, ೧೯೮೮

೮. ಮಂಟೇಸ್ವಾಮಿ ನೀಲಗಾರರು : ಜೀ.ಶಂ.ಪರಮಶಿವಯ್ಯ, ಡಿ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೦.

೯. ಮಲೆನಾಡಿನ ಮಹದೇಶ್ವರ ಕಾವ್ಯ : ಪಿ.ಕೆ.ರಾಜಶೇಖರ, ೧೯೭೦, ಮೈಸೂರು

೧೦. ದಾಸಪ್ಪ, ಜೋಗಪ್ಪ : ಹಿ.ಚಿ ಬೋರಲಿಂಗಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ೧೯೮೧.

೧೧. ತಂಬೂರಿ ಸಂಪ್ರದಾಯದ ಕಾವ್ಯಗಳು : ಹಿರಿಯಣ್ಣ.ಎ.(ಸಂ), ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ೧೯೮೦

೧೨. ಮೈಲಾರಲಿಂಗ -ಖಂಡೋಬಾ : ಎಂ.ಬಿ.ನೇಗಿನಾಳ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರಾವಾಡ, ೧೯೯೨.

೧೩. ಜಾನಪದ ಸಾಹಿತ್ಯ ದರ್ಶನ ಭಾಗ-೫ : ಸುಂಕಾಪುರ.ಎಂ.ಎಸ್. ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರಾವಾಡ, ೧೯೮೦

೧೪. ದಕ್ಷಿಣ ಕರ್ನಾಟಕದ ಜನಪದ ವಾದ್ಯಗಳು : ಕೆ.ರಾಜಶೇಖರ

೧೫. ಕರ್ನಾಟಕದ ಜನಪದ ವಾದ್ಯಗಳು : ಸುಬ್ಬಲಕ್ಷ್ಮಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೯೧.

೧೬. ಗ್ರಾಮದೇವತೆ ಮಾರಮ್ಮ : ನಾಗೇಗಾಡ.ಎಚ್.ಎಲ್. ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು, ೧೯೯೧.

೧೭. ಮೈಲಾರನ ಗೊರವರು : ಜೀ.ಶಂ.ಪರಮಶಿವಯ್ಯ, ಅಯ್.ಬಿ.ಎಚ್. ಪ್ರಕಾಶನ, ಬೆಂಗಳೂರು-೧೯೮೦

೧೮. ದಕ್ಷಿಣ ಕರ್ನಾಟಕದ ಜಾನಪದ ರಂಗಭೂಮಿ : ಡಿ.ಕೆ.ರಾಜೇಂದ್ರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೦.

೧೯. ಮೌಖಿಕ ಕಥನ (ಸಂಶೋಧನಾ ಲೇಖನಗಳು) : ಡಾ.ಜಿ.ಆರ್.ತಿಪ್ಪೇಸ್ವಾಮಿ, ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು, ೨೦೦೫

೨೦. ಕರ್ನಾಟಕ ಜನಪದ ಕಲೆಗಳ ಕೋಶ : ಪ್ರೊ.ಹಿ.ಚಿ.ಬೋರಲಿಂಗಯ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೯.

೨೧. ಚಾಮರಾಜನಗರ ಜಿಲ್ಲೆಯ ಜನಪದ ಕಲಾವಿದರು. : ಮಹದೇವ್ ಶಂಕನಪುರ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ. ೨೦೦೭.

೨೨. ಕನ್ನಡ ಜಾನಪದ ಪ್ರಜ್ಞೆ : ಡಾ.ವೀರಣ್ಣ, ದಂಡೆ, ಕವಿಮಾರ್ಗ ಪ್ರಾಶನ, ಕಲಬುರ್ಗಿ, ೧೯೯೩

೨೩. ಕರ್ನಾಟಕದ ಗ್ರಾಮದೇವತೆಗಳು : ಡಿ.ಲಿಂಗಯ್ಯ, ಡಿ.ಬಿ.ಎಚ್. ಪ್ರಕಾಶನ, ಬೆಂಗಳೂರು-೧೯೮೮

೨೪. ಕರ್ನಾಟಕದ ಲಂಬಾಣಿಗಳು: ಒಂದು ಸಾಂಸ್ಕೃತಿಕ ಅಧ್ಯಯನ : ಖಂಡೋಬಾ.ಪಿ.ಕೆ. ತೇಜಸಿಂಗ್ ರಾಠೋಡ ಮೆಮೋರಿಯಲ್ ಟ್ರಸ್ಟ್, ೧೯೯೧

ಚಾಮರಾಜನಗರ ಜಿಲ್ಲೆಯ ಜನಪದ ಕಲೆಗಳ ಛಾಯಾಚಿತ್ರಗಳು




೧. ನೀಲಗಾರ ತಂಬೂರಿ ಹಾಡುಗಾರಿಕೆಯ ಮುಖ್ಯ ಗಾಯಕರು.



೨. ತಂಬೂರಿ ಹಾಡುಗಾರಿಕೆಯಲ್ಲಿ ತಾಳ, ಗಗ್ಗರ ಡಕ್ಕೆಯನ್ನು ನುಡಿಸುವ ಕಲಾವಿದರು.







೩. ಕಂಸಾಳೆ – ಮಲೆಮಾದೇಶ್ವರ ಪರಂಪರೆಯ ಪ್ರತೀಕ.



೪. ಬೀಸು ಕಂಸಾಳೆಯಲ್ಲಿ ಕುಳಿತುಕೊಂಡು ಕಲೆಯನ್ನು ಪ್ರದರ್ಶನ ಮಾಡುತ್ತಿರುವುದು.







೫. ಬೀಸು ಕಂಸಾಳೆಯ ನೃತ್ಯ ತಂಡ.



೬. ಗೊರವರು – ಚಾಮರಾಜನಗರ ಜಿಲ್ಲೆಯಲ್ಲಿ ಕಡಬಡಯ್ಯ ಎಂದು ಕರೆಯುವರು.







೭. ಗೊರವರ ಕುಣಿತ



೮. ವೀರಭದ್ರನ ಕುಣಿತದ ಕಲಾವಿದರುಗಳು.








೯. ಭಜನೆ ಸಂಪ್ರದಾಯದ ಕಲಾವಿದರ ಪ್ರದರ್ಶನ.



೧೦. ವಾಲಗ–ಡೋಲು ಹೊಡೆಯುವ ರೀತಿ.








೧೧. ನಾದಸ್ವರ ನುಡಿಸುವ ಕಲಾವಿದರು.



೧೨. ನಂದೀಧ್ವಜ ಕುಣಿತದ ಒಂದು ದೃಶ್ಯ.




೧೩. ಪೂಜಾ ಕುಣಿತದ ಮೆರವಣಿಗೆ.



೧೪. ತಮಟೆವಾದನ ಕಲಾವಿದರ ತಂಡ.








೧೫. ಕುರುಬನಕಟ್ಟೆಯಲ್ಲಿರುವ ದೇವಾಲಯದ ದಂಬಡಿ.



೧೬. ಕೀಲುಕುದುರೆ ಕಲೆಯ ಕಲಾವಿದನ ಒಂದು ಭಂಗಿ.



೧೭. ಲಂಬಾಣಿ ಹೆಣ್ಣುಮಗಳ

ಉಡುಗೆ-ತೊಡುಗೆಗಳು.



೧೮. ಗಾರುಡಿಗೊಂಬೆಗಳಲ್ಲಿ ಒಂದು
ಗಂಡು -ಒಂದು ಹೆಣ್ಣು
ಗೊಂಬೆಗಳ ಕುಣಿತದ ದೃಶ್ಯ.



